ಇಂದಿನ ಸದ್ಯದ ಪರಿಸ್ಥಿತಿಯಲ್ಲಿ ಪಾಶ್ಚಿಮಾತ್ಯ ದೇಶಗಳು ಇಡೀ ವಿಶ್ವವನ್ನು ನಿರ್ದೇಶಿಸುವ ಸ್ಥಿತಿಯಲ್ಲಿವೆ. ದುರುದ್ದೇಶದಿಂದ ಸಹಾಯ ಮಾಡುವುದನ್ನೂ ಅಲ್ಲಗಳೆಯಲಾಗದು. ಆದರೆ ಕೆಲವೊಮ್ಮೆ ಕಹಿಗುಳಿಗೆ ಮತ್ತು ಆತ್ಮಘಾತುಕತನವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋದರೆ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಹಕ್ಕುಗಳು ನಂಬಿಕೆ ಹಾಗೂ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತವೆ ಎನ್ನುವ ವಾದದಲ್ಲಿ ಯಾವುದೇ ಹುರುಳಿಲ್ಲ. ಇವೆಲ್ಲವೂ ಒಂದೇ ವಸ್ತುವಿನ ಅಂಶಗಳಿದ್ದಂತೆ. ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶ ಅಥವಾ ಸಂಸ್ಕೃತಿಯ ವ್ಯಾಪ್ತಿಯಿಂದ ಒಂದು ನಿರ್ದಿಷ್ಟ ನಂಬಿಕೆಯನ್ನು ಹರಡಲು ಅವಕಾಶ ನಿರಾಕರಿಸಿರುವುದು ನಿಜವಾದರೆ, ಬೌದ್ಧಧರ್ಮ ಉತ್ತರ ಭಾರತಕ್ಕಷ್ಟೇ ಸೀಮಿತವಾಗಿರಬೇಕಾಗುತ್ತಿತ್ತು. ಕ್ರೈಸ್ತಧರ್ಮ ಮಧ್ಯಪ್ರಾಚ್ಯದ ನೇರಕ್ಕೆ ಮತ್ತು ಇಸ್ಲಾಂ ಅರೇಬಿಯಾಕ್ಕಷ್ಟೇ ಸೀಮಿತವಾಗಿರುತ್ತಿತ್ತು.

ಬಹುಶಃ ದೇಶದಲ್ಲೇ ಕಾರ್ಯಕರ್ತರ ಒತ್ತಡ ಮತ್ತು ಬಾಹ್ಯ ಒತ್ತಡಗಳ ಕಾರಣದಿಂದಾಗಿಯೇ ಭಾರತ ಮಾನವಹಕ್ಕು ಉಲ್ಲಂಘನೆ ಪ್ರಕರಣಗಳ ಬಗ್ಗೆ ನಿಗಾ ಇಡಲು ರಾಷ್ಟ್ರೀಯ ಮಾನವಹಕ್ಕುಗಳ ಆಯೋಗವನ್ನು ನೇಮಿಸಿದೆ.ಸಾಂಸ್ಕೃತಿಕ ಸಂಬಂಧ ಖಂಡಿತವಾಗಿಯೂ ಸಾರ್ವತ್ರಿಕ ಮಾನವಹಕ್ಕುಗಳ ಗುಣಮಟ್ಟ ಹಾಗೂ ಬದ್ಧತೆಗಳಿಗೆ ಅಡ್ಡಿಯಾಗದು. ಮಾನವಹಕ್ಕುಗಳ ಬಗೆಗಿನ ಬರವಣಿಗೆಗಳನ್ನು ಗಮನಿಸಿದರೆ, ಅವುಗಳು ನಿರ್ದಿಷ್ಟ ಪ್ರದೇಶ ಅಥವಾ ಸಂಸ್ಕೃತಿಗೆ ಸೀಮಿತವಾಗಿರುವಂಥವುಗಳೇ ವಿನಃ ಸಾರ್ವತ್ರಿಕವಾಗಿ ಅವುಗಳನ್ನು ಅನ್ವಯಿಸಲಾಗದು. ಮಾನವಹಕ್ಕುಗಳ ಸಂಶಯಾಸ್ಪದ ವೈಫಲ್ಯಕ್ಕೆ ಮೂಲ ಕಾರಣವೆಂದರೆ, ಜಾತ್ಯತೀತ, ಪ್ರಜಾಸತ್ತಾತ್ಮಕ ಹಾಗೂ ಬಹುಮುಖಿ ಮೌಲ್ಯಗಳಿಗೆ ತನ್ನ ಮೂಲವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗದೇ ಇದ್ದುದು. ಇಡೀ ತಲೆಮಾರಿನ ಸಾಮಾಜಿಕ ಕಲ್ಪನೆಯನ್ನೇ ಇಂಥ ಸಿದ್ಧಾಂತಗಳು ಹಿಡಿದಿಟ್ಟುಕೊಂಡಿರುವುದು ವಿಪರ್ಯಾಸ. ಇಂಥ ಕ್ರಮವನ್ನು ಖಂಡಿತವಾಗಿಯೂ ಹತ್ತಿಕ್ಕಬೇಕು. ಒತ್ತಡ ಹೇರುವ ತಂತ್ರದ ಬದಲಾಗಿ, ಕುಟುಂಬ ಸಂಸ್ಕೃತಿಯನ್ನು ಪ್ರತಿಪಾದಿಸುವ ಕೆಲಸ ಆಗಬೇಕು. ಪರಸ್ಪರ ಕೊಡು– ಕೊಳ್ಳುವ ಮನೋಭಾವ ಕುಟುಂಬ ಹಂತದಲ್ಲಿ ಮೊದಲು ಬೆಳೆಯಬೇಕು. ಉದಾಹರಣೆಗೆ ಮಕ್ಕಳಹಕ್ಕುಗಳ ವಿಚಾರಕ್ಕೆ ಬಂದರೆ, ಪ್ರೌಢರು ಯಾವ ಹಕ್ಕುಗಳನ್ನು ಬಯಸುತ್ತಾರೋ, ಮಕ್ಕಳು ಕೂಡಾ ಅದನ್ನೇ ಬಯಸುತ್ತಾರೆ ಎನ್ನುವುದು ವಾಸ್ತವ. ಇಂಥ ದೃಷ್ಟಿಕೋನ ಖಂಡಿತವಾಗಿಯೂ ಹಕ್ಕುಗಳ ಸಂರಕ್ಷಣೆ ನಿಟ್ಟಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಬಹುದೇ ವಿನಃ ಕಾನೂನುಬದ್ಧವಾಗಿ ಇದನ್ನು ಸಾಧಿಸಲಾಗದು. ಇಂಥ ಕಾನೂನಾತ್ಮಕ ರೀತಿಯನ್ನು ನೋಡಿದರೆ ಇದು ಯಾವಾಗಲೂ ಸರ್ಕಾರದ ಹಕ್ಕುಗಳ ವಿರುದ್ಧ ವೈಯಕ್ತಿಕ ಹಕ್ಕುಗಳನ್ನು ಪ್ರತಿಪಾದಿಸಿದಂತಾಗುತ್ತದೆ.

ಮಾನವಹಕ್ಕುಗಳು ನಿಜವಾಗಿಯೂ ನೈತಿಕ ಹಕ್ಕುಗಳಾಗಿದ್ದು, ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಬಗ್ಗೆ ಇರಬೇಕಾದ ಕಳಕಳಿಯಾಗಿದ್ದರೆ, ಅದು ಕೇವಲ ಮಾನವೀಯತೆಯ ದೃಷ್ಟಿಯಿಂದ ಮಾತ್ರ. ಇದು ಪಾಶ್ಚಿಮಾತ್ಯ ದೃಷ್ಟಿಕೋನವಾದ ವ್ಯಕ್ತಿಗತ ಅಂಶಗಳಿಗೆ ಒತ್ತು ನೀಡುವಂಥದ್ದೇ ವಿನಃ ಸಮಷ್ಟಿಯ ಹಿತಕ್ಕೆ ಮಹತ್ವ ನೀಡುವಂಥದ್ದಲ್ಲ. ಅಂದರೆ ಇಂಥ ಬೋಧನೆಗಳು ವೈಯಕ್ತಿಕ ಹಕ್ಕುಗಳನ್ನು ಪ್ರತಿಪಾದಿಸುತ್ತವೆಯೇ ವಿನಃ ದೇಶದ ಹಕ್ಕುಗಳನ್ನಲ್ಲ. ಇದು ಮತ್ತಷ್ಟು ವಿಭಜನೆಗೆ ಕಾರಣವಾಗಬಹುದು. ವಿಭಿನ್ನ ಹಿತಾಸಕ್ತಿ ಹಾಗೂ ಪೈಪೋಟಿಯುತ ವಿಶ್ವದಲ್ಲಿ ಮಾನವಹಕ್ಕುಗಳ ವಿಚಾರದಲ್ಲಿ ಒಂದು ಹಂತದವರೆಗೂ ಭಿನ್ನಾಭಿಪ್ರಾಯಗಳು ಅನಿವಾರ್ಯ. ಎಲ್ಲ ದೇಶಗಳ ಮಾನವಹಕ್ಕು ಪ್ರತಿಪಾದನೆಯ ಉದ್ದೇಶ ಕೂಡಾ ಅವರ ಅಗತ್ಯಕ್ಕೆ ಅನುಗುಣವಾದದ್ದು.

ಉದಾಹರಣೆಗೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ನಡೆಯುತ್ತಿದೆ ಎಂದು ಬೊಬ್ಬಿಡುವ ಅಮೆರಿಕದಲ್ಲೇ ವಾಸ್ತವವಾಗಿ ಮಾನವಹಕ್ಕು ವಿಚಾರದಲ್ಲಿ ವೈಭವದ ಇತಿಹಾಸ ಇಲ್ಲ. ಅಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ಹಲವು ಮಂದಿ ತಜ್ಞರು ಅಭಿಪ್ರಾಯಪಡುವಂತೆ, ಅಮೆರಿಕದಲ್ಲೂ ಮಾನವಹಕ್ಕುಗಳ ಉಲ್ಲಂಘನೆ ವ್ಯಾಪಕವಾಗಿ ನಡೆಯುತ್ತಿದೆ. ಇದನ್ನು ತಡೆಯಲು ನಡೆದ ಎಲ್ಲ ಬಾಹ್ಯ ಒತ್ತಡಗಳೂ ವಿಫಲವಾಗಿವೆ. ಪ್ರತಿ ಜನಾಂಗಗಳಿಗೂ ತಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಮೌಲ್ಯಗಳ ಬಗ್ಗೆ ಅಭಿಮಾನ ಹಾಗೂ ಪ್ರೀತಿ ಇರುತ್ತದೆ. ಇವುಗಳಲ್ಲಿ ಕೆಲ ಲೋಪಗಳು ಕಂಡುಬಂದರೂ ಅದನ್ನು ಪತ್ತೆ ಮಾಡಿ ಕಿತ್ತುಹಾಕಲು ಕೆಲ ಸಮಯ ಬೇಕಾಗಬಹುದು. ಇದು ಮಾನವಹಕ್ಕುಗಳ ವಿಚಾರಕ್ಕೂ ಅನ್ವಯಿಸುತ್ತದೆ. ಭಾರತದ ಪರಿಸ್ಥಿತಿ ಬಡ, ಅಭಿವೃದ್ಧಿಶೀಲ ಹಾಗೂ ಸಾಂಸ್ಕೃತಿಕ ವೈವಿಧ್ಯವಿದ್ದರೂ,

ಮೂಲಭೂತ ಅವಶ್ಯಕತೆಗಳಾದ ಆಹಾರ, ಸೂರು ಮತ್ತು ಬಟ್ಟೆಯ ಅಗತ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಆಧುನಿಕ ಅವಶ್ಯಕತೆಗಳಾದ ವಿದ್ಯುತ್, ರಸ್ತೆ, ಶುದ್ಧ ಕುಡಿಯುವ ನೀರು ಮತ್ತು ನಾಗರಿಕ ಸ್ವಾತಂತ್ರ್ಯವೂ ಇದರಲ್ಲಿ ಸೇರುತ್ತದೆ. ಈ ವಿಚಾರದಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬನ ಹಕ್ಕನ್ನು ಉಲ್ಲಂಘಿಸಲಾಗದು. ಮಾನವಹಕ್ಕುಗಳ ವಿಯೆನ್ನಾ ಸಮಾವೇಶದಲ್ಲಿ, ಪ್ರಜಾಪ್ರಭುತ್ವ, ಅಭಿವೃದ್ಧಿ ಮತ್ತು ಮಾನವಹಕ್ಕುಗಳು ಎಲ್ಲವೂ ಪರಸ್ಪರ ಸಂಬಂಧ ಇರುವ ಪರಿಕಲ್ಪನೆಗಳು ಮತ್ತು ಆದರ್ಶಗಳು ಎನ್ನುವ ಅಂಶವನ್ನು ಎಲ್ಲ ರಾಷ್ಟ್ರಗಳೂ ಒಪ್ಪಿಕೊಂಡಿವೆ.

### 11. ಪ್ರವಾಸೋದ್ಯಮ: ಅವಕಾಶ ಮತ್ತು ಸಮಸ್ಯೆ

ಪ್ರಮುಖವಾಗಿ ಅಭಿವೃದ್ಧಿಪಡಿಸಬೇಕಾದ ಅಂಶಗಳೆಂದರೆ:

1. ವಿಶ್ವದ ಬೃಹತ್ ಉದ್ಯಮಗಳಲ್ಲಿ ಪ್ರವಾಸೋದ್ಯಮವೂ ಒಂದು

2. ಪ್ರವಾಸೋದ್ಯಮದ ಪ್ರಯೋಜನಗಳು

3. ತಾರತಮ್ಯದ ಪ್ರವಾಸೋದ್ಯಮದ ಅವಗುಣಗಳು

4. ಪ್ರಯೋಜನವಾಗುವ ರೀತಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಇರುವ ಸಮಸ್ಯೆಗಳು

5. ಭಾರತದ ಸ್ಥಿತಿಗತಿ: ಪ್ರವಾಸೋದ್ಯಮ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳಿದ್ದರೂ, ಪ್ರವಾಸೋದ್ಯಮ ಭಾರತದಲ್ಲಿ ಯಶಸ್ವಿಯಾಗಿಲ್ಲ. ಇದರ ಕಾರಣಗಳು ಮತ್ತು ಪರಿಸ್ಥಿತಿ ಸುಧಾರಿಸಲು ಸಲಹೆಗಳು.

6. ದೇಶದ ಆರ್ಥಿಕ ಅಭಿವೃದ್ಧಿಗೆ ಪ್ರವಾಸೋದ್ಯಮ ಅಭಿವೃದ್ಧಿ ಅಗತ್ಯ.




Universal Coaching Centre
www.shikarat.com

ಪ್ರವಾಸೋದ್ಯಮ ಕ್ಷೇತ್ರ ಇಂದು ವಿಶ್ವದ ಅತಿದೊಡ್ಡ ಉದ್ಯಮಕ್ಷೇತ್ರವಾಗಿ ಬೆಳೆದಿದೆ. ಕಳೆದ ಎರಡು ದಶಕಗಳಲ್ಲಿ ಕ್ಷಿಪ್ರ ಅಭಿವೃದ್ಧಿಯನ್ನು ಸಾಧಿಸಿಸಿದ್ದು, ವಿಶ್ವದ ಒಟ್ಟು ಉತ್ಪಾದನೆಯ ಶೇಕಡ ಏಳರಷ್ಟು ಆದಾಯ ಪ್ರವಾಸೋದ್ಯಮ ಮೂಲದಿಂದ ಬರುತ್ತದೆ. ವಿಶ್ವಾದ್ಯಂತ ಸುಮಾರು 15 ಕೋಟಿ ಮಂದಿ ಈ ಕ್ಷೇತ್ರವನ್ನು ಅವಲಂಬಿಸಿದ್ದಾರೆ. ಎರಡನೇ ಮಹಾಯುದ್ಧದ ಬಳಿಕ ಈ ಕ್ಷೇತ್ರ ಪ್ರಮುಖ ಆದಾಯದ ಮೂಲವಾಗಿ ಮತ್ತು ಅಭಿವೃದ್ಧಿಯ ಸಾಧ್ಯತೆ ಇರುವ ಕ್ಷೇತ್ರವಾಗಿ ರೂಪುಗೊಂಡಿತು. ಇದು ಇಂದಂತೂ ವಿಶಿಷ್ಟ ನೈಸರ್ಗಿಕ ಪುನರ್ಬಳಕೆ ಕೈಗಾರಿಕಾ ಕ್ಷೇತ್ರವಾಗಿ ಪರಿಗಣಿಸಲ್ಪಟ್ಟಿದೆ.

ಪ್ರವಾಸೋದ್ಯಮ ಎಂದರೆ, ಒಂದೆಡೆಯಿಂದ ಇನ್ನೊಂದು ಕಡೆಗೆ ವಿಹಾರಾರ್ಥವಾಗಿ ಪಯಣಿಸುವುದು. ದೈನಂದಿನ ಬದುಕಿನ ಏಕತಾನತೆನ್ನು ನಿವಾರಿಸಿಕೊಳ್ಳುವ ಸಲುವಾಗಿ ಬೇರೆ ಸ್ಥಳಕ್ಕೆ ಹೋಗುವುದು. ವಿವಿಧ ದೇಶಗಳ ಜನರನ್ನು ಒಂದೆಡೆಗೆ ಆಕರ್ಷಿಸುವ ವಿಶಿಷ್ಟ ಶಕ್ತಿ ಈ ಉದ್ಯಮಕ್ಕಿದೆ. ಇದರ ಜತೆಗೆ ವಿಭಿನ್ನ ಪ್ರದೇಶಗಳ ಜನಜೀವನವನ್ನು ಒಂದೆಡೆಗೆ ಕರೆತಂದು, ಪರಸ್ಪರ ನಿಕಟ ಸಂಬಂಧ ಬೆಸೆಯುವ ಮತ್ತು ಬದುಕಿನ ಇತರ ಅಂಶಗಳ ಬಗ್ಗೆ, ಜೀವನಶೈಲಿಯ ಬಗ್ಗೆ ಪರಸ್ಪರ ತಿಳಿದುಕೊಳ್ಳಲು ಕೂಡಾ ಇದು ಸಹಕಾರಿ. ಇದು ಪ್ರಕೃತಿ ಸೌಂದರ್ಯ ಸವಿಯಲು, ಒಂದು ದೇಶದ ಭವ್ಯ ಪರಂಪರೆಯನ್ನು ತಿಳಿದುಕೊಳ್ಳಲು, ಪರಸ್ಪರ ದೇಶಗಳ ಜನರ ಜೀವನಶೈಲಿಯನ್ನು ಅರಿತುಕೊಳ್ಳಲು ಇದು ಸಹಕಾರಿಯಾಗಿದೆ. ಇದರಿಂದ ಗಳಿಸಿಕೊಂಡ ಜ್ಞಾನ ಮತ್ತು ಅನುಭವದಿಂದಾಗಿ ಹೆಚ್ಚಿನ ತಿಳಿವಳಿಕೆ ಮತ್ತು ಸಹನೆಗೂ ಇದು ಕಾರಣವಾಗುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ವಿಶ್ವಶಾಂತಿಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಗಮನಾರ್ಹ ಕೊಡುಗೆ ನೀಡಬಹುದಾಗಿದೆ. ಪ್ರವಾಸೋದ್ಯಮ ಕ್ಷೇತ್ರ ಆರ್ಥಿಕತೆಗೆ ನೀಡುವ ಕೊಡುಗೆಯೂ ಗಣನೀಯ. ವಿಶ್ವಸಂಸ್ಥೆ ನಡೆಸಿದ ಒಂದು ಅಧ್ಯಯನದ ಪ್ರಕಾರ, ಅಭಿವೃದ್ಧಿಶೀಲ ರಾಷ್ಟ್ರಗಳು ಈ ಕ್ಷೇತ್ರದಿಂದ ಅತ್ಯಾಕರ್ಷಕ ಲಾಭ ಪಡೆಯಬಹುದಾಗಿದ್ದು, ಇದು ದೇಶದ ಆದಾಯವನ್ನು ಗಣನೀಯವಾಗಿ ಹೆಚ್ಚಿಸಲು ಸಹಕಾರಿಯಾಗಲಿದೆ. ಜನತೆಗೆ ದೇಶದ ಬ್ಯಾಲೆನ್ಸ್ ಆಫ್ ಪೇಮೆಂಟ್ ಸ್ಥಿತಿಗತಿ ಸುಧಾರಿಸಲು ಕೂಡಾ ಅನುಕೂಲವಾಗಲಿದೆ. ದೇಶದಲ್ಲಿ ಆರ್ಥಿಕತೆ ನಿರಂತರವಾಗಿ ಚಲನೆಯಲ್ಲಿರುವಂತೆ ನೋಡಿಕೊಳ್ಳಲು, ಆಂತರಿಕ ಪ್ರವಾಸೋದ್ಯಮವನ್ನು ಕೂಡಾ ಅಭಿವೃದ್ಧಿಪಡಿಸಲು ಅವಕಾಶವಿದೆ. ಪ್ರವಾಸೋದ್ಯಮದಿಂದ ಉದ್ಯೋಗ ಸೃಷ್ಟಿಯಾಗುತ್ತದೆ ಮತ್ತು ದೇಶದ ಉದ್ಯಮಶೀಲ ಸಂಪತ್ತು ವೃದ್ಧಿಗೂ ಇದು ಸಹಕರಿಸುತ್ತದೆ ಪ್ರವಾಸೋದ್ಯಮದಿಂದ ಲಾಭಗಳಿರುವಂತೆ ಕೆಲ ಅಡ್ಡಿಪರಿಣಾಮಕ್ಕೂ ಇದು ಕಾರಣವಾಗುತ್ತದೆ.

ಪ್ರವಾಸೋದ್ಯಮವು ಸಾಮಾಜಿಕ, ಸಾಂಸ್ಕೃತಿಕ ಅಥವಾ ಪರಿಸರ ಹಾನಿಗೆ ಕಾರಣವಾಗಬಹುದು. ಅದರಲ್ಲೂ ಪ್ರವಾಸೋದ್ಯಮದಿಂದ ಆಗುವ ದೊಡ್ಡ ದುಷ್ಪರಿಣಾಮವೆಂದರೆ ಪರಿಸರದ ಮೇಲೆ. ಹೆಚ್ಚಿನ ಪ್ರವಾಸಿಗಳನ್ನು ಆಕರ್ಷಿಸುವ ದೃಷ್ಟಿಯಿಂದ ಹಲವಾರು ರೆಸಾರ್ಟ್‌ಗಳನ್ನು ನಿರ್ಮಿಸಲಾಗುತ್ತದೆ. ಬಹುತೇಕ ಇಂಥ ರೆಸಾರ್ಟ್‌ಗಳಿಗೆ ಸ್ಥಳೀಯ ವಾಸ್ತುಶಿಲ್ಪ ಶೈಲಿಗಳನ್ನೂ ಬಳಸುವುದಿಲ್ಲ ಅಥವಾ ಪರಿಸರದ ಮೇಲಾಗುವ ಪರಿಣಾಮವನ್ನೂ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಇಂಥ ರೆಸಾರ್ಟ್‌ಗಳ ತ್ಯಾಜ್ಯ ನೀರು ಅಥವಾ ಘನತ್ಯಾಜ್ಯ ವಿಲೇವಾರಿ ವ್ಯವಸ್ಥೆಗಳು, ವಿವೇಚನಾರಹಿತ ನಿರ್ಮಾಣಗಳು ಹಾಗೂ ಪ್ರವಾಸಿಗಳಿಗೆ ಕಲ್ಪಿಸುವ ಮನೋರಂಹನಾ ವ್ಯವಸ್ಥೆಗಳು ಪರಿಸರದ ನೈಸರ್ಗಿಕ ವ್ಯವಸ್ಥೆಯನ್ನು ಹಾಳುಮಾಡುತ್ತವೆ. ಪರಿಸರ ಸಂಪತ್ತಿನ ಅತಿಯಾದ ಬಳಕೆಯು ವಾತವರಣದ ಸಮತೋಲನದ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಹಿಮಾಲಯ ಕಣಿವೆಯನ್ನು ಅಧಿಕವಾಗಿ ಬಳಸಿಕೊಳ್ಳುವುದು, ನಂದಾದೇವಿ ಕಣಿವೆ ಬಳಕೆಯಂತೆ ವಿನಾಶದ ಅಂಚಿಗೆ ಒಯ್ಯುವ ಎಲ್ಲ ಅಪಾಯಗಳೂ ಇವೆ. ಹಿಮಾಲಯದ ಕಣಿವೆ ಪ್ರದೇಶ ಹೇಗೆ ಖಾಲಿ ಆಹಾರ ಪೊಟ್ಟಣಗಳಿಂದ ಆವೃತವಾಗಿವೆ ಎನ್ನುವುದನ್ನು ನೋಡಿದರೆ, ಅದರ ಅಪಾಯವನ್ನು ಅಂದಾಜಿಸಬಹುದು.

ರಮ್ಯ, ಸುಂದರ ಹಾಗೂ ನೈಸರ್ಗಿಕ ಪ್ರಕೃತಿಗೆ ಹೆಸರಾಗಿದ್ದ ಶಿಮ್ಲಾ ಗಿರಿಧಾಮಕ್ಕೆ ಇಂದು ಹೇಗೆ ದಟ್ಟ ಮಾಲಿನ್ಯದ ಪ್ರಭಾವದಿಂದ ಮುಸುಕು ಆವರಿಸಿದೆಯೋ ಹಾಗೆ ದುಷ್ಪರಿಣಾಮವನ್ನು ಬೀರುತ್ತವೆ. ಪ್ರವಾಸಿಗಳ ಪ್ರವಾಹ ಹಾಗೂ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಹೆಚ್ಚುಹೆಚ್ಚು ನಿರ್ಮಾಣವಾಗುತ್ತಿರುವ ವಸತಿಗೃಹಗಳಿಂದಾಗಿ, ಹಲವಷ್ಟು ಕಡೆಗಳಲ್ಲಿ ಭೂಕುಸಿತವೂ ಸಂಭವಿಸಿವೆ. ಇದೀಗ ಶಿಮ್ಲಾ ಕಾಂಕ್ರಿಟ್ ಕಾಡಾಗಿ ಪರಿವರ್ತನೆಯಾಗುತ್ತಿದ್ದು, ಕಾಲಘಟ್ಟದಲ್ಲಿ ವಿನಾಶದ ಅಂಚಿಗೆ ಹೋಗುತ್ತಿದೆ. ಆದರೆ ಇದರ ಮುಂದಾಲೋಚನೆಯಿಲ್ಲದೇ ಸ್ಥಳೀಯ ಆಡಳಿತ ಹಾಗೂ ದುರಾಸೆಯ ಹೋಟೆಲ್ ಉದ್ಯಮಿಗಳು ಪರಿಸರ ವಿನಾಶದ ನಿಟ್ಟಿನಲ್ಲಿ ಅವ್ಯಾಹತವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಜತೆಗೆ ಹಣದ ಆಸೆಗಾಗಿ ನಿಸರ್ಗ ಸೌಂದರ್ಯವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಆದರೆ ದುರದೃಷ್ಟವಶಾತ್ ಇಂಥ ಕೃತ್ರಿಮ ಬೆಳವಣಿಗೆಯಿಂದಾಗಿ ಪ್ರವಾಸಿಗಳು ಶಿಮ್ಲಾದಿಂದ ವಿಮುಖವಾಗುತ್ತಿರುವುದು ವಾಸ್ತವ.

ಹಲವಾರು ಪ್ರವಾಸಿಗಳ ಆಕರ್ಷಣೆಯ ಕೇಂದ್ರಬಿಂದು ಎನಿಸಿದ ನಿಸರ್ಗಧಾಮ ಅಥವಾ ವನ್ಯಧಾಮಗಳಲ್ಲಿ ಕೂಡಾ ಅಪಾಯದ ಸಾಧ್ಯತೆ ಅಧಿಕ. ಪ್ರವಾಸಿ ವಾಹನಗಳು ಮತ್ತು ಸಂದರ್ಶಕರು ನಡೆದಾಡುವುದರಿಂದ ನೈಸರ್ಗಿಕ ಭೂವೈವಿಧ್ಯ ನಾಶವಾಗುತ್ತಿದೆ. ಇದರಿಂದಾಗಿ ಪ್ರಾಣಿಗಳ ಆಹಾರ ಉಣಿಸುವಿಕೆ ಪದ್ಧತಿಗೆ ತೊಂದರೆ ಉಂಟಾಗುವುದಲ್ಲದೇ ಹಲವೆಡೆ ಇದು ಭೂಕುಸಿತಕ್ಕೂ ಕಾರಣವಾಗುತ್ತದೆ. ಅತಿಯಾದ ಪರಿಸರ ಮಾಲಿನ್ಯವು ಪ್ರಾಣಿಗಳ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಅಂತಿಮವಾಗಿ ಆ ತಾಣ ಆಕರ್ಷಣೆ ಕಳೆದುಕೊಳ್ಳುತ್ತದೆ. ವಿಶ್ವದ ಏಳು ಅದ್ಭುತಗಳಲ್ಲಿ ಒಂದು ಎನಿಸಿದ ಖಜುರಾಹೋ ದೇವಾಯಗಳು ಅಧಿಕ ಸಂಖ್ಯೆಯ ಪ್ರವಾಸಿಗಳ ಕಾರಣದಿಂದ ಹಂತಹಂತವಾಗಿ ನಾಶವಾಗುತ್ತಿವೆ.

ಅಂತೆಯೇ ಕೆಲ ಸಾಮಾಜಿಕ ಮತ್ತು ಸಾಂಸ್ಕೃತಿಕ ದುಷ್ಪರಿಣಾಮಗಳಿಗೂ ಪ್ರವಾಸೋದ್ಯಮ ಕಾರಣವಾಗುತ್ತಿದೆ. ಪ್ರವಾಸೋದ್ಯಮ ಹಲವು ಪ್ರಕರಣಗಲ್ಲಿ ಹೊಸ ಜೀವನಶೈಲಿಯನ್ನು ಪರಿಚಯಿಸುತ್ತದೆ. ಅವರಿಗೆ ಮನೆಯ ವಾತಾವರಣವನ್ನು ಕಲ್ಪಿಸುವ ನಿಟ್ಟಿನಲ್ಲಿ ಪ್ರವಾಸಿಗಳ ಇಚ್ಛಾನುಸಾರ ವ್ಯವಸ್ಥೆಗಳನ್ನು ಮಾಡಲಾಗುತ್ತದೆ. ಇಂಥ ಭಿನ್ನ ಸಂಸ್ಕೃತಿ ರೂಪುಗೊಳ್ಳುತ್ತಿರುವ ಬಗ್ಗೆ ಹಲವು ಕಡೆಗಳಲ್ಲಿ ಜನರಿಂದ ಅಸಮಾಧಾನ ವ್ಯಾಪಕವಾಗಿ ವ್ಯಕ್ತವಾಗುತ್ತಿದೆ. ಹಲವೆಡೆಗಳಲ್ಲಿ ಸ್ಥಳೀಯರು ಕೂಡಾ ತಮ್ಮ ಪರಂಪರಾಗತ ಮೌಲ್ಯಗಳನ್ನು ಉಲ್ಲಂಘಿಸಿ, ವಿದೇಶಿ


www.shikarat.com

ಮೌಲ್ಯಗಳನ್ನು ಅನುಕರಿಸುವ ಪ್ರಯತ್ನ ಮಾಡುತ್ತಾರೆ. ಹಣದ ಉದ್ದೇಶದಿಂದ ಕೆಲ ಸ್ಥಳೀಯ ಬಡವರು, ತಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರದರ್ಶಿಸಿ, ಹಣ ಗಳಿಸುವ ದಂಧೆಯಲ್ಲೂ ತೊಡಗುತ್ತಾರೆ. ಇದಕ್ಕಿಂತಲೂ ಕೆಟ್ಟ ಪರಿಣಾಮವೆಂದರೆ, ಶ್ರೀಮಂತ ಪ್ರವಾಸಿಗಳ ತುಂಬಿದ ಪರ್ಸ್‌ಗಳು, ಸ್ಥಳೀಯ ಯುವಕ ಯುವತಿಯರನ್ನು ಪ್ರವಾಸಿಗರ ಆಕಾಂಕ್ಷೆಗಳನ್ನು ಪೂರೈಸುವ ವಸ್ತುಗಳಾಗಿ ಬದಲಾಯಿಸುತ್ತವೆ.

ಉದಾಹರಣೆಗೆ ನೈಸರ್ಗಿಕವಾಗಿ ಅತ್ಯಂತ ರಮಣೀಯವಾದ ಥಾಯ್ಲೆಂಡ್ ದೇಶ, ಇಂದು ವಿಶ್ವಾದ್ಯಂತ ಲೈಂಗಿಕ ಪ್ರವಾಸೋದ್ಯಮದ ಅತ್ಯಂತ ಪ್ರಶಸ್ತ ತಾಣವಾಗಿ ಕುಖ್ಯಾತಿ ಪಡೆದಿದೆ. ಇಂಥ ಕುಖ್ಯಾತಿಗಳು ದೇಶದ ಹಲವು ಮಂದಿ ಸೂಕ್ಷ್ಮ ಮನೋಭಾವದ ವ್ಯಕ್ತಿಗಳ ಹೆಮ್ಮೆಗೆ ಧಕ್ಕೆ ತರುತ್ತದೆ. ಇಂಥ ವ್ಯಕ್ತಿಗಳು ಎಂದಿಗೂ ಅಧಿಕಾರವ್ಯವಸ್ಥೆಯ ಬಗ್ಗೆ ಗೌರವ ಹೊಂದಿರುವುದಿಲ್ಲ ಮತ್ತು ಲೈಂಗಿಕ ಆಕರ್ಷಣೆಯನ್ನು ಹಣಕ್ಕಾಗಿ ಬಳಸಿಕೊಳ್ಳುವವರ ಬಗ್ಗೆ ಇಡೀ ಸಮಾಜ ಅಸಹನೆ ಮನೋಭಾವ ಬೆಳೆಸಿಕೊಳ್ಳಲು ಕಾರಣವಾಗುತ್ತದೆ. ಇಂಥ ಸಮಸ್ಯೆಗಳು ಭಾರತದಲ್ಲಿ ಅಷ್ಟು ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತಿಲ್ಲವಾದರೂ, ಅಲ್ಲೊಂದು ಇಲ್ಲೊಂದು ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಮಸಾಜ್ ಮತ್ತಿತರ ಸೌಲಭ್ಯ ನೀಡುವ ನೆಪದಲ್ಲಿ ಆರೋಗ್ಯ ರೆಸಾರ್ಟ್‌ಗಳು, ಶ್ರೀಮಂತರಿಗೆ ಅವರಿಗೆ ಅಗತ್ಯವಾದ ಲೈಂಗಿಕ ಸೇವೆಗಳನ್ನು ನೀಡುವ ರೆಸಾರ್ಟ್‌ಗಳು ಎಂದು ಕುಖ್ಯಾತಿಗೆ ಪಾತ್ರವಾಗಿವೆ. ವಯಸ್ಸಾದ ಮತ್ತು ಯುವ ಮಹಿಳಾ ಪ್ರವಾಸಿಗರು ಕೂಡಾ ಇಂಥ ಸೇವೆಗಳನ್ನು ಪಡೆದುಕೊಳ್ಳುತ್ತಾರೆ. ಪ್ರವಾಸೋದ್ಯಮ ಕ್ಷೇತ್ರಕ್ಕೆ ಧಕ್ಕೆಯಾಗಬಹುದು ಎಂಬ ಕಾರಣಕ್ಕೆ ಇದನ್ನು ತಡೆಯಲು ಸಂಬಂಧಪಟ್ಟವರು ಮುಂದಾಗುತ್ತಿಲ್ಲ. ಇದಕ್ಕಿಂತಲೂ ಕೆಟ್ಟ ಅಂಶವೆಂದರೆ ಹಣದ ಸಲುವಾಗಿ ಬಾಲ ವೇಶ್ಯಾವಾಟಿಕೆಯನ್ನೂ ಪ್ರೋತ್ಸಾಹಿಸುತ್ತಿರುವುದು.

ಕೆಲವೊಮ್ಮೆ ಸರ್ಕಾರ ಕೂಡಾ ರಾಷ್ಟ್ರೀಯ ಆದಾಯ ಹೆಚ್ಚಿಸಿಕೊಳ್ಳುವ ಸಲುವಾಗಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುತ್ತದೆ. ಇಂಥ ಮನೋಭಾವ ಖಂಡಿಯವಾಗಿಯೂ ವಿನಾಶಕಾರಿ ಪರಿಣಾಮಗಳಿಗೆ ಕಾರಣವಾಗುತ್ತದೆ. ಮಾಲ್ಡೀವ್ಸ್ ದ್ವೀಪದಲ್ಲಿ, ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಂಡ ಕ್ರಮದಿಂದಾಗಿ ಅಮೂಲ್ಯ ಹವಳ ಸಂಪನ್ಮೂಲ ನಷ್ಟವಾಗಿದೆ. ಸಮುದ್ರಮಟ್ಟ ಹೆಚ್ಚುವುದನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಹವಳ ಸಂಪತ್ತು ಇದೀಗ ವಿನಾಶದ ಅಂಚಿನಲ್ಲಿದ್ದು, ಹೆಚ್ಚಿನ ಅಪಾಯದ ಸಾಧ್ಯತೆಯನ್ನು ಸೃಷ್ಟಿಸಿದೆ.

ಪ್ರವಾಸೋದ್ಯಮದಿಂದ ಎದುರಾಗುವ ಸಂಭಾವ್ಯ ಸಮಸ್ಯೆಗಳನ್ನು ಬಗೆಹರಿಸುವುದು ಕೂಡಾ ಅಗತ್ಯ. ಒಮ್ಮೆ ನೈಸರ್ಗಿಕ ಸಂಪನ್ಮೂಲ ಹಾಗೂ ಐತಿಹಾಸಿಕ ಸ್ಮಾರಕಗಳು ನಷ್ಟವಾದರೆ ಇಡೀ ಪ್ರವಾಸೋದ್ಯಮವೇ ಶಿಥಿಲವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವ ಪ್ರವಾಸೋದ್ಯಮ ಕೈಗಾರಿಕೆ ಜಾಗೃತವಾಗಿದ್ದು, ಪ್ರವಾಸೋದ್ಯಮ ಸಂಬಂಧಿತ ಪರಿಸರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದೆ. ಆಲ್ಪ್ಸ್‌ನಲ್ಲಿ ಪರಿಸರ ಸ್ನೇಹಿ ಅಥವಾ ಹಸಿರು ಪ್ರವಾಸೋದ್ಯಮಕ್ಕೆ ಒತ್ತು ನೀಡಲಾಗುತ್ತಿದೆ. ಈ ಪ್ರದೇಶ ಅತ್ಯಂತ ಪ್ರವಾಸಿ ಆಕರ್ಷಣಾ ಕೇಂದ್ರವಾಗಿದ್ದು, ವಿಶ್ವದ ಪ್ರವಾಸೋದ್ಯಮ ಆದಾಯದ ಶೇಕಡ 25ರಷ್ಟು ಆದಾಯ ಇಲ್ಲಿ ಸೃಷ್ಟಿಯಾಗುತ್ತದೆ. ಆದರೆ ಇದು ಅತಿಬಳಕೆಯಿಂದಾಗಿ ತೀವ್ರ ಹಾನಿಗೀಡಾಗುತ್ತಿರುವ ಪ್ರದೇಶವಾಗಿ ಈಗ ಮಾರ್ಪಟ್ಟಿದೆ. ಇಂಥ ಅತಿಬಳಕೆಯ ತಡೆಗೆ, ಯೋಜನಾಬದ್ಧವಾದ ಮಿತಿಯಲ್ಲಿ, ಪರಿಸರ ಸಮತೋಲನ ಹಾಗೂ ಆರೋಗ್ಯ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರವಾಸೋದ್ಯಮವನ್ನು ಬೆಳೆಸುವ ಅನಿವಾರ್ಯತೆ ಇದೆ.

ಸಮಾಜದಲ್ಲಿ ಬಲವಾಗಿ ಬೇರೂರಿರುವ ಸಾಂಸ್ಕೃತಿಕ ಪರಂಪರೆಗೆ ಹಾನಿ ಮಾಡಲು ಪ್ರವಾಸೋದ್ಯಮಕ್ಕೆ ಅವಕಾಶ ನೀಡಬಾರದು. ಪ್ರವಾಸೋದ್ಯಮದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಾನಿಯನ್ನು ಅಂದಾಜಿಸುವುದು ಕಷ್ಟ. ಸಾಂಸ್ಕೃತಿಕ ಮೌಲ್ಯಗಳು ಈಗಾಗಲೇ ಹೊಸ ತಂತ್ರಜ್ಞಾನ ಹಾಗೂ ಸಂಪರ್ಕದಿಂದ ಈಗಾಗಲೇ ವಿನಾಶದ ಅಂಚಿನಲ್ಲಿದ್ದು, ಸ್ಥಳೀಯರು ಸಾಂಸ್ಕೃತಿಕ ಪ್ರದರ್ಶಕಗಳಾಗಿ ಮಾರ್ಪಟ್ಟಾಗ ಈ ಗುಣಮಟ್ಟ ಮತ್ತಷ್ಟು ಕುಸಿಯುತ್ತದೆ. ಹರ್ಯಾಣಾ ಸರ್ಕಾರ ಇದೀಗ ಸಾಂಸ್ಕೃತಿಕ ಮತ್ತು ಪರಂಪರೆ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡುತ್ತಿದೆ.

ಇದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ಆತಂಕಕಾರಿ ಅಂಶವೆಂದರೆ, ಹೆಚ್ಚು ಹೆಚ್ಚು ಪ್ರವಾಸಿಗಳನ್ನು ಆಕರ್ಷಿಸುವ ನಿಟ್ಟಿನಲ್ಲಿ ರಾಜ್ಯ ಪ್ರವಾಸೋದ್ಯಮ ವಿಭಾಗ, ನೆಲದ ಸಂಸ್ಕೃತಿಯನ್ನು ಹಾಳುಗೆಡುವುತ್ತಿರುವುದು. ಇದಕ್ಕೆ ಉತ್ತಮ ನಿರ್ದಶನವೆಂದರೆ, ವಿದೇಶಿ ಪ್ರವಾಸಿಗರನ್ನು ಇಲ್ಲಿನ ಮನೆಗಳಿಗೆ ಆಹ್ವಾನಿಸುವುದು. ಅವರ ಜತೆಯೇ ಬೆರೆಯುವಂತೆ ಮಾಡುವುದು ಇದರ ಉದ್ದೇಶ. ಇದರಿಂದ ಸ್ಥಳೀಯರು ವಿದೇಶಿ ಪ್ರವಾಸಿಗರ ಜೀವನಶೈಲಿ ಮತ್ತು ಜೀವನವನ್ನು ಅನುಕರಿಸುವ ಅಪಾಯ ದಟ್ಟವಾಗಿದೆ. ಹೀಗೆ ಬರುವ ಬಹುತೇಕ ಪ್ರವಾಸಿಗರು ಸಮಾಜ ಹಾಗೂ ಬದುಕಿನ ಬಗ್ಗೆ ಭೌತಿಕ ದೃಷ್ಟಿಕೋನವನ್ನಷ್ಟೇ ಹೊಂದಿರುತ್ತಾರೆ.

ಪ್ರವಾಸೋದ್ಯಮ ಲಾಭದಾಯಕ ಉದ್ಯಮವಾಗಿ ಮುಂದುವರಿಯುವ ಜತೆಗೆ ಸುರಕ್ಷತೆಗೂ ಆದ್ಯತೆ ನೀಡಬೇಕು. ಈ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಮಾರಕವಾಗುವ ಅಂಶಗಳನ್ನು ಗಮನಿಸಬೇಕಾದ್ದು ಅಗತ್ಯ.

ದೇಶದ ಸಾಮಾನ್ಯ ಅಸ್ಥಿರತೆ ಕೂಡಾ ಪ್ರವಾಸೋದ್ಯಮದ ಅವಕಾಶಕ್ಕೆ ಹಾನಿ ಮಾಡುತ್ತಿದೆ. ರಾಜಕೀಯ ಪ್ರಕ್ಷುಬ್ಧತೆ ಅದರಲ್ಲೂ ಪ್ರಮುಖವಾದ ಪಾತ್ರ ವಹಿಸುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಿಂಸಾಚಾರ ಹೆಚ್ಚುತ್ತಿದ್ದು, ಇದರ ಜತೆಗೆ ಭಯೋತ್ಪಾದಕ ಚಟುವಟಿಕೆಗಳು ಕೂಡಾ ಪ್ರವಾಸೋದ್ಯಮಕ್ಕೆ ತೊಂದರೆಯುಂಟು ಮಾಡುತ್ತಿದೆ. ಶ್ರೀಲಂಕಾ, ಇಸ್ರೇಲ್, ಪ್ಯಾಲಸ್ಟೀನ್ ಮತ್ತು ಅಫ್ಘಾನಿಸ್ತಾನದಂಥ ದೇಶಗಳು ಭಯೋತ್ಪಾದಕ ಬೆದರಿಕೆಗಳ ಸಂತ್ರಸ್ತ ರಾಷ್ಟ್ರಗಳಾಗಿವೆ.

ಸುಧೀರ್ಘ ಅವಧಿಯಲ್ಲಿ ಇಂಥ ಪರಿಸ್ಥಿತಿ ಇರುವುದರಿಂದ, ಅಲ್ಲಿನ ಪ್ರವಾಸೋದ್ಯಮಕ್ಕೆ ಭಾರಿ ಪ್ರಮಾಣದ ಹಾನಿಯಾಗಿದೆ. ಈಜಿಪ್ಟ್ ದೇಶದ ಪ್ರವಾಸೋದ್ಯಮ ಆದಾಯ, ಅವರ ಸೂಯೆಜ್ ಕಾಲುವೆಯ ಆದಾಯಕ್ಕಿಂತಲೂ ಅಧಿಕ. ಆದರೆ ಮುಸ್ಲಿಂ ಮೂಲಭೂತವಾದಿಗಳ ಕೃತ್ಯಗಳಿಂದಾಗಿ ಆ ದೇಶದ ಪ್ರವಾಸೋದ್ಯಮ ಆದಾಯಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಭಯೋತ್ಪಾದಕ ಚಟುವಟಿಕೆಗಳು ಮತ್ತು ಇತರ ಹಿಂಸಾಕೃತ್ಯಗಳು ಭಾರತದಲ್ಲೂ ಪ್ರವಾಸೋದ್ಯಮದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿದೆ.


www.shikarat.com

ಅಯೋಧ್ಯೆಯಲ್ಲಿ 1992ರ ಡಿಸೆಂಬರ್ 6ರ ಘಟನೆ ಬಳಿಕ ನಡೆದ ಹಿಂಸಾಚಾರ, ಗುಜರಾತ್ ಹಿಂಸಾಕಾಂಡ, ಮುಂಬೈ ಬಾಂಬ್‌ಸ್ಫೋಟ, ಸೂರತ್ ಹಿಂಸಾಚಾರದಂಥ ಘಟನೆಗಳು ಪ್ರವಾಸಿಗಳ ಸಂಖ್ಯೆ ಕಡಿಮೆಯಾಗುವಂತೆ ಮಾಡಿದೆ. ಇದು ಆದಾಯದ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರಿದೆ. ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಜಮ್ಮುಕಾಶ್ಮೀರ ಹಾಗೂ ಈಶಾನ್ಯ ರಾಜ್ಯಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಹಿಂಸಾಚಾರದ ಪರಿಣಾಮವಾಗಿ, ಪ್ರವಾಸಿಗಳು ಆ ಪ್ರದೇಶಗಳತ್ತ ಮುಖಮಾಡಲೂ ಹೆದರುವಂತಾಗಿದೆ. ಅಂತೆಎಯೇ ಫ್ಲೋರಿಡಾ, ಹವಾಯಿ ಮತ್ತು ಕ್ರೋವೇಷಿಯಾದಂಥ ಪ್ರದೇಶಗಳಲ್ಲಿ ಕಳ್ಳಸಾಗಾಣಿಕೆದಾರರ ಕಾರ್ಯಾಚರಣೆಗಳು ಪ್ರವಾಸೋದ್ಯಮಕ್ಕೆ ಮಾರಕವಾಗಿವೆ.

ಪ್ರವಾಸೋದ್ಯಮ ಅಭಿವೃದ್ಧಿ ಪರಿಕರಗಳ ವೆಚ್ಚ ಅಧಿಕವಾಗುತ್ತಿರುವಂಥ ಆರ್ಥಿಕ ಕಾರಣಗಳಿಂದಾಗಿಯೂ ಪ್ರವಾಸೋದ್ಯಮ ತಾಣಗಳಲ್ಲಿ ಮೂಲಸೌಕರ್ಯ ಕಲ್ಪಿಸಲೂ ಸಾಧ್ಯವಾಗುತ್ತಿಲ್ಲ. ವೆಚ್ಚವನ್ನು ಕಡಿತಗೊಳಿಸುವ ನಿಟ್ಟಿನಲ್ಲಿ ಮತ್ತು ಮಿತ ಸಂಪನ್ಮೂಲದಲ್ಲಿ ಮೂಲಸೌಕರ್ಯ ಸೃಷ್ಟಿಸುವ ಪ್ರಯತ್ನದಲ್ಲಿ ಗುಣಮಟ್ಟದ ಜತೆಗೆ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಯೂರೋಪ್‌ನಂಥ ದೇಶಗಳ ಒಕ್ಕೂಟ ವ್ಯವಸ್ಥೆ ಕೂಡಾ ಪ್ರವಾಸೋದ್ಯಮ ಅವಕಾಶಕ್ಕೆ ಪ್ರತಿಕೂಲವಾಗಿದೆ.

ಯಾವುದೇ ಸಮಸ್ಯೆಗಳಿದ್ದರೂ ಭಾರತ ಪ್ರವಾಸೋದ್ಯಮದ ಲಾಭವನ್ನು ಪಡೆಯುವ ಸಲುವಾಗಿ ದೂರದ ದೇಶಗಳಿಂದ ಹಾಗೂ ನೆರೆಯ ದೇಶಗಳಿಂದ ಪ್ರವಾಸಿಗಳನ್ನು ಸೆಳೆಯಲು ಪ್ರಯತ್ನಗಳನ್ನು ನಡೆಸಲೇಬೇಕಿದೆ. ಭಾರತದಲ್ಲಿ ನಾಗರಿಕತೆಯ ಬೆಳವಣಿಗೆಗೆ ಕಾರಣವಾದ ಅಸಂಖ್ಯಾತ ಸ್ಮಾರಕಗಳಿವೆ. ಪ್ರಾಚೀನ ಬುದ್ಧಸ್ತೂಪಗಳು, ಹಿಂದೂ ದೇವಾಲಯಗಳು, ಮೊಘಲರ ಮತ್ತು ರಾಜಪೂತರ ಅರಮನೆಗಳು, ಕೋಟೆ ಮತ್ತು ವಿಜಯಸ್ತಂಭಗಳು, ಕಲ್ಲಿನಲ್ಲಿ ಕೆತ್ತಿದ ಗುಹೆಗಳು ಮತ್ತು ವಿಸ್ತೃತವಾಗಿ ಅಭಿವೃದ್ಧಿಪಡಿಸಿರುವ ಉದ್ಯಾನವನಗಳು ಸೇರಿದಂತೆ ಹಲವಾರು ಪ್ರವಾಸಿ ಆಕರ್ಷಣೆಗಳು ದೇಶದ ಉದ್ದಗಲಕ್ಕೂ ಇವೆ. ಇದು ವೈವಿಧ್ಯಮಯ ಹಾಗೂ ಚಿತ್ತಾಕರ್ಷಕ. ವಾಸ್ತುಶಿಲ್ಪ ಶೈಲಿ ಹಾಗೂ ವೈಜ್ಞಾನಿಕ ಯೋಜನೆಗಳಿಗೆ ಹೆಸರಾದ ಅದ್ಭುತವೆನಿಸುವ ಕಟ್ಟಡಗಳು ನಮ್ಮಲ್ಲಿವೆ.

ಹಿಮಚ್ಛಾದಿತ ಹಿಮಾಲಯ ಮತ್ತು ರಾಜಸ್ಥಾನದ ಬೃಹತ್ ಮರಭೂಮಿ ಎಲ್ಲರನ್ನೂ ಆಕರ್ಷಿಸದಿದ್ದರೂ, ಭಾರತದಲ್ಲಿನ ಚಿತ್ತಾಕರ್ಷಕ ಗಿರಿಧಾಮಗಳು ಸಾಕಷ್ಟಿವೆ. ದಕ್ಷಿಣ, ಪೂರ್ವ ಮತ್ತು ಪಶ್ಚಿಮಭಾಗದಲ್ಲಿ ಸಾಕಷ್ಟು ಸಮುದ್ರ ದಂಡೆಗಳಿವೆ. ದಟ್ಟ ಅರಣ್ಯ ಹಾಗೂ ವನ್ಯಧಾಮಗಳು ಹೇರಳವಾಗಿವೆ. ಸಾಹಸಕ್ರೀಡೆಗಳಾದ ಟ್ರೆಕ್ಕಿಂಗ್, ಪರ್ವತಾರೋಹಣ, ಸ್ಕೈಯಿಂಗ್, ರ್‍ಯಾಫ್ಟಿಂಗ್, ಕನೊಯಿಂಗ್‌ನಂಥ ವೈವಿಧ್ಯಮಯ ಕ್ರೀಡೆಗಳನ್ನು ಹಿಮಾಲಯ ತಪ್ಪಲಿನ ನದಿಗಳಲ್ಲಿ ಮಾಡಬಹುದಾಗಿದೆ. ಜತೆಗೆ ಗ್ಲೈಡಿಂಗ್‌ನಂಥ ಸಾಹಸಕ್ಕೂ ವಿಪುಲ ಅವಕಾಶವಿದೆ.

ಸೌಂದರ್ಯ ಸೂಕ್ಷ್ಮತೆಯನ್ನು ಆಕರ್ಷಿಸುವ ಸಾಂಸ್ಕೃತಿಕ ವೈವಿಧ್ಯವಿದೆ. ವಿಭಿನ್ನ ರುಚಿಗಳನ್ನು ಪ್ರವಾಸಿಗರಿಗೆ ಉಣಬಡಿಸುವ ಖಾದ್ಯ ವೈವಿಧ್ಯಗಳಿವೆ. ಮುಘಲಾಯಿಯಿಂದ ಹಿಡಿದು ರಾಜಸ್ಥಾನಿ ಶೈಲಿಯ ವರೆಗೆ, ದಕ್ಷಿಣ ಭಾರತ ಶೈಲಿಯಿಂದ ಹಿಡಿದು ಪಂಜಾಬಿ ಶೈಲಿಯ ವೈವಿಧ್ಯಮಯ ಆಹಾರಗಳು ನಮ್ಮಲ್ಲಿ ಲಭ್ಯ. ಭಾರತದಲ್ಲಿ ಸಿಗುವಷ್ಟು ವೈವಿಧ್ಯಮಯ, ಬಾಯಿ ಚಪ್ಪರಿಸುವ, ನಾಲಿಗೆಯಲ್ಲಿ ನೀರೂರಿಸುವ ರುಚಿಯ ಅಡುಗೆಗಳು ಇಡೀ ವಿಶ್ವದಲ್ಲೇ ಎಲ್ಲೂ ಕಂಡುಬರಲು ಸಾಧ್ಯವಿಲ್ಲ. ಬಟ್ಟೆಬರೆ, ಕಲೆ, ಕುಶಲಕಲೆಗಳನ್ನು ಪ್ರತಿಬಿಂಬಿಸುವ ಅಮೂಲ್ಯ ಉಡುಗೊರೆಗಳೂ ಭಾರತದ ವೈವಿಧ್ಯಕ್ಕೆ ಸಾಕ್ಷಿಯಾಗಿ ನಿಂತಿವೆ.

ಭಾರತದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಇಂಥ ವ್ಯಾಪಕ ಅವಕಾಶಗಳಿದ್ದರೂ, ಇದರ ಪ್ರಯೋಜನವನ್ನು ನಿರೀಕ್ಷಿತ ಮಟ್ಟದಲ್ಲಿ ಪಡೆಯಲು ಭಾರತ ವಿಫಲವಾಗಿದೆ. ಜಾಗತಿಕ ಪ್ರವಾಸೋದ್ಯಮ ಆದಾಯದಲ್ಲಿ ಭಾರತದ ಪಾಲು ತೀರಾ ಕಡಿಮೆ. ಇನ್ನೊಂದೆಡೆ ಮಲೇಷ್ಯಾ, ದಕ್ಷಿಣ ಆಫ್ರಿಕಾದಂಥ ದೇಶಗಳು ಸೀಮಿತ ಪ್ರವಾಸೋದ್ಯಮ ಅವಕಾಶಗಳನ್ನು ಹೊಂದಿದ್ದರೂ, ಜಾಗತಿಕ ಮಟ್ಟದಲ್ಲಿ ಉತ್ತಮ ಆದಾಯದ ಪಾಲು ಹೊಂದಿವೆ. ಈ ಅಂಶವನ್ನು ಅರ್ಥಮಾಡಿಕೊಳ್ಳುವುದು ಕಷ್ಟಸಾಧ್ಯ. ದೇಶ ಶ್ರೀಮಂತ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪರಂಪರೆ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆ ಹೊಂದಿದ್ದರೂ ಪ್ರವಾಸಿಗಳನ್ನು ಆಕರ್ಷಿಸಲು ವಿಫಲವಾಗಿರುವುದು ತರ್ಕಕ್ಕೆ ನಿಲುಕದ ಸಂಗತಿ. ಭಾರತದ ಪ್ರತಿ ಭಾಗದಲ್ಲೂ ಶ್ರೀಮಂತ ಪ್ರಾಚೀನಕಾಲದ ಪರಂಪರೆ, ಸ್ಮಾರಕಗಳು ಹಾಗೂ ವಾಸ್ತುಶಿಲ್ಪದ ವೈಭವದಿಂದ ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ಭಾರತ ವಿಶ್ವದ ಅತ್ಯಂತ ಅಗ್ಗದ ಪ್ರವಾಸಿತಾಣವೂ ಹೌದು. ಅದಾಗ್ಯೂ ನಮ್ಮ ದೇಶ ಇವುಗಳ ಸದುಪಯೋಗ ಪಡೆಯಲು ಏಕೆ ವಿಫಲವಾಗಿವೆ?

ಒಂದು ಪ್ರಮುಖ ಕಾರಣವೆಂದರೆ, ಪ್ರವಾಸೋದ್ಯಮ ವಲಯಕ್ಕೆ ಕನಿಷ್ಠ ಹಣಕಾಸು ಸಂಪನ್ಮೂಲ ಲಭ್ಯತೆ. ಇದುವರೆಗಿನ ಸರ್ಕಾರಗಳು ಭರವಸೆಗಳ ಮಹಾಪೂರವನ್ನೇ ಹರಿಸಿದ್ದರೂ, ಪ್ರವಾಸೋದ್ಯಮ ಅಭಿವೃದ್ಧಿ ಕ್ಷೇತ್ರಕ್ಕೆ ಬಜೆಟ್ ಅನುದಾನ ಮಾತ್ರ ತೀರಾ ಕಡಿಮೆ. ಆದ್ದರಿಂದ ಪ್ರವಾಸಿತಾಣಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಹಣದ ತೀರಾ ಅಡಚಣೆ ಇದೆ. ಅಸಮರ್ಪಕ ಮತ್ತು ಕಳಪೆ ಗುಣಮಟ್ಟದ ಹೋಟೆಲ್‌ಗಳು, ನೈರ್ಮಲ್ಯ ಮತ್ತು ಸ್ವಚ್ಛತೆ ಕೊರತೆಯಂಥ ಕಾರಣಗಳು ಸೂಕ್ಷ್ಮ ಪ್ರವಾಸಿಗಳನ್ನು ಭಾರತದಿಂದ ದೂರ ಉಳಿಯುವಂತೆ ಮಾಡುತ್ತವೆ. ಸಾಂಸ್ಕೃತಿಕ ಆಸಕ್ತಿಯ ಸ್ಥಳಗಳು, ಅಂದರೆ ದೇವಾಲಯಗಳ ನಗರಗಳು ಕುಡಾ ಮೂಲಭೂತ ಅಗತ್ಯಗಳಾದ ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯಗಳಿಂದ ವಂಚಿತವಾಗಿವೆ.

ಉದಾಹರಣೆಗೆ ವಾರಣಾಸಿ ಇದಕ್ಕೆ ಅತ್ಯುತ್ತಮ ಉದಾಹರಣೆ. ಈ ನಗರ ಪ್ರವಾಸೋದ್ಯಮ ಅವಕಾಶಗಳನ್ನು ಹೊಂದಿದ್ದರೂ, ಮೂಲಸೌಕರ್ಯ ಕೊರತೆ ಎಲ್ಲವನ್ನೂ ಹಾಳುಮಾಡಿದೆ. ಜೆರುಸಲೇಂ ಹೇಗೆ ಯಹೂದಿಯರಿಗೆ, ಮುಸಲ್ಮಾನರಿಗೆ ಮತ್ತು ಕ್ರೈಸ್ತರಿಗೆ ಹೇಗೋ ವಾರಣಾಸಿ ಹಿಂದೂಗಳಿಗೆ ಪವಿತ್ರಭೂಮಿ. ಹಿಂದೂ ಧರ್ಮದ ಆಧ್ಯಾತ್ಮಿಕ ಶಕ್ತಿ ಕೇಂದ್ರ. ಈ ನಗರಕ್ಕೆ ವಿಶ್ವದ ವಿವಿಧೆಡೆಗಳ ಪ್ರವಾಸಿಗಳು ಆಗಮಿಸುತ್ತಾರಾದರೂ, ಈ ಸಂಖ್ಯೆ ಹೆಚ್ಚಾಗುವಂತೆ ಮಾಡಬೇಕಾದರೆ, ಸ್ಥಳೀಯಾಡಳಿತ ನಗರದ ಸ್ವಚ್ಛತೆಗೆ ಗಮನ ಹರಿಸಬೇಕಾಗಿದೆ. ಜತೆಗೆ ಪ್ರವಾಸಿಸ್ನೇಹಿ ವಾತಾವರಣವನ್ನು ಸೃಷ್ಟಿಸುವುದು ಅಗತ್ಯ. ಎಲ್ಲೆಡೆ ತ್ಯಾಜ್ಯದ ರಾಶಿ, ಉತ್ತಮ ಹೋಟೆಲ್‌ಗಳ ಕೊರತೆ, ಸ್ಥಳೀಯ ಆಡಳಿತದಿಂದ



www.shikarat.com

ಪ್ರವಾಸಿಗಳಿಗೆ ಯಾವುದೇ ನೆರವು ಸಿಗದಿರುವುದು ಮತ್ತಿತರ ಕಾರಣಗಳಿಂದಾಗಿ ಪ್ರವಾಸಿಗಳು ಈ ಅಪೂರ್ವ ನಗರದಲ್ಲಿ ವಾಸ್ತವ್ಯ ಇರುವುದು ಕೇವಲ ಮರೀಚಿಕೆಯಾಗಿಯೇ ಉಳಿದಿದೆ.

ಕಡಿಮೆ ಸಂಪನ್ಮೂಲ ಲಭ್ಯತೆಯ ಪರಿಸ್ಥಿತಿಯಿಂದ ಹೊರಬರಬೇಕಾದರೆ, ಖಾಸಗಿ ವಲಯ ಇದರಲ್ಲಿ ಆಸಕ್ತಿ ವಹಿಸುವುದು ಅಗತ್ಯವಾಗಿದೆ. ಹೋಟೆಲ್‌ಗಳ ಮೇಲೆ ಖಾಸಗಿ ಹೂಡಿಕೆದಾರರು ಹೂಡಿರುವ ಬಂಡವಾಳದ ಮೇಲೆ ಪ್ರತಿಫಲ ಬರುವಂತಿದ್ದರೆ ಮಾತ್ರ ಅವರು ತಮ್ಮ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಲು ಮುಂದಾಗುತ್ತರೆ. ಖಾಸಗಿ ವಲಯದ ಉತ್ತಮ ಸಾಧನೆಗೆ ಗೋವಾ ಅತ್ಯುತ್ತಮ ನಿದರ್ಶನ. ಟಾಟಾ ಸಮೂಹ ಮತ್ತು ಇತರ ದೊಡ್ಡ ಖಾಸಗಿ ಸಮೂಹಗಳು ಇಲ್ಲಿ ಆಸಕ್ತಿ ವಹಿಸಿದ ಪರಿಣಾಮವಾಗಿ 1970ರ ದಶಕದ ಮಧ್ಯಭಾಗದವರೆಗೂ ಪ್ರವಾಸಿಗಳಿಗೆ ಗೊತ್ತೇ ಇರದಿದ್ದ ಗೋವಾ ಇದೀಗ ಪಶ್ಚಿಮ ಭಾರತದ ಪ್ರಮುಖ ಹಾಗೂ ಆಕರ್ಷಣೀಯ ಪ್ರವಾಸಿ ತಾಣವಾಗಿ ಮಾರ್ಪಟ್ಟಿದೆ.

ತೀರಾ ಕಳಪೆ ಪ್ಯಾಕೇಜಿಂಗ್ ಮತ್ತು ಉತ್ತೇಜನ ಕೊರತೆಯಿಂದಲೂ ಪ್ರವಾಸೋದ್ಯಮ ಕ್ಷೇತ್ರ ಬಳಲಿದೆ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಯಾವುದೇ ಮಾರುಕಟ್ಟೆ ತಂತ್ರಗಳು ಕೂಡಾ ಭಾರತಕ್ಕೆ ದೊಡ್ಡಮಟ್ಟದಲ್ಲಿ ಪ್ರವಾಸಿಗಳನ್ನು ಆಕರ್ಷಿಸಲು ನೆರವಾಗಿಲ್ಲ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಲಾಭ ಪಡೆಯಬೇಕಿದ್ದರೆ, ಗುರಿನಿರ್ದೇಶಿತ ಹಾಗೂ ವಲಯವಾರು ಮಾರುಕಟ್ಟೆ ತಂತ್ರವನ್ನು ಅಳವಡಿಸಿಕೊಳ್ಳಬೇಕಾದ್ದು ಅನಿವಾರ್ಯ.

ಇಂಥ ಸಮಸ್ಯೆ ಹಾಗೂ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಇವಕ್ಕೆ ಸ್ಪಷ್ಟ ದೃಷ್ಟಿಕೋನದ ಪರಿಹಾರಗಳನ್ನು ಕಂಡುಹಿಡಿದಾಗ ಮಾತ್ರ ಭಾರತ ಪ್ರವಾಸಿಗಳ ಸ್ವರ್ಗವಾಗಿ ಮಾರ್ಪಡಬಹುದು. ಖಂಡಿತವಾಗಿಯೂ ಪ್ರವಾಸೋದ್ಯಮ ಆದಾಯದ ದೊಡ್ಡ ಮೂಲ. ಇದು ರಾಷ್ಟ್ರಮಟ್ಟದಲ್ಲಿ ಹಾಗೂ ವೈಯಕ್ತಿಕ ಮಟ್ಟದಲ್ಲಿ ದೊಡ್ಡ ಆದಾಯವನ್ನು ತಂದುಕೊಡಬಹುದು. ಇದರ ಜತೆಗೆ ವಿಭಿನ್ನ ಕ್ಷೇತ್ರಗಳಲ್ಲಿ ಇದನ್ನು ಅಭಿವೃದ್ಧಿಯ ಅಸ್ತ್ರವಾಗಿ ಬಳಸಿಕೊಳ್ಳುವ ಸಾಧ್ಯತೆಯನ್ನೂ ಸದುಪಯೋಗಪಡಿಸಿಕೊಳ್ಳಬೇಕು. ಇದು ಸಾಕಷ್ಟು ಉದ್ಯೋಗಾವಕಾಶ ಸೃಷ್ಟಿಸುತ್ತದೆ. ಸೃಜನಶೀಲತೆಯನ್ನು ಹೆಚ್ಚಿಸುತ್ತದೆ. ಇಡೀ ವಿಶ್ವವನ್ನು ಪುಟ್ಟ ಗ್ರಾಮವಾಗಿ ಮಾರ್ಪಡಿಸುವ ಶಕ್ತಿ ಹೊಂದಿದೆ. ಇದಕ್ಕೆ ಸ್ವಲ್ಪಮಟ್ಟಿನ ವೈಯಕ್ತಿಕ ಪ್ರಯತ್ನಗಳೂ ಅಗತ್ಯವಾಗುತ್ತವೆ. ಉದಾಹರಣೆಗೆ ಸಣ್ಣ ವ್ಯಾಪಾರಿಗಳು ಮತ್ತು ಟಾಕ್ಸಿ ಚಾಲಕರು, ಪ್ರವಾಸಿಗಳಿಗೆ ನಿಗದಿಗಿಂತ ಹೆಚ್ಚು ದರ ವಿಧಿಸದಿದ್ದರೆ, ವಿದೇಶಗಳಿಂದ ಬರುವ ಪ್ರವಾಸಿಗಳ ಹಾವಭಾವ ಹಾಗೂ ಉಡುಗೆ ತೊಡುಗೆಯನ್ನು ನೋಡಿ ರಸ್ತೆಗಳಲ್ಲಿ ನಾವು ಗೇಲಿ ಮಾಡದಿದ್ದರೆ, ದೂರದಿಂದ ಬರುವವರಿಗೆ ನಾವು ಸಹಾಯಹಸ್ತ ಚಾಚುವ ಹಾಗೂ ಅವರನ್ನು ಆತ್ಮೀಯವಾಗಿ ನೋಡಿಕೊಂಡರೆ, ಸಮಾಜಘಾತಕ ಶಕ್ತಿಗಳು ಪ್ರವಾಸಿಗಳನ್ನು ದೋಚುವ, ಅವರಲ್ಲಿ ಭಯ ಹುಟ್ಟಿಸುವಂಥ ಕಾರ್ಯ ಮಾಡದಿದ್ದರೆ, ದೂರದ ಅತಿಥಿಗಳಲ್ಲಿ ಭಾರತದ ಬಗ್ಗೆ ಗೌರವ ಹೆಚ್ಚುತ್ತದೆ. ಇದರಿಂದಾಗಿ ಇದರ ಸತ್ಪರಿಣಾಮಗಳು ಎಲ್ಲೆಡೆ ಹೆಚ್ಚಿ ಪ್ರವಾಸೋದ್ಯಮ ಕ್ಷೇತ್ರಕ್ಕೆ ಮತ್ತಷ್ಟು ಲಾಭವಾಗುತ್ತದೆ.

## 12. ಬಾಲಕಾರ್ಮಿಕ ಪದ್ಧತಿ

ಈ ವಿಷಯದಲ್ಲಿ ಅಭಿವೃದ್ಧಿಪಡಿಸಬೇಕಾದ ಪ್ರಮುಖ ಅಂಶಗಳೆಂದರೆ:

1. ಬಾಲಕಾರ್ಮಿಕ ಪದ್ಧತಿ– ಸಮಾಜಕ್ಕೆ ಮತ್ತು ಮಗುವಿಗೆ ಹಾನಿಕಾರಕ; ಭಾರತದ ಸಂಕೀರ್ಣ ಸಮಸ್ಯೆ

2. ಕಾರಣಗಳು– ಬಡತನ, ವಯಸ್ಕರ ಉದಾಸೀನ ಮತ್ತು ಕ್ರೌರ್ಯ. ಬಾಲಕಾರ್ಮಿಕರಿಗೆ ಉದ್ಯೋಗದಾತರ ಆದ್ಯತೆ; ಕಾನೂನುಗಳ ಸಮರ್ಪಕ ಅನುಷ್ಠಾನದ ಕೊರತೆ; ಶೈಕ್ಷಣಿಕ ಅವಕಾಶಗಳ ಕೊರತೆ.

3. ಬಾಲಕಾರ್ಮಿಕ ಪದ್ಧತಿಯ ಐತಿಹಾಸಿಕ ದೃಷ್ಟಿಕೋನ.

4. ಭಾರತದಲ್ಲಿ ಬಾಲಕಾರ್ಮಿಕ ಕ್ಷೇತ್ರಗಳು

5. ಸಮಸ್ಯೆಯ ವ್ಯಾಪ್ತಿ ಮತ್ತು ಪರಿಣಾಮಗಳು

6. ಶೋಷಣೆ ತಡೆಗೆ ಹಾಲಿ ಇರುವ ಅವಕಾಶಗಳು– ಸಂವಿಧಾನಾತ್ಮಕ ಮತ್ತು ಇತರ

7. ಇತರ ಪ್ರಯತ್ನಗಳ ಅಗತ್ಯ

8. ಭಾರತದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಸಂಕೀರ್ಣ; ಬಾಲಕಾರ್ಮಿಕ ಪದ್ಧತಿ ಇಲ್ಲದಂತೆ ಮಾಡುವುದು ಅಲ್ಪಾವಧಿ ಗುರಿ. ಅದರೆ ಸಂಪೂರ್ಣವಾಗಿ ಇದನ್ನು ನಾಶಪಡಿಸುವುದು ಧೀರ್ಘಾವಧಿ ಗುರಿ.

9. ಬಾಲಕಾರ್ಮಿಕ ಪದ್ಧತಿಯ ಹಠಾತ್ ಸ್ಥಗಿತ ಮತ್ತಷ್ಟು ಶೋಷಣೆಗೆ ಕಾರಣವಾಗಬಹುದು.

ಮಕ್ಕಳ ಹಕ್ಕುಗಳ ಬಗ್ಗೆ ನಮಗೆ ಕಾಳಜಿ ಕಡಿಮೆ. ಇದನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂಘ ಸಂಸ್ಥೆಗಳು ಕೆಲವು ಪ್ರಯತ್ನಗಳನ್ನು ನಡೆಸುತ್ತಿವೆ. ಆದರೆ ಎಲ್ಲ ಲಿಖಿತ ಭವರಸೆ, ನೀಡಿದ ಆಶ್ವಾಸನೆಗಳು ಮತ್ತು ಸಮಾವೇಶಗಳಲ್ಲಿ ಮಾಡಿದ


www.shikarat.com

ಸಹಿ ಯಾವುದೂ ಪರಿಸ್ಥಿತಿ ಬದಲಾಯಿಸಲು ಪೂರಕವಾಗಿಲ್ಲ. ವಿಶ್ವಾದ್ಯಂತ ಹಲವು ಮಕ್ಕಳು, ಅದರಲ್ಲೂ ಮುಖ್ಯವಾಗಿ ಭಾರತದಲ್ಲಿ ಸಾಮೂಹಿಕವಾಗಿ ಸೌಲಭ್ಯವಂಚಿತ ಮತ್ತು ಅನಾನುಕೂಲ ಪರಿಸ್ಥಿತಿಯಲ್ಲಿದ್ದಾರೆ. ಲಕ್ಷಾಂತರ ಮಕ್ಕಳು ಹೊಲ ಮತ್ತು ಕಾರ್ಖಾನೆಗಳಲ್ಲಿ, ಬೀದಿಬದಿಯಲ್ಲಿ ಮತ್ತು ತ್ಯಾಜ್ಯ ಸಂಗ್ರಹಾಗಾರಗಳಲ್ಲಿ, ಖಾಸಗಿ ಮತ್ತು ಸರ್ಕಾರಿ ಸಂಘ ಸಂಸ್ಥೆಗಳಲ್ಲಿ ಕಾಣಸಿಗುತ್ತಾರೆ. ಈ ಪೈಕಿ ಹಲವರು ತಮ್ಮ ತೀರಾ ಎಳೆವಯಸ್ಸಿನಿಂದಲೂ ಕೆಲಸ ಮಾಡುತ್ತಾ ಬಂದಿದ್ದಾರೆ. ಮನೆಗೆ ಸಹಕರಿಸುವುದು ಮತ್ತು ಆದಾಯದ ಮೂಲವಾಗಿ ಇವರು ಬಾಳ್ವೆ ಸಾಗಿಸುತ್ತಿದ್ದಾರೆ. ತೀರಾ ಕಡಿಮೆ ಶಿಕ್ಷಣ ಹಾಗೂ ಸಾಮಾಜಿಕ ಬದ್ಧತೆ ಇಲ್ಲದ ಮನೋಭಾವದಿಂದಾಗಿ ಇಂಥ ಮಕ್ಕಳು ಸಮಾಜಕ್ಕೆ ದೊಡ್ಡ ಹಾನಿಯನ್ನು ಉಂಟುಮಾಡಬಲ್ಲರು. ಇಂಥ ಮಕ್ಕಳ ಸಾಮರ್ಥ್ಯಕ್ಕೆ ತಕ್ಕಂತೆ ಅವರಿಗೆ ಉದ್ಯೋಗಾವಕಾಶ ಲಭಿಸದಿದ್ದರೆ ಮತ್ತು ಸಮಾನ ಸ್ಥಾನಮಾನ ನೀಡದಿದ್ದರೆ ಅವರು ಸಮಾಜಕ್ಕೆ ಕಂಟಕರಾಗುವ ಎಲ್ಲ ಅಪಾಯಗಳೂ ಇವೆ.

ಭಾರತದಲ್ಲಿ ಬಾಲಕಾರ್ಮಿಕ ಪದ್ಧತಿ ಅಸ್ತಿತ್ವದಲ್ಲಿರುವುದು ಬಹಳ ಸಂಕೀರ್ಣ ವಾಸ್ತವ; ಸಾಮಾಜಿಕ ಅಪರಾಧ; ಮಾನವತೆಯ ಮೇಲಿನ ಕ್ರೌರ್ಯ. ಇದು ರೋಗವಲ್ಲದಿದ್ದರೂ ರೋಗಲಕ್ಷಣ ಎನ್ನುವುದಂತೂ ಖಚಿತ. ಈ ಹಿನ್ನೆಲೆಯಲ್ಲಿ ಇಂಥ ಸಮಸ್ಯೆ ಇಂದಿಗೂ ಹೇಗೆ ಉಳಿದುಕೊಂಡಿದೆ ಎಂದು ಕೇಳುವುದು ಸಹಜ.

ಭಾರತದಲ್ಲಿ ಬಾಲಕಾರ್ಮಿಕ ಪದ್ಧತಿಗೆ ಮೂಲ ಹಾಗೂ ಮುಖ್ಯ ಕಾರಣವೆಂದರೆ ಕಿತ್ತುತಿನ್ನುವ ಬಡತನ, ಒಂದು ಕುಟುಂಬದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವಲಂಬಿತ ಮಕ್ಕಳು ಇರುವುದು, ತಂದೆ ತಾಯಿಗಳ ಅನಕ್ಷರತೆ, ಅಸ್ಥಿರ ಮತ್ತು ಕಡಿಮೆ ಆದಾಯ, ಆದಾಯೋತ್ಪತ್ತಿಯ ಆಸ್ತಿ ಕಡಿಮೆ ಇರುವುದು ಮತ್ತಿತರ ಕಾರಣಗಳಿಂದಾಗಿ ಮಕ್ಕಳನ್ನು ಕಲಿಕೆಗೆ ಕಳುಹಿಸುವ ಬದಲು ಕೆಲಸಕ್ಕೆ ಕಳುಹಿಸುವುದೇ ಸೂಕ್ತ ಎಂಬ ನಿರ್ಧಾರಕ್ಕೆ ಪೋಷಕರು ಬರುತ್ತಾರೆ.

ಏಕ ಪೋಷಕತ್ವದ ಕುಟುಂಬಗಳಲ್ಲಿ ಬಾಲಕಾರ್ಮಿಕರ ಸಂಖ್ಯೆ ಇನ್ನೂ ಹೆಚ್ಚು ಎನ್ನುವುದನ್ನು ಕೆಲ ಅಧ್ಯಯನಗಳು ದೃಢಪಡಿಸಿವೆ. ಆದರೆ ಕೆಲ ಮಕ್ಕಳು ತೀರಾ ಬಡತನದ ಕಾರಣದಿಂದಷ್ಟೇ ಕೆಲಸಮಾಡುವುದಿಲ್ಲ; ಪೋಷಕರ ಒತ್ತಡದಿಂದ ಅನಿವಾರ್ಯವಾಗಿ ಈ ಪರಿಸ್ಥಿತಿಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಹಿರಿಯರು ಆಲಸ್ಯದಿಂದ ಕುಳಿತು ತಮ್ಮ ದೈನಂದಿನ ವೆಚ್ಚಗಳಿಗೆ ಬಾಲಕಾರ್ಮಿಕರಾಗಿ ಮಕ್ಕಳನ್ನು ದುಡಿಸುವ ಮನೋಭಾವವೂ ಕೆಲವರಲ್ಲಿ ಕಂಡುಬರುತ್ತಿದೆ. ಬಾಲಕಾರ್ಮಿಕ ಪದ್ಧತಿ ತಡೆಗೆ ಸಮರ್ಪಕ ಕಾನೂನುಗಳು ಇಲ್ಲದಿರುವುದು ಮತ್ತು ರಾಜಕೀಯ ಇಚ್ಛಾಶಕ್ತಿ ಕೊರತೆ ಕೂಡಾ ಈ ಸಮಸ್ಯೆಗೆ ಕೊಡುಗೆ ನೀಡುತ್ತಿದೆ. ಹಲವು ಪ್ರಕರಣಗಳಲ್ಲಿ ತಪಾಸಣಾ ವ್ಯವಸ್ಥೆ ದಕ್ಷವಾಗಿ ಕಾರ್ಯ ನಿರ್ವಹಿಸುವುದಿಲ್ಲ; ಇನ್ನು ಕೆಲ ಪ್ರಕರಣಗಳಲ್ಲಿ ಪೋಷಕರೇ ಸರ್ಕಾರದ ವಿವಿಧ ಕಾರ್ಯಕ್ರಮಗಳಿಗೆ ಬೆಂಬಲ ನೀಡುವುದಿಲ್ಲ. ಇದಕ್ಕೆ ಅವರ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿಯುವಿಕೆ ಮುಖ್ಯ ಕಾರಣ. ಹಲವು ಮಂದಿ ಉದ್ಯೋಗದಾತರು ಕೂಡಾ ಬಾಲಕಾರ್ಮಿಕರನ್ನು ಆದ್ಯತೆಯ ಮೇಲೆ ನೇಮಿಸಿಕೊಳ್ಳುತ್ತಾರೆ. ಏಕೆಂದರೆ ಇದು ಅವರಿಗೆ ಹೆಚ್ಚು ಲಾಭದಾಯಕ. ಜತೆಗೆ ಯಾವ ಬದ್ಧತೆಯ ನಿರ್ಬಂಧವೂ ಇಲ್ಲದೇ ಸರಾಗವಾಗಿ ಕೆಲಸಕ್ಕೆ ಬರುತ್ತಾರೆ. ಕೆಲವೊಮ್ಮೆ ಪೋಷಕರು ಕೂಡಾ ತಮ್ಮ ಸಾಲವನ್ನು ತೀರಿಸುವ ಸಲುವಾಗಿ ಮಕ್ಕಳನ್ನು ಕೆಲಕ್ಕೆ ಕಳುಹಿಸುವ ನಿರ್ಧಾರ ಕೈಗೊಳ್ಳುತ್ತಾರೆ.

ಹದಿನಾಲ್ಕು ವರ್ಷಕ್ಕಿಂತ ಕೆಳಗಿನ ಎಲ್ಲ ಮಕ್ಕಳಿಗೆ ಕಡ್ಡಾಯ ಹಾಗೂ ಸಾರ್ವತ್ರಿಕ ಶಿಕ್ಷಣ ಒದಗಿಸುವ ಸಂವಿಧಾನದ ಆಶಯ ಇಂದಿಗೂ ಪರಿಪೂರ್ಣವಾಗಿ ಜಾರಿಗೆ ಬಂದಿಲ್ಲ. ಶಾಲೆಗೆ ಹೋಗದ ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಿ ಅದರಿಂದ ಸಂಪಾದನೆ ಮಾಡುವುದು ಲಾಭದಾಯಕ ಎಂದು ಬಹುತೇಕ ಬಡ ಪೋಷಕರು ನಿರ್ಧರಿಸುತ್ತಾರೆ. ದಂಡವನ್ನು ಬಿಟ್ಟು, ಮಕ್ಕಳನ್ನು ಹಾಳುಮಾಡಿದರು ಎಂಬ ನೀತಿಯನ್ನು ಶಿಕ್ಷಕರು ಶಾಲೆಗಳಲ್ಲಿ ಬಹುತೇಕ ಅನುಸರಿಸುತ್ತಿದ್ದಾರೆ. ಬೋಧನೆಯ ಪ್ರತಿಗಾಮಿ ವಿಧಾನವನ್ನು ಬಹಳಷ್ಟು ಶಾಲೆಗಳಲ್ಲಿ ಅನುಸರಿಸಲಾಗುತ್ತಿದ್ದು, ಇದರ ಜತೆಗೆ ಹಳ್ಳಿಶಾಲೆಗಳಲ್ಲಿ ಹಲವು ಸಾಮಾಜಿಕ ತಾರತಮ್ಯ ಮತ್ತಿತರ ಕ್ರಮಗಳಿಂದಾಗಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಶಾಲೆ ತೊರೆಯುತ್ತಿದ್ದಾರೆ.

ಸಹಜವಾಗಿಯೇ ಇಂಥ ಕ್ರಮ ಮಕ್ಕಳನ್ನು ಕಾರ್ಮಿಕ ಮಾರುಕಟ್ಟೆಯತ್ತ ತಳ್ಳುತ್ತದೆ. ಅದರು ಗ್ರಾಮೀಣ ಪ್ರದೇಶದಲ್ಲಾಗಿರಲಿ ಅಥವಾ ನಗರಗಳಲ್ಲಾಗಿರಲಿ ಪರಿಸ್ಥಿತಿ ಭಿನ್ನವೇನೂ ಅಲ್ಲ. ಹೆಚ್ಚುತ್ತಿರುವ ಕೈಗಾರಿಕೀಕರಣ ಮತ್ತು ನಗರೀಕರಣ, ಅಧಿಕವಾಗುತ್ತಿರುವ ಭೌತಿಕ ಆಕಾಂಕ್ಷೆಗಳು ಕೂಡಾ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತವೆ.

ಬಾಲಕಾರ್ಮಿಕ ಪದ್ಧತಿ ಇತ್ತೀಚಿನದ್ದಲ್ಲ ಅಥವಾ ತೀರಾ ಹೊಸದಲ್ಲ. ಹಲವು ವರ್ಷಗಳ ಹಿಂದೆಯೇ ಮಕ್ಕಳನ್ನು ಶ್ರೀಮಂತರು ಜೀತಕ್ಕಾಗಿ ಖರೀದಿಸಿ ಕೆಲಸ ಮಾಡಿಸುತ್ತಿದ್ದರು. ಶ್ರೀಮಂತರ ಮನೆಕೆಲಸಗಳಿಗೂ ಬಡಮಕ್ಕಳನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಸಾಮಾನ್ಯವಾಗಿ ತಂದೆ ತಾಯಿಯರೇ ತಾವು ಕೆಲಸ ಮಾಡುತ್ತಿರುವ ಉದ್ಯೋಗದಲ್ಲೇ ಮಕ್ಕಳನ್ನೂ ತೊಡಗಿಸುತ್ತಿದ್ದರು. ಗುರುಕುಲ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ದಿನನಿತ್ಯ ಹಲವು ಕೆಲಸಗಳ ಜವಾಬ್ದಾರಿಯನ್ನು ವಹಿಸಲಾಗುತ್ತಿತ್ತು. ಉದಾಹರಣೆಗೆ ಅವರ ಗುರುಗಳಿಗಾಗಿ ಭಿಕ್ಷೆ ಬೇಡುವುದು, ಸೌದೆ ಸಂಗ್ರಹಿಸಿ ಹೊತ್ತು ತರುವುದು, ಹಾಲು ಹಿಂಡುವುದು ಕೂಡಾ ಅವರ ಕಲಿಕೆಯ ಪ್ರಮುಖ ಅಂಗವಾಗಿತ್ತು. ಆದರೆ ಶಿಕ್ಷಣಕ್ಕೆ ಕಳುಹಿಸುವ ಬದಲು ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಕ್ರಮ ಸದಾ ಕೆಂಗಣ್ಣಿಗೆ ಗುರಿಯಾಗಿದೆ. ಮನುಸ್ಮೃತಿ ಮತ್ತು ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ, ಪ್ರತಿಮಗುವಿಗೂ ಕಡ್ಡಾಯ ಶಿಕ್ಷಣ ಒದಗಿಸುವುದು ರಾಜನ ಕರ್ತವ್ಯವಾಗಿತ್ತು. ಅದರ ನಡುವೆಯೂ ಕೆಲ ಮಕ್ಕಳು ಮನೆಗಳಲ್ಲಾಗಲೀ, ಹೊಲದಲ್ಲಾಗಲಿ ತಮ್ಮ ತಂದೆ– ತಾಯಿಯ ಜತೆ ಕೆಲಸ ಮಾಡುತ್ತಿದ್ದರು. ಕೌಟಿಲ್ಯ ಮಕ್ಕಳ ಮಾರಾಟ ಮತ್ತು ಖರೀದಿಯನ್ನು ನಿಷೇಧಿಸಿದ್ದ ಎನ್ನುವುದು ಆತನ ಅರ್ಥಶಾಸ್ತ್ರದಿಂದ ತಿಳಿದುಬರುತ್ತದೆ.

ಸದ್ಯದ ಸ್ವರೂಪದಲ್ಲಿ ಬಾಲಕಾರ್ಮಿಕ ಪದ್ಧತಿ ಸುಮಾರು 19ನೇ ಶತಮಾನದ ಮಧ್ಯಭಾಗದಲ್ಲಿ ಅಂದರೆ ಆಧುನಿಕ ಕೈಗಾರಿಕೆಗಳನ್ನು ಬ್ರಿಟಿಷರು ಭಾರತದಲ್ಲಿ ಹುಟ್ಟುಹಾಕಿದ ಅವಧಿಯಲ್ಲಿ ಕಾಣಿಸಿಕೊಂಡಿತು. ಸ್ವಾವಲಂಬಿ ಹಾಗೂ ಸ್ವದೇಶಿ ಗ್ರಾಮ ಆರ್ಥಿಕತೆಗಳು ಪತನವಾಗುವಂತೆ ಮಾಡಿದ್ದರಿಂದ ಗ್ರಾಮೀಣರ ಆದಾಯದಲ್ಲಿ ಗಣನೀಯ ಕುಸಿತ ಕಂಡಿತು. ವೆಚ್ಚ ಹಾಗೂ ಖರ್ಚು ಹೆಚ್ಚಿತು. ಆಹಾರ ದುಬಾರಿಯಾಯಿತು.




www.shikarat.com

ಇದರ ಪರಿಣಾಮವಾಗಿ ಗ್ರಾಮಸ್ಥರು ಹಳ್ಳಿಗಳಿಂದ ಕೈಗಾರಿಕೆಗಳು ಇರುವ ನಗರಗಳತ್ತ ಮುಖ ಮಾಡಿದರು. ಮಕ್ಕಳು ಹೆಚ್ಚು ಪ್ರಾಮಾಣಿಕರಾಗಿರುತ್ತಾರೆ ಮತ್ತು ವಿಭಿನ್ನ ಕೆಲಸಗಳಿಗೆ ಬಳಸಿಕೊಳ್ಳಲು ಯೋಗ್ಯರಾಗಿರುತ್ತಾರೆ ಎನ್ನುವುದನ್ನು ಮಗನಂಡ ಉದ್ಯೋಗದಾತರು, ಬಾಲಕರಿಗೆ ತೀರಾ ಕಡಿಮೆ ಹಣ ನೀಡಿದರೆ ಸಾಕು ಎಂಬ ದುರಾಸೆಗೆ ಬಿದ್ದರು. ಇದರಿಂದಾಗಿ ಬಾಲಕಾರ್ಮಿಕರ ಸಂಖ್ಯೆ ಕ್ರಮೇಣವಾಗಿ ಹೆಚ್ಚುತ್ತಾ ಹೋಯಿತು.

ಅದರಲ್ಲೂ ಪ್ರಮುಖವಾಗಿ ಆಳದ ಗಣಿಗಾರಿಕೆ, ಫ್ಯಾಕ್ಟರಿ ಮತ್ತು ತೋಟಗಳಲ್ಲಿ ನೇಮಕಗೊಂಡರು. ಆದರೆ ಈ ಸ್ಥಳಗಳಲ್ಲಿ ಅವರ ಕೆಲಸದ ವಾತಾವರಣ ಮಾತ್ರ ಹದಗೆಡುತ್ತಾ ಹೋಯಿತು. ಅವರು ದಯನೀಯ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವಂತಾಯಿತು. ಹಲವಾರು ಮಂದಿ ಸಮಾಜಶಾಸ್ತ್ರಜ್ಞರು ಉದ್ಯೋಗದಾತರ ಕ್ರಮಗಳ ಬಗ್ಗೆ ಅಪಸ್ವರ ವ್ಯಕ್ತಪಡಿಸಿದರು ಮತ್ತು ಮಕ್ಕಳ ಶೋಷಣೆ ವಿರುದ್ಧ ಧ್ವನಿ ಎತ್ತಿದರು. ಇದರ ಪರಿಣಾಮವಾಗಿ ಮೊದಲ ಫ್ಯಾಕ್ಟರಿ ಕಾಯ್ದೆ–1881 ಜಾರಿಗೆ ಬಂತು. ಇದರ ಅನ್ವಯ ಏಳರಿಂದ ಹನ್ನೆರಡು ವರ್ಷದೊಳಗಿನ ಮಕ್ಕಳನ್ನು ದಿನಕ್ಕೆ ಒಂಬತ್ತು ಗಂಟೆಗಿಂತ ಹೆಚ್ಚುಕಾಲ ದುಡಿಸಿಕೊಳ್ಳಬಾರದು ಎಂದು ಸೂಚಿಸಲಾಯಿತು. ಇದಾದ ಬಳಿಕ ಬಾಲಕಾರ್ಮಿಕ ಪದ್ಧತಿ ತಡೆಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವು ಸಂವಿಧಾನಾತ್ಮಕ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಯಿತು. ಭಾರತದ ಸಂವಿಧಾನ ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಹೇಳುವಂತೆ, "ಪ್ರತಿ ಮಕ್ಕಳು ಕಲಿಕೆಯ ಸಂತಸವನ್ನು ಅನುಭವಿಸಲು ಮತ್ತು ಕನಿಷ್ಠ 14 ವರ್ಷ ತುಂಬುವವರೆಗೆ ಆಟವಾಡುತ್ತಾ ಕಳೆಯಲು ಅವಕಾಶ ನೀಡಬೇಕು" ಆದರೆ ಇದು ಇನ್ನೂ ವಾಸ್ತವಿಕವಾಗಿ ಜಾರಿಯಾಗಿಲ್ಲ.

ಮಕ್ಕಳನ್ನು ಕೃಷಿ, ಮೀನುಗಾರಿಕೆ, ಬೇಟೆ, ತೋಟಗಾರಿಕೆ, ಉತ್ಪಾದನಾ ಕ್ಷೇತ್ರ, ನಿರ್ವಹಣಾ ಕ್ಷೇತ್ರ, ನಿರ್ಮಾಣ ಕ್ಷೇತ್ರ, ಸಾರಿಗೆ ಉದ್ಯಮ, ವ್ಯಾಪಾರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ. ಹೆಚ್ಚಾಗಿ ಬಾಲಕಾರ್ಮಿಕರು ಕಂಡುಬರುವ ಕ್ಷೇತ್ರವೆಂದರೆ ಬೀಡಿ ಸುತ್ತುವ ಘಟಕಗಳು, ಹೋಟೆಲ್ ಮತ್ತು ಡಾಬಾಗಳು, ಬೀಗ ತಯಾರಿಕೆ, ಕಂಬಳಿ ಉದ್ಯಮ, ಬೆಂಕಿಪೆಟ್ಟಿಗೆ ಮತ್ತು ಪಟಾಕಿ ಕಾರ್ಖಾನೆ, ಅಮೂಲ್ಯ ಹರಳುಗಳ ಪಾಲಿಶಿಂಗ್ ಕೇಂದ್ರಗಳು, ಗಾಜು ಮತ್ತು ಹಿತ್ತಾಳೆ ಪಾತ್ರೆಗಳ ಉದ್ಯಮ, ಬಳೆ ಮತ್ತು ಹೊಸೈರಿ ತಯಾರಿಕಾ ಘಟಕಗಳು ಮತ್ತು ಬುಡಕಟ್ಟು ಪ್ರದೇಶಗಳು.

ಚಿಂದಿ ಆಯುವ ಮಕ್ಕಳು ಕಸದಿಂದ ಪೇಪರ್, ಪ್ಲಾಸ್ಟಿಕ್ ಮತ್ತು ಇತರ ಉತ್ಪನ್ನಗಳನ್ನು ಆಯುವ ದೃಶ್ಯಗಳನ್ನು ಸಾಮಾನ್ಯವಾಗಿ ನೋಡಬಹುದಾಗಿದೆ. ಸಣ್ಣಮಕ್ಕಳು ಸಾಮಾನ್ಯವಾಗಿ ಅಪಾಯಕಾರಿ ರಸ್ತೆದಾಟುವ ಸ್ಥಳಗಳಲ್ಲಿ ಸಣ್ಣ ವ್ಯಾಪಾರ, ಶೂ ಪಾಲಿಶಿಂಗ್ ಮತ್ತು ಪತ್ರಿಕೆಗಳನ್ನು ಮಾರಾಟ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು. ಇಂಥ ಮಕ್ಕಳ ವಾಸಸ್ಥಾನ ಸಾಮಾನ್ಯವಾಗಿ ಬೀದಿ ಅಥವಾ ಫುಟ್‌ಪಾತ್, ರೈಲ್ವೆ ಪ್ಲಾಟ್‌ಫಾರಂ ಅಥವಾ ಕೊಳಗೇರಿಗಳು.

ಭಾರತದಲ್ಲಿ ಬೇರಾವುದೇ ದೇಶಗಳಿಗಿಂತ ಅಧಿಕ ಸಂಖ್ಯೆಯ ಬಾಲಕಾರ್ಮಿಕರಿದ್ದಾರೆ. ಜತೆಗೆ ಬಾಲಕಾರ್ಮಿಕರ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಿದೆ ಎಂದು ಏಷ್ಯನ್ ಲೇಬರ್ ಮಾನಿಟರ್ ಅಂದಾಜು ಮಾಡಿದೆ. ಇದರ ಪ್ರಕಾರ, ಭಾರತದ ಪ್ರತಿ ಮೂರು ಮನೆಗಳ ಪೈಕಿ ಒಂದು ಮನೆಯಲ್ಲಿ ಬಾಲಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. 5–15 ವರ್ಷ ವಯಸ್ಸಿನ ಪ್ರತಿ ನಾಲ್ಕು ಮಕ್ಕಳ ಪೈಕಿ ಒಬ್ಬ ಬಾಲಕಾರ್ಮಿಕನಾಗಿ ದುಡಿಯುತ್ತಿರುತ್ತಾನೆ. ದೇಶದ ಒಟ್ಟು ಆದಾಯದ ಶೇಕಡ 20ರಷ್ಟು ಪಾಲು ಬಾಲಕಾರ್ಮಿಕರಿಂದ ಬರುತ್ತಿದೆ ಎನ್ನುವುದು ಗಮನಾರ್ಹ. ಒಂದು ಅಂದಾಜಿನ ಪ್ರಕಾರ, ಭಾರತದ ಒಟ್ಟು 25 ಕೋಟಿ ಮಕ್ಕಳ ಪೈಕಿ 10ರಿಂದ 14 ಕೋಟಿ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇಂಥ ಮಕ್ಕಳ ಅಭಿವೃದ್ಧಿ, ಪ್ರಗತಿ, ಕಲಿಕೆ, ಆರೋಗ್ಯ ರಕ್ಷಣೆ, ಮನರಂಜನಾ ಅವಕಾಶ ಎಲ್ಲಕ್ಕಿಂತ ಹೆಚ್ಚಾಗಿ ತೀರಾ ಅನಿವಾರ್ಯವಾದ ಪ್ರೀತಿಯಿಂದ ವಂಚಿತರಾಗುತ್ತಿದ್ದಾರೆ. ವಯಸ್ಕರ ಕೆಲಸದ ಪ್ರಪಂಚಕ್ಕೆ ಒತ್ತಡಪೂರ್ವಕವಾಗಿ ಅವರನ್ನು ತಳ್ಳಿ, ಕಡಿಮೆ ವೇತನಕ್ಕೆ ದುಡಿಸಿಕೊಳ್ಳಲಾಗುತ್ತಿದೆ. ಈ ವರ್ಗದವರು ಮಾತ್ರ ತಮ್ಮ ಪ್ರತಿನಿಧಿಗಳನ್ನು ಯಾವ ಶಾಸನಸಭೆಗಳಲ್ಲೂ ಹೊಂದಿರುವುದಿಲ್ಲ; ಇವರಿಗೆ ಯಾವ ಸಂಘಟನೆಗಳೂ ಇಲ್ಲ; ಆದ್ದರಿಂದ ಅವರಿಗೆ ಯಾವುದೇ ಅಸಹನೆ ಇಲ್ಲ, ಜತೆಗೆ ಉತ್ತಮ ಸೌಲಭ್ಯಕ್ಕಾಗಿ ಅಥವಾ ವೇತನ ಹೆಚ್ಚಳಕ್ಕಾಗಿ ಅವರ ಬೇಡಿಕೆಗಳೂ ಯಾವುದೂ ಇಲ್ಲ; ಈ ಕಾರಣದಿಂದ ಅವರ ವೇತನ ತೀರಾ ಕಡಿಮೆ ಮತ್ತು ಅವರನ್ನು ಕಾರ್ಮಿಕ ಮಾರುಕಟ್ಟೆಯಲ್ಲಿ ಯಾರೂ ಗಂಭೀರವಾಗಿ ಪರಿಗಣಿಸುವುದೂ ಇಲ್ಲ.

ಕಠಿಣ ಹಾಗೂ ದೀರ್ಘ ಕೆಲಸದ ಅವಧಿಯಿಂದಾಗಿ ಮಕ್ಕಳು ಯೋಚನಾಶಕ್ತಿಯನ್ನೇ ಕಳೆದುಕೊಳ್ಳುತ್ತಾರೆ. ಜತೆಗೆ ಯಾಂತ್ರಿಕ ಜೀವನಕ್ಕೆ ಸಣ್ಣ ವಯಸ್ಸಿನಲ್ಲೇ ರೂಢಿಸಿಕೊಳ್ಳುವುದರಿಂದ ಅವರ ಸೃಜನಶೀಲತೆ ಸತ್ತುಹೋಗುತ್ತದೆ. ಇದು ಅವರ ಬೌದ್ಧಿಕ ಹಾಗೂ ಭೌತಿಕ ಬೆಳವಣಿಗೆಯನ್ನು ತಡೆಯುತ್ತದೆ. ಇದರ ಪರಿಣಾಮ ಅತ್ಯಂತ ಘೋರ. ಇಂಥ ಬಾಲಕಾರ್ಮಿಕರು ಬಹುಬೇಗ ಆಸ್ತಮಾ, ಕ್ಷಯ, ಕಿವಿ ತಮಟೆಗೆ ಹಾನಿ, ಚರ್ಮರೋಗಗಳಿಗೆ ತುತ್ತಾಗುತ್ತಾರೆ. ಬಹಳಷ್ಟು ಸಂದರ್ಭಗಳಲ್ಲಿ ಕೆಲಸದ ಅವಧಿಯಲ್ಲಿ ತಮ್ಮ ಮೊಣಕಾಲುಗಳನ್ನು ಕಳೆದುಕೊಳ್ಳುವ ಸಂದರ್ಭವೂ ಇರುತ್ತದೆ. ಇಂಥ ದಣಿವಿನಿಂದ ಮುಕ್ತಿ ಪಡೆಯುವಸಲುವಾಗಿ ಮದ್ಯಪಾನ ಅಥವಾ ಮಾದಕ ವಸ್ತುಗಳ ಚಟಕ್ಕೆ ಬಲಿ ಬೀಳುತ್ತಾರೆ.

ಬಾಲ್ಯದಲ್ಲೇ ಅವರು ಎದುರಿಸಿದ ತೊಂದರೆಗಳಿಂದಾಗಿ ಹಲವು ಮಂದಿ ಅಪರಾಧ ಜಗತ್ತಿನತ್ತ ಹೊರಳುತ್ತಾರೆ. ಹಲವು ಮಂದಿ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಾರೆ. ಇನ್ನೂ ಹಲವು ಮಂದಿ ವೇಶ್ಯಾವಾಟಿಕೆಯ ಕೂಪಕ್ಕೆ ಬಲಿಯಾಗುತ್ತಾರೆ. ಇಡೀ ವ್ಯವಸ್ಥೆಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಾತಾರವಣ ಅವರಿಗೆ ಪೂರಕವಾಗಿಲ್ಲ. ಇವು ಮೂರೂ ಅಂಶಗಳು ಮಕ್ಕಳ ಭವಿಷ್ಯ ಹಾಳಾಗಲು ಕಾರಣವಾಗಿವೆ ಎನ್ನುವುದು ನಿಸ್ಸಂದೇಹ. ಅವರ ಯಾವುದೇ ತಪ್ಪಿಲ್ಲದೇ, ತಂದೆ ತಾಯಿ ಮಾಡುವ ತಪ್ಪಿಗೆ ಅವರನ್ನು ಶಿಕ್ಷಿಸಲಾಗುತ್ತದೆ.

ಇಂಥ ಗಂಭೀರ ಸಮಸ್ಯೆಯ ಹಿನ್ನೆಲೆಯಲ್ಲಿ ಇಡೀ ಸಮಾಜ ಇಂಥ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಕಂಕಣಬದ್ಧವಾಗಬೇಕಿದೆ. ಯಾವುದೇ ಸಮಾಜದಲ್ಲಿ ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನೆ ಅಂತಿಮ ಗುರಿಯಾಗಿದ್ದರೂ, ನೈಜ ಪರಿಸ್ಥಿತಿಯ ವಾಸ್ತವಾಂಶಗಳನ್ನು ಅಲ್ಲಗಳೆಯಲಾಗದು. ಇದೀಗ ಮೊದಲ ಆದ್ಯತೆ ಬಾಲಕಾರ್ಮಿಕರ ಕೆಲಸದ ಸ್ಥಿತಿಗತಿಯನ್ನು ಉತ್ತಮಪಡಿಸುವುದು. ಭಾರತ ಸರ್ಕಾರದ



www.shikarat.com

ನೀತಿಯಂತೆ, ಅಪಾಯಕಾರಿ ಉದ್ಯಮಗಳನ್ನು ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದಕ್ಕೆ ತಡೆ ಇದೆ. ಅಂತೆಯೇ ಇತರ ವೃತ್ತಿಗಳಲ್ಲಿ ಅವರ ಸ್ಥಿತಿಗತಿಯನ್ನು ನಿಯಂತ್ರಿಸುವ ಕಾನೂನುಗಳೂ ಇವೆ.

ಭಾರತದ ಸಂವಿಧಾನದ 14ನೇ ವಿಧಿಯ ಅನ್ವಯ ಹದಿನಾಲ್ಕು ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ಮೂಲಭೂತ ಹಕ್ಕುಗಳ ಅನುಷ್ಠಾನ ಅನಿವಾರ್ಯ. "ಹದಿನಾಲ್ಕು ವರ್ಷಕ್ಕಿಂತ ಕೆಗಳಿನ ಮಕ್ಕಳನ್ನು ಉದ್ಯೋಗಕ್ಕೆ ಯಾವುದೇ ಕಾರ್ಖಾನೆಗಳಲ್ಲಿ ನೇಮಿಸಿಕೊಳ್ಳುವಂತಿಲ್ಲ. ಅಥವಾ ಯಾವುದೇ ಅಪಾಯಕಾರಿ ಉದ್ಯೋಗಕ್ಕೆ ಹಚ್ಚುವಂತಿಲ್ಲ". ಸಂವಿಧಾನದ 39 (ಇ) ವಿಧಿಯ ಅನ್ವಯ ಮಕ್ಕಳ ಎಳೆಯ ವಯಸ್ಸನ್ನು ದುರುಪಯೋಗಪಡಿಸಿಕೊಳ್ಳಬಾರದು. ಮತ್ತು ಯಾವುದೇ ಆರ್ಥಿಕ ಅಗತ್ಯತೆಗಳಿದ್ದರೂ, ಅವರ ವಯಸ್ಸು ಮತ್ತು ಸಾಮರ್ಥ್ಯಕ್ಕೆ ಅನುಗುಣವಲ್ಲದ ಕೆಲಸದಲ್ಲಿ ತೊಡಗಿಸಬಾರದು.

ಸಂವಿಧಾನದ 39 (ಎಫ್) ವಿಧಿಯ ಅನ್ವಯ, ಮಕ್ಕಳು ಆರೋಗ್ಯಕರ ರೀತಿಯಲ್ಲಿ ಬೆಳವಣಿಗೆ ಹೊಂದಲು ಅಗತ್ಯ ಅವಕಾಶ ಮತ್ತು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಅವರ ಸ್ವಾತಂತ್ರ್ಯ ಮತ್ತು ಗೌರವವನ್ನು ಕಾಪಾಡಬೇಕು. ಈ ಮೂಲಕ ಅವರ ಬಾಲ್ಯ ಮತ್ತು ಯುವಜೀವನವನ್ನು ಶೋಷಣೆಯಾಗದಂತೆ ತಡೆಯಬೇಕು. ಇದೀಗ ಹದಿನಾಲ್ಕು ವರ್ಷದ ವರೆಗಿನ ಮಕ್ಕಳಿಗೆ ಉಚಿತ ಹಾಗೂಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಪರಿವರ್ತಿಸಲಾಗಿದೆ. ಹಲವು ಕಾಯ್ದೆಗಳಲ್ಲಿ ಬಾಲಕಾರ್ಮಿಕರ ಸುರಕ್ಷೆಗೆ ಅಗತ್ಯವಾದ ಕ್ರಮಗಳನ್ನು ಅಳವಡಿಸಲಾಗಿದೆ. ಉದಾಹರಣೆಗೆ ಫ್ಯಾಕ್ಟರಿಗಳ ಕಾಯ್ದೆ (1948), ಗಣಿಗಾರಿಕೆ ಕಾಯ್ದೆ (1950), ತೋಟಗಾರಿಕೆ ಕಾರ್ಮಿಕ ಕಾಯ್ದೆ (1951) ಮತ್ತು ಇತರ ಕಾಯ್ದೆಗಳು. 1974ರಲ್ಲಿ ಭಾರತ ರಾಷ್ಟ್ರೀಯ ಮಕ್ಕಳ ನೀತಿಯನ್ನು ಜಾರಿಗೆ ತಂದಿತು. 1975ರಲ್ಲಿ ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. 1986ರಲ್ಲಿ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯನ್ನು ಅನುಷ್ಠಾನಗೊಳಿಸಿರುವುದು ಸರ್ಕಾರದ ಸಕ್ರಿಯ ಮಧ್ಯಸ್ಥಿಕೆಗೆ ಸಾಕ್ಷಿ.

ಎರಡನೇ ಪ್ರಮುಖ ಉಪಕ್ರಮವೆಂದರೆ, ಬಾಲಕಾರ್ಮಿಕರ ಕುರಿತ ರಾಷ್ಟ್ರೀಯ ನೀತಿಯನ್ನು 1987ರಲ್ಲಿ ರೂಪಿಸಿದ್ದು. ಈ ಸಮಸ್ಯೆಯನ್ನು ಹಂತಹಂತವಾಗಿ ಬಗೆಹರಿಸಲು ಇದರಲ್ಲಿ ಒತ್ತು ನೀಡಲಾಗಿದೆ. ಇದಕ್ಕೆ ಮೂರು ಪ್ರಮುಖ ತಂತ್ರಗಳನ್ನು ಅನುಸರಿಸಲಾಗುತ್ತಿದೆ. ಕಾಯ್ದೆಗಳಿಗೆ ಹೆಚ್ಚಿನ ಬಲ ಮತ್ತು ಅಧಿಕಾರ ನೀಡುವ ಸಲುವಾಗಿ ತಿದ್ದುಪಡಿ ತರುವುದು, ಕಾನೂನುಗಳ ಕಟ್ಟುನಿಟ್ಟಿನ ಜಾತಿಗೆ ಕ್ರಮ ಕೈಗೊಳ್ಳುವುದು, ಬಾಲಕಾರ್ಮಿಕರ ಅಭಿವೃದ್ಧಿ ಯೋಜನೆಗಳಿಗೆ ಗಮನ ಹರಿಸುವುದು ಮತ್ತು ಉದ್ಯೋಗದಿಂದ ಹೊರತೆಗೆದ ಮಕ್ಕಳಿಗೆ ಪ್ರಯೋಜನವಾಗುವಂತೆ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳುವುದು. ಅವರಿಗೆ ಶಿಕ್ಷಣ, ಆರೋಗ್ಯ ಸೌಲಭ್ಯ ಮತ್ತು ವೃತ್ತಿಶಿಕ್ಷಣ ತರಬೇತಿ ವ್ಯವಸ್ಥೆ ಮಾಡುವುದು.

ಈ ಪಿಡುಗು ನಿವಾರಣೆಗೆ ಕೇವಲ ಸಂವಿಧಾನಾತ್ಮಕ ಅಥವಾ ಕಾನೂನು ಕ್ರಮಗಳಿಂದಷ್ಟೇ ಸಾಧ್ಯವಿಲ್ಲ. ಇದಕ್ಕೆ ಪೂರಕವಾದ ಸಮಗ್ರ ಸಾಮಾಜಿಕ– ಆರ್ಥಿಕ ನೀತಿಗಳೂ ಅಗತ್ಯ. ಶೈಕ್ಷಣಿಕವಾಗಿ ಮೇಲೆತ್ತುವುದು, ಸಾಮಾಜಿಕ ಮನೋಭಾವನೆಯನ್ನು ಸಮಗ್ರ ಬದಲಾವಣೆ ತರುವುದು ಕೂಡಾ ಮುಖ್ಯ. ಸರ್ಕಾರದಿಂದಲೇ ಎಲ್ಲವನ್ನೂ ನಿರೀಕ್ಷಿಸುವುದು ಕಾರ್ಯಸಾಧುವಾಗದು. ಇತರ ಸ್ವಯಂಸೇವಾ ಸಂಘ ಸಂಸ್ಥೆಗಳು ಕೂಡಾ ಈ ನಿಟ್ಟಿನಲ್ಲಿ ಕೈಜೋಡಿಸಬೇಕು. ಜತೆಗೆ ಉದ್ಯೋಗದಾತರ ಮನೋಪ್ರವೃತ್ತಿಯಲ್ಲಿ ದೊಡ್ಡ ಬದಲಾವಣೆ ಆಗಬೇಕು. ಇದರ ಜತೆಗೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲ ಬಾಲಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಕೇಂದ್ರದಲ್ಲಿ ಒಂದೇ ವಿಭಾಗವನ್ನು ಅಥವಾ ಇಲಾಖೆಯನ್ನು ಅಸ್ತಿತ್ವಕ್ಕೆ ತರುವುದು ಕೂಡಾ ವಿವೇಚನಾ ಕ್ರಮವಾದೀತು. ಇದು ಇಡೀ ಆರ್ಥಿಕತೆಯ ಸಮಗ್ರ ಬದಲಾವಣೆಗೆ ಮೊದಲ ಹೆಜ್ಜೆಯಾದೀತು.

ಬಾಲಕಾರ್ಮಿಕ ಪದ್ಧತಿಯ ಕುರಿತ ನೀತಿ ನಿಯಮಗಳ ನಿರಂತರ ಪರಾಮರ್ಶೆಗಾಗಿ ಜಂಟಿ ಸಂಸದೀಯ ಸದನ ಸಮಿತಿ ನೇಮಿಸುವುದು ಕೂಡಾ ಅಗತ್ಯ. ಪ್ರತಿನಿಧಿತ್ವವೇ ಇಲ್ಲದ ಈ ಕ್ಷೇತ್ರವನ್ನು ಪ್ರತಿನಿಧಿಸುವ ಸಲುವಾಗಿ ಒಂದು ಪ್ರಬಲ ಸಂಸದರ ಲಾಬಿ ಹುಟ್ಟಿಕೊಳ್ಳಬೇಕು. ಇದು ಖಂಡಿತಾ ಬದಲಾವಣೆಯ ಮಧ್ಯವರ್ತಿಯಾಗಿ ಕೆಲಸ ಮಾಡಬಲ್ಲದು. ತಳಹಂತದಲ್ಲಿ, ಮಕ್ಕಳ ಕೆಲಸದ ವಾತಾವರಣವನ್ನು ಪರಿಣಾಮಕಾರಿಯಾಗಿ ಸುಧಾರಿಸಬಹುದು. ಇಂಥ ಮಕ್ಕಳಿಗೆ ಕೂಡಾ ರಜೆ ಸೌಲಭ್ಯ ಮತ್ತು ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು. ಬೌದ್ಧಿಕ ಮತ್ತು ಭೌತಿಕ ದೌರ್ಜನ್ಯಗಳನ್ನು ಉದ್ಯೋಗದಾತರು ನೀಡಿದಲ್ಲಿ, ಅಂಥವರನ್ನು ಕಟುವಾಗಿ ಶಿಕ್ಷಿಸುವ ಕ್ರಮ ಜಾರಿಯಾಗಬೇಕು. ಇದರ ಜತೆಗೆ ತಂದೆ– ತಾಯಿಯ ಸಾಲದ ಹೊರೆ ಪುಟ್ಟ ಮಕ್ಕಳನ್ನು ಬಾಧಿಸದಂತೆ ನೋಡಿಕೊಳ್ಳಬೇಕು.

ಬಾಲಕಾರ್ಮಿಕ ಪದ್ಧತಿ ತಡೆಯುವ ನಿಟ್ಟಿನಲ್ಲಿ ಕೈಗೊಂಡ ಸಂವಿಧಾನಾತ್ಮಕ ಚೌಕಟ್ಟು ಮತ್ತು ನೀತಿನಿಯಮಗಳು ಮಕ್ಕಳ ಪರಿಸ್ಥಿತಿ ಸುಧಾರಿಸಲು ಹೆಚ್ಚುಕಡಿಮೆ ವಿಫಲವಾಗಿವೆ ಎಂದೇ ಹೇಳಬೇಕು. ಅವರ ಕಲ್ಯಾಣಕ್ಕಾಗಿ ರೂಪಿಸಿದ ಯೋಜನೆಗಳು ಇನ್ನೂ ಕಾಗದಗಳಲ್ಲೇ ಕೊಳೆಯುತ್ತಿದ್ದು, ಅಗತ್ಯ ಅನುದಾನ ಹಾಗೂ ರಾಜಕೀಯ ಇಚ್ಛಾಶಕ್ತಿಯನ್ನು ಎದುರು ನೋಡುತ್ತಿವೆ. ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿವಾರಿಸಲು ನಡೆದ ಪ್ರಯತ್ನಗಳು ತೀರಾ ವಿರಳ. ಮಕ್ಕಳ ಶೋಷಣೆಗಾಗಿ ತಂದೆ/ತಾಯಿಯನ್ನು ಅಥವಾ ಉದ್ಯೋಗದಾತರನ್ನು ಶಿಕ್ಷಿಸಿದ ನಿದರ್ಶನಗಳು ಇಲ್ಲ. ಅವರನ್ನು ಕೆಲಸಕ್ಕೆ ಕಳುಹಿಸುವುದರ ಬದಲಾಗಿ ಇತರ ಪರ್ಯಾಯ ಸಾಧ್ಯತೆಗಳ ಬಗೆಗೂ ಚಿಂತನೆ ನಡೆದಿಲ್ಲ. ಈ ಎಲ್ಲ ಕಾರಣಗಳಿಂದ ಬಾಲಕಾರ್ಮಿಕ ಪದ್ಧತಿ ಭಾರತದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿದೆ. ಇದು ಸಂಕೀರ್ಣ ಸಮಸ್ಯೆಯಾಗಿ ಬೆಳೆದಿದ್ದು, ವಿದೇಶೀಯರು ಒಳ್ಳೆಯದು ಮಾಡುವಂತೆಯೂ ಇಲ್ಲ;

ಭಾರತದ ಸಾಮಾಜಿಕ ಕಾರ್ಯಕರ್ತರಿಂದಲೂ ನಿವಾರಿಸಲು ಸಾಧ್ಯವಾಗುವಂಥದ್ದಲ್ಲ ಅಥವಾ ಸರ್ಕಾರಕ್ಕೆ ಮನವರಿಕೆಯಾಗಿ ಪರಿಹರಿಸುವಂಥದ್ದೂ ಅಲ್ಲ. ಇದನ್ನು ಕೇವಲ ಶಿಕ್ಷೆ ಅಥವಾ ದೋಷಾರೋಪಣೆಯಿಂದ ಬಗೆಹರಿಸಲು ಸಾಧ್ಯವಿಲ್ಲ. ಧರ್ಮ, ಸಂಸ್ಕೃತಿ, ಸಾಮಾಜಿಕ ಹಾಗೂ ಜನಾಂಗೀಯ ಹಿನ್ನೆಲೆಯಿಂದ ವೈವಿಧ್ಯಮಯವಾಗಿರುವ ಸಮಾಜದಲ್ಲಿ, ಎಲ್ಲ ವರ್ಗಗಳಿಗೂ ಅಗತ್ಯ ಎನಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಸುಲಭ ಸಾಧ್ಯವಲ್ಲ. ಅಂದರೆ ಬದಲಾವಣೆ ಪ್ರಕ್ರಿಯೆ ನಿಧಾನವಾಗಿಯೇ ನಡೆಯಬೇಕು.



www.shikarat.com

ಮುಂದಿನ ಕೆಲ ವರ್ಷಗಳ ಕಾಲವಾದರೂ ಈ ಸಮಸ್ಯೆಯನ್ನು ಹೊಂದಿರಲೇಬೇಕು. ತಕ್ಷಣದ ಪರಿಹಾರವೆಂದರೆ ಈ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದು ಮತ್ತು ನಿಧಾನವಾಗಿಯಾದರೂ ಬದಲಾವಣೆಗೆ ಬದ್ಧರಾಗಿರುವುದು.

ಎಳೆಯ ಕೈಗಳು ತಯಾರಿಸುವಾಗ ಅನುಭವಿಸಿದ ನೋವಿನ ಗೌರವಾರ್ಥವಾಗಿ ಭಾರತೀಯ ಕಂಬಳಿಗಳ ಆಮದನ್ನು ನಿಷೇಧಿಸುವ ಮೂಲಕ ಪಾಶ್ಚಾತ್ಯರು ತಮ್ಮ ಆತ್ಮಸಾಕ್ಷಿಯನ್ನು ಪ್ರದರ್ಶಿಸಿದ್ದಾರೆ. ಆದರೆ ಮಕ್ಕಳ ಭವಿಷ್ಯದಿಂದ ಕಾರ್ಯಸಾಧು ಎನಿಸಿದ ಯೋಚನೆಗಳನ್ನು ಮಾಡಬೇಕಿದೆ. ಇಂಥ ಕ್ರಮ ಅವರ ಜೀವನಾಧಾರವನ್ನೇ ಕಸಿದುಕೊಳ್ಳುತ್ತದೆ ಎನ್ನುವ ವಾಸ್ತವವನ್ನು ಅರ್ಥ ಮಾಡಿಕೊಳ್ಳಬೇಕಿದೆ. ಖಂಡಿತವಾಗಿಯೂ ಅಪರಾಧ, ವೇಶ್ಯಾವಾಟಿಕೆ ಹಾಗೂ ನಿರ್ಗತಿಕರಾಗುವುದು ಮಾತ್ರ ಆಗ ಬಾಲಕಾರ್ಮಿಕರಿಗೆ ಉಳಿಯುವ ದಾರಿ.

### 13. ಭಾರತೀಯ ಸಿನಿಮಾ ಮತ್ತು ಸಾಮಾಜಿಕ ಜವಾಬ್ದಾರಿ

ಅಭಿವೃದ್ಧಿಪಡಿಸಬೇಕಾದ ಪ್ರಮುಖ ಅಂಶಗಳು

1. ಸಮೂಹ ಸಂವಹನದ ಪ್ರಮುಖ ಮಾರ್ಗವಾಗಿ ಸಿನಿಮಾ
2. ಸಿನಿಮಾ ಬಗೆಗಿನ ವಿಭಿನ್ನ ದೃಷ್ಟಿಕೋನ
3. ಸಮಾಜದ ಮೇಲೆ ಸಿನಿಮಾ ಪರಿಣಾಮ– ಸಾಮಾಜಿಕ ಜವಾಬ್ದಾರಿಯ ಪರಿಕಲ್ಪನೆ
4. ಭಾರತೀಯ ಸಿನಿಮಾದ ಪ್ರಸ್ತುತ ಸ್ಥಿತಿ ಗತಿ– ಎಳೆ ಮನಸ್ಸುಗಳ ಮೇಲೆ ಪರಿಣಾಮ
5. ಲಾಭದ ಉದ್ದೇಶವಷ್ಟೇ ಚಿತ್ರನಿರ್ಮಾಪಕರ ಗುರಿಯಾಗಬಾರದು.
6. ಭಾರತೀಯ ಚಿತ್ರನಿರ್ಮಾಪಕರು ಸಾಮಾಜಿಕ ಜವಾಬ್ದಾರಿ ಪ್ರದರ್ಶಿಸಬೇಕಾದರೆ ಏನು ಮಾಡಬೇಕು?

ರಾಜಾ ಹರಿಶ್ಚಂದ್ರ ಚಿತ್ರದ ಮೂಲಕ ಭಾರತದಲ್ಲಿ ಚಲನಚಿತ್ರ ಯುಗ ಆರಂಭವಾದಾಗಿನಿಂದಲೂ (1931) ಚಲನಚಿತ್ರ ಪ್ರಮುಖ ಸಮೂಹ ಸಂವಹನ ಮಾಧ್ಯಮವಾಗಿ ಅಸ್ತಿತ್ವ ಉಳಿಸಿಕೊಂಡಿದೆ. ಮನೋರಂಜನೆ ಹಾಗೂ ಯೋಚನೆಗಳನ್ನು ಸಂವಹನ ಮಾಡುವ ಎರಡೂ ಸಾಧ್ಯತೆಗಳನ್ನು ಈ ಮಾಧ್ಯಮ ಹೊಂದಿರುವ ಹಿನ್ನೆಲೆಯಲ್ಲಿ, ಇತರ ಮಾಧ್ಯಮಗಳನ್ನು ಬಹಳಷ್ಟು ಹಿಂದಕ್ಕೆ ಹಾಕಿ ಬೆಳೆದಿದೆ. ಅದು ವ್ಯಾಪ್ತಿಯಲ್ಲಿರಬಹುದು ಅಥವಾ ಪ್ರಭಾವದಲ್ಲಿರಬಹುದು. ಇದರ ಜತೆಗೆ ಸಾಹಿತ್ಯದಂತೆ ಸಿನಿಮಾ ಮಾಧ್ಯಮ ಕೂಡಾ ಹಲವು ಕಾಲಘಟ್ಟಗಳನ್ನು ಬಿಂಬಿಸಿದೆ. ಹಾಗೂ ಮುಂದಿನ ಪೀಳಿಗೆಗೆ ಪ್ರಭಾವವನ್ನೂ ಬೀರಿದೆ. ಯಾವುದೇ ಕಲಾಪ್ರಕಾರ ಕೂಡಾ ತಾನು ಹುಟ್ಟಿದ ಸಮಾಜದ ಸ್ಥಿತಿಗತಿಗಳನ್ನು ಪ್ರತಿಫಲಿಸುತ್ತದೆ. ಜತೆಗೆ ಆ ಸಮಾಜದ ಆಶೋತ್ತರಗಳನ್ನು, ಆಕಾಂಕ್ಷೆಗಳಿಗೆ, ಹತಾಶೆಗಳಿಗೆ ಧ್ವನಿಯಾಗುತ್ತದೆ. ಇಷ್ಟೇ ಅಲ್ಲದೆ ಸಾಮಾಜಿಕ ವ್ಯವಸ್ಥೆಯ ವೈರುಧ್ಯಗಳಿಗೆ ಕನ್ನಡಿ ಹಿಡಿಯುತ್ತದೆ. ಸಿನಿಮಾ ಕೂಡಾ ಇದಕ್ಕೆ ಹೊರತಲ್ಲ.

ಸಿನಿಮಾ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಇ ದನ್ನು ನಿರ್ಮಾಪಕರು ಮತ್ತು ಹಣ ಹೂಡಿಕೆದಾರರು ಲಾಭದಾಯಕ ಉದ್ಯಮವಾಗಿ ಪರಿಗಣಿಸುತ್ತಾರೆ. ನಟ– ನಟಿಯರಿಗೆ ಇದು ತಮ್ಮ ಗ್ಲಾಮರ್ ಮತ್ತು ಖ್ಯಾತಿ ಉಳಿಸಿಕೊಳ್ಳುವ ಜತೆಗೆ ಇದಕ್ಕೆ ಅಗತ್ಯವಾದ ಹಣಕಾಸು ಸಂಪಾದನೆಯ ಮಾರ್ಗ. ನಿರ್ದೇಶಕರು ಮತ್ತು ಇತರ ಕಲಾವಿದರು ಇದನ್ನು ಕಲೆಯ ಒಂದು ಪ್ರಕಾರವಾಗಿ ಪರಿಗಣಿಸುತ್ತಾರೆ. ಕೆಲವರಿಗೆ ಇದು ಒಂದು ಸಾಹಿತ್ಯದ ಹಾಗೂ ಅದರ ಸಂದೇಶದ ದೃಶ್ಯ– ಶ್ರವ್ಯ ಭಾಷಾಂತರ. ಸರ್ಕಾರಕ್ಕೆ ಸಿನಿಮಾ, ಉದ್ಯೋಗ ಸೃಷ್ಟಿ ಹಾಗೂ ಆದಾಯ ಗಳಿಕೆಯ ಪ್ರಮುಖ ಕ್ಷೇತ್ರ. ಆದರೆ ಸಿನಿಮಾ ಪ್ರೇಕ್ಷಕರಿಗೆ ಮಾತ್ರ ಇದು ಅಗ್ಗದ ಹಾಗೂ ಆಸಕ್ತಿದಾಯಕ ಮನೋರಂಜನಾ ಪ್ರಕಾರ. ವಿಭಿನ್ನ ವ್ಯಕ್ತಿಗಳಿಗೆ ಅದು ಏನೇ ಆಗಿದ್ದರೂ, ಸಿನಿಮಾವನ್ನು ಸಾಮಾನ್ಯವಾಗಿ ಒಂದು ಕಲಾಪ್ರಕಾರ ಎಂದು ಪರಿಗಣಿಸಲಾಗುತ್ತದೆ. ಇದು ಜನರಿಗೆ ಮನರಂಜನೆ ಒದಗಿಸುವ ಉದ್ದೇಶದಿಂದ ಚಲಿಸುವ ಚಿತ್ರಸರಣಿಯನ್ನು ಸ್ಕ್ರೀನ್ ಮೇಲೆ ಪ್ರದರ್ಶಿಸುತ್ತಾ ಹೋಗುತ್ತದೆ. ಇತರ ಪ್ರಾಥಮಿಕ ಅಂಶಗಳಾದ ಡಾನ್ಸ್, ಗೀತೆ, ಥ್ರಿಲ್, ಹಾಸ್ಯ ಮತ್ತು ಚಿತ್ರಗಳನ್ನು ಇದು ಒಳಗೊಂಡಿರುತ್ತದೆ. ವ್ಯಕ್ತಿಗಳಿಗೆ ಸಿನಿಮಾ ಏನು ಎನ್ನುವುದಕ್ಕಿಂತ ಹೆಚ್ಚಾಗಿ, ವಿಸ್ತೃತವಾಗಿ ಇದು ಸಮೂಹದ ಮೇಲೆ ಬೀರುವ ಪರಿಣಾಮ ಮುಖ್ಯವಾಗುತ್ತದೆ.

ಸಿನಿಮಾ ಸಮಾಜದ ಮೇಲೆ ಅತ್ಯಂತ ದೊಡ್ಡ ಪ್ರಭಾವ ಬೀರುವ ಮಾಧ್ಯಮವಾಗಿದೆ. ಈ ಪ್ರಭಾವದ ಪರಿಣಾಮ ಒಳ್ಳೆಯದಿರಬಹುದು ಅಥವಾ ಕೆಟ್ಟದ್ದೂ ಇರಬಹುದು. ಆಧರೆ ಇಂಥ ಪರಿಣಾಮ ಆ ಚಿತ್ರದಲ್ಲಿ ಒಳಗೊಂಡಿರುವ ಇತರರನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಚಿತ್ರ ನಿರ್ಮಾಪಕರು, ಕಲಾವಿದರು, ಪ್ರೇಕ್ಷಕರು ಮತ್ತು ಸರ್ಕಾರ. ಕಲಾಪ್ರಕಾರ ಎನಿಸಿದ ಸಿನಿಮಾಗೆ ಸಾಮಾಜಿಕ ಜವಾಬ್ದಾರಿ ಇರಬೇಕೇ? ಸಾಮಾಜಿಕ ಜವಾಬ್ದಾರಿ ಎಂದರೆ, ಸಮಾಜದಲ್ಲಿ ಹಾಲಿ ಇರುವ ಮೌಲ್ಯಗಳಿಗೆ ಧಕ್ಕೆಯಾಗದ ರೀತಿಯಲ್ಲಿ ವರ್ತಿಸುವುದು. ಇದು ಸಮಾಜದ ವಿಘಟನೆಗೆ ಕಾರಣವಾಗಬಾರದು ಅಥವಾ ಸಮಾಜವನ್ನು ಅವಹೇಳನ ಮಾಡುವಂತಿರಬಾರದು. ಸಮಾಜ ವಾಸ್ತವತೆಯ ಚಿತ್ರಣ ನಿಡಿ ಸಾಮಾಜಿಕವಾಗಿ ಜವಾಬ್ದಾರಿಯುತವಾಗಿರಬಹುದು. ಇದೇ ವೇಳೆ ಪ್ರಭಾವ ಬೀರುವ ತನ್ನ ಶಕ್ತಿಯಿಂದ ಇದು ಪ್ರಗತಿಪರ ಬದಲಾವಣೆಗೆ ಬೆಂಬಲ ಗಳಿಸಲು ಪ್ರಭಾವಿ ಮಾಧ್ಯಮ. ಜತೆಗೆ ಸಾಮಾಜಿಕ ಪಿಡುಗುಗಳ ನಿರ್ಮೂಲನೆಗೂ ಇದು ಅಮೂಲ್ಯ ಕೊಡುಗೆ ನೀಡಬಹುದಾಗಿದೆ.

ಭಾರತದ ತೀರಾ ಹಳೆಯ ಸಿನಿಮಾಗಳಾದ ಅಚ್ಯೂತ ಕೊನ್ಯ, ಗೋಡಾನ್, ಅವೇರ್ ಮತ್ತಿತರ ಚಿತ್ರಗಳು ಶ್ರೇಷ್ಠ ಸಾಮಾಜಿಕ ನವಾಬ್ದಾರಿಯ ಬದ್ಧತೆಯನ್ನು ಪ್ರದರ್ಶಿಸಿದ್ದವು. ವ್ಯಾಪಾರಿ ಹಾಗೂ ಲಾಭದ ಉದ್ದೇಶ ಖಂಡಿತವಾಗಿಯೂ ಇರಬಹುದು. ಅದನ್ನು ಯಾರೂ ಅಲ್ಲಗಳೆಯಲಾಗದು. ಜತೆಗೆ ಆಕ್ಷೇಪಿಸಲೂ ಸಾಧ್ಯವಿಲ್ಲ. ಆದರೆ ಈ ಸಿನಿಮಾಗಳು ಸಮಾಜದ ಅಗತ್ಯತೆಗಳ ಬಗ್ಗೆ ಕುರುಡು ಧೋರಣೆ ಹೊಂದಿರಬಾರದು. ಅವು ರಾಷ್ಟ್ರೀಯತೆ, ಕೋಮು ಸಾಮರಸ್ಯ, ಪರಸ್ಪರ ಸಹಕಾರ ಮತ್ತು ಸಾಮಾಜಿಕ ಸಮಗ್ರತೆಯನ್ನು ಉತ್ತೇಜಿಸುವ ಪ್ರಯತ್ನ


www.shikarat.com

ಮಾಡಿದ್ದವು. ಪೈಜಾಮ್‌ನಂಥ ಚಿತ್ರಗಳು ವರ್ಗಸಂಘರ್ಷವನ್ನು ಅಣಕಿಸುವ ಮಟ್ಟಕ್ಕೂ ಬೆಳೆದಿದ್ದವು. ಇತರ ಕೆಲ ಚಿತ್ರಗಳು ಸಮಾಜದ ಅನಿಷ್ಠ ಪದ್ಧತಿಗಳಾದ ಜಾತೀಯತೆ, ಅಸ್ಪೃಶ್ಯತೆ, ಬಾಲ್ಯವಿವಾಹದಂಥ ವಿಷಯಗಳ ವಿರುದ್ಧ ಜಾಗೃತಿ ಮೂಡಿಸಲೂ ಶ್ರಮಿಸಿದವು.

ಆದರೆ ವರ್ಷಗಳು ಕಳೆದಂತೆ ಭಾರತೀಯ ಸಿನಿಮಾಗಳು ಸಾಮಾಜಿಕ ಬದ್ಧತೆಯ ಸ್ಪರ್ಶ ಕಳೆದುಕೊಂಡು, ಬಾಕ್ಸ್ ಆಫೀಸ್ ಸಿಂಡ್ರೋಮ್‌ನ ಜೀತಗಳಂತಾದವು. ಇದೀಗ ಕೋಮು ಪರಿಗಣನೆಯ ಮೋಡ ಚಿತ್ರರಂಗವನ್ನು ಆವರಿಸಿದೆ. ಇದು ಬಾಕ್ಸ್ ಆಫೀಸ್‌ನಲ್ಲಿ ಹಿಟ್ ಅಥವಾ ಫ್ಲಾಪ್ ಚಿತ್ರಗಳಾಗುವ ಅಂಶಗಳು. ಇದಕ್ಕೆ ಪೂರಕವಾದ ಸರಿಯಾದ ಪದಾರ್ಥಗಳನ್ನು ಅದರಲ್ಲಿ ಅಗತ್ಯವಿದ್ದರೂ, ಅನಗತ್ಯವಾದರೂ ತುರುಕಲಾಗುತ್ತದೆ. ಅದು ಯಾವ ಪರಿಣಾಮ ಬೀರುತ್ತದೆ ಎಂಬ ಅರಿವೆಯೂ ಇಲ್ಲದೇ ಲೈಂಗಿಕತೆ, ಕ್ರೌರ್ಯ, ಹಿಂಸೆಗಳನ್ನು ತುಂಬಲಾಗುತ್ತದೆ. ಇದು ಸಾಮಾಜಿಕ ಬಂಧದ ಮೇಲೆ ಮತ್ತು ಜನಸಾಮಾನ್ಯರ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಕನಿಷ್ಠ ಯಾವುದೇ ವಾಣಿಜ್ಯ ಅಥವಾ ಫೀಚರ್ ಚಿತ್ರಗಳಲ್ಲಿ ಈ ಪ್ರವೃತ್ತಿಯಂತೂ ಬೆಳೆದಿದೆ. ಇದೆಲ್ಲವನ್ನೂ ಮುಚ್ಚಿಕೊಳ್ಳುವ ಸಲುವಾಗಿಕೆಲ ಚಿತ್ರ ನಿರ್ಮಾಪಕರು ಸಾಮಾನ್ಯವಾಗಿ, ಸಮಾಜ ಸುಧಾರಣೆ ನಮ್ಮ ಗುರಿಯಲ್ಲ ಎಂಬ ಸಬೂಬು ನೀಡುತ್ತಾರೆ.

ಇಂದಿನ ಚಿತ್ರಗಳಲ್ಲಿ ಕಂಡುಬರುತ್ತಿರುವ ಸೌಂದರ್ಯಪ್ರಜ್ಞೆಯ ಕೊರತೆಗೆ ಮುಖ್ಯ ಕಾರಣವೆಂದರೆ ಬೇಜವಾಬ್ದಾರಿಯುತ, ರಾತ್ರೋರಾತ್ರಿ ಹುಟ್ಟಿಕೊಳ್ಳುವ ಚಿತ್ರನಿರ್ಮಾಪಕರು ನಿರ್ಮಾಣ ರಂಗಕ್ಕೆ ಭಾರಿ ಸಂಖ್ಯೆಯಲ್ಲಿ ಇಳಿದಿರುವುದು. ಇವರು ಸಾಮಾನ್ಯವಾಗಿ ಕೇವಲ ಲಾಭ ಗಳಿಕೆಯ ಉದ್ದೇಶವನ್ನಷ್ಟೇ ಹೊಂದಿರುತ್ತಾರೆಯೇ ವಿನಃ ಯಾವ ಸಾಮಾಜಿಕ ಜವಾಬ್ದಾರಿಯೂ ಇವರಿಗೆ ಇರುವುದಿಲ್ಲ. ಹಣಕಾಸು ಹೂಡಿಕೆದಾರರು ಸಾಮಾನ್ಯವಾಗಿ ಇಂಥ ಅಧಿಕ ಬಜೆಟ್ ಚಿತ್ರಗಳಿಗೆ ಹಣ ಹಾಕುವ ಮುನ್ನವೇ, ಹಾಕಿದ ಬಂಡವಾಳದ ಮೇಲೆ ಪ್ರತಿಫಲ ದೊರಕುವುದಿಲ್ಲ ಎಂದಾದರೆ ಇತರ ಕ್ಷೇತ್ರಗಳಿಗೆ ಇದನ್ನು ವರ್ಗಾಯಿಸುತ್ತೇನೆ ಎಂಬ ಎಚ್ಚರಿಕೆ ನೀಡಿರುತ್ತಾರೆ. ಇಂಥ ಸಾಹಸದ ಮೇಲೆ ಯಾಕೆ ಹಣ ಹೂಡಿ ಅಪಾಯ ಆಹ್ವಾನಿಸಿಕೊಳ್ಳಬೇಕು? ಇದಕ್ಕಿಂತಲೂ ಕರಾಳ ಅಂಶವೆಂದರೆ ವಿತರಕರದ್ದು. ತಾವು ಬಯಸುವ ಸಮರ್ಪಕ ಅಂಶಗಳು ಆ ಚಿತ್ರದಲ್ಲಿ ಇಲ್ಲ ಎಂದಾದರೆ ಆ ಚಿತ್ರದತ್ತ ಮುಖ ಮಾಡುವುದೂ ಇಲ್ಲ. ಚಿತ್ರನಿರ್ಮಾಣದ ಹಿಂದಿನ ಅರ್ಥಶಾಸ್ತ್ರ ಕೂಡಾ ಕಲಾ ಚಿತ್ರಗಳ ನಿರ್ಮಾಣಕ್ಕೆ ಪೂರಕವಾಗಿಲ್ಲ. ಆದರೆ ಕಳಕಳಿ ಇರುವ ಬಹಳಷ್ಟು ಮಂದಿಗೆ ನೆನಪಿರುವಂತೆ, ದುಬಾರಿ ಬಜೆಟ್, ದುಬಾರಿ ಸೆಟ್ಟಿಂಗ್, ಖ್ಯಾತ ತಾರೆಯರು, ಸೆಕ್ಸ್ ಮತ್ತು ಹಿಂಸೆಯಂಥ ಚಿತ್ರಗಳು ಫ್ಲಾಪ್ ಆಗಿವೆ. ಬದಲಾಗಿ ಕಡಿಮೆ ವೆಚ್ಚದ ಚಿತ್ರಗಳು ಲಘು ಹಾಸ್ಯ, ಇಂಪಾದ ಸಂಗೀತ ಹಾಗೂ ವ್ಯಾಪಾರಕ್ಕೆ ಪೂರಕ "ಸಮರ್ಪಕ ಅಂಶ"ಗಳನ್ನು ಒಳಗೊಂಡಿಲ್ಲದಿದ್ದರೂ ಹಿಟ್ ಚಿತ್ರಗಳೆನಿಸಿಕೊಂಡಿವೆ.

ಭಾರತೀಯ ಸಿನಿಮಾರಂಗದ ಮೇಲೆ ಆರಂಭದಿಂದಲೂ ರಂಗಭೂಮಿಯ ಪ್ರಭಾವ ದಟ್ಟವಾಗಿ ಕಾಣುತ್ತಿದೆ. ಪೌರಾಣಿಕ ಮತ್ತು ಐತಿಹಾಸಿಕ ಘಟನೆಗಳ ಮೇಲೆಯೇ ಚಿತ್ರಕತೆಗಳನ್ನು ನಿರ್ಮಿಸಿ ಆರಂಭವಾದದ್ದು ಭಾರತೀಯ ಚಿತ್ರರಂಗ. ನಿಧಾನವಾಗಿ ಭಾರತದ ಖ್ಯಾತ ಲೇಖಕರ ಸಾಮಾಜಿಕ ಹಾಗೂ ನೈತಿಕ ದೃಷ್ಟಿಕೋನದ ಕಾದಂಬರಿಗಳ ತಿರುಳು, ನಾಟಕ ಹಾಗೂ ಕಥೆಗಳ ತಿರುಳನ್ನು ಬಳಸಿಕೊಂಡವು. ಬಹಳಷ್ಟು ಸಮಯದ ವರೆಗೆ ಈ ಪರಂಪರೆ ಮುಂದುವರಿಯಿತು. ನಂತರ ಹಲವು ಕೃತಿಗಳ ಪ್ರಮುಖ ಮತ್ತು ಪ್ರಗತಿಪರ ನಿಧಾನವಾಗಿ ಮರೆಯಾದವು. ಇದೀಗ ತೀರಾ ಕಳಪೆ ಮತ್ತು ಕೀಳು ಅಭಿರುಚಿಯ ಚಿತ್ರಕಥೆಗಳದ್ದೇ ಪ್ರಾಬಲ್ಯ. ಚಿತ್ರರಂಗದಲ್ಲಿ ವೈವಿಧ್ಯ ಮಾಯವಾಗಿದೆ. ದ್ವಂದ್ವಾರ್ಥದ ಸಂಭಾಷಣೆಗಳು ಇನ್ನೊಂದು ಸಾಮಾನ್ಯ ಅಂಶ. ಈಗಂತೂ ಇದು ತೀರಾ ಕೀಳು ಅಭಿರುಚಿಗೆ ಇಳಿದುಬಿಟ್ಟಿದೆ.

ಇದೀಗ ಪ್ರೇಕ್ಷಕರ ಮನೋರಂಜನಾ ಹಕ್ಕು ನಾಮಕಾವಸ್ಥೆ. ಜತೆಗೆ ಇಂದಿನ ಪ್ರೇಕ್ಷಕರೂ ಕೀಳು ಅಭಿರುಚಿಯ ಮನೋರಂಜನೆಯನ್ನೇ ಇಷ್ಟಪಡುತ್ತಿರುವುದು ವಿಪರ್ಯಾಸ. ಮನೋರಂಜನೆ ಹೆಸರಿನಲ್ಲಿ ಹಿಂಸೆ, ಸೆಕ್ಸ್ ಹಾಗೂ ಅಶ್ಲೀಲತೆಯನ್ನೇ ಇಂದು ವೈಭವೀಕರಿಸಲಾಗುತ್ತಿದೆ. ವಾಸ್ತವ ಕಲಾಚಿತ್ರಗಳಲ್ಲಿ ಆಸಕ್ತಿ ಇರುವವರು ಕಡಿಮೆ. ಅದು ಕೂಡಾ ದೊಡ್ಡ ಹೆಸರಿನ ವ್ಯಕ್ತಿಗಳ ಇಂಥ ಚಿತ್ರಗಳಿಗೆ ಮಾತ್ರ ಬೆಲೆ. ಇತರ ಯಾರೂ ಕಡಿಮೆ ವೆಚ್ಚದ ಚಿತ್ರಗಳಲ್ಲಿ ಪಾಲ್ಗೊಳ್ಳುವಂತೆಯೇ ಇಲ್ಲ. ಸರ್ಕಾರ ಕೂಡಾ ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಂತಿಲ್ಲ. ಸಾಂಪ್ರದಾಯಿಕವಾಗಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳುವುದು ಬಿಟ್ಟರೆ, ಸಿನಿಮಾ ಜಗತ್ತಿನ ಆಗು ಹೋಗುಗಳ ಬಗ್ಗೆ ಸರ್ಕಾರಕ್ಕೆ ಯಾವ ಆಸಕ್ತಿಯೂ ಇಲ್ಲ.

ಇದರ ಜತೆಗೆ ಚಲನಚಿತ್ರೋತ್ಸವ ವ್ಯವಸ್ಥೆಗೊಳಿಸುವುದು ಹಾಗೂ ಜಾತ್ಯತೀತತೆ ಹಾಗೂ ರಾಷ್ಟ್ರಪ್ರೇಮವನ್ನು ಪ್ರದರ್ಶಿಸುವ ಚಿತ್ರಗಳಿಗೆ ತೆರಿಗೆ ವಿನಾಯ್ತಿ ನೀಡುವುದು ಸರ್ಕಾರದ ಇತರ ಆಧ್ಯತೆಗಳು. ಸೆನ್ಸಾರ್ ಮಂಡಳಿಯ ಗೊಂದಲಕಾರಿ ನೀತಿಗಳು ಈ ನಿಟ್ಟಿನಲ್ಲಿ ಹೆಚ್ಚಿನ ಪ್ರಯೋಜನಕ್ಕೆ ಬರುವುದಿಲ್ಲ. ಸೆನ್ಸಾರ್ ಮಂಡಳಿಗೆ ಚುಂಬಲ ಅಶ್ಲೀಲವಾಗಿ ಕಾಣುತ್ತದೆ. ಆದರೆ ಅತ್ಯಾಚಾರ, ಕ್ರೌರ್ಯ, ಕೊಲೆ ಮತ್ತು ಕೀಳು ಅಭಿರುಚಿಯ ಸಂಭಾಷಣೆಗಳಿಗೆ ಕತ್ತರಿ ಬೀಳುವುದೇ ಇಲ್ಲ.

ಇಂದಿನ ಬಹುತೇಕ ಚಿತ್ರಗಳ ಒಟ್ಟಾರೆ ಫಲಿತಾಂಶವೆಂದರೆ, ಯಾವುದೇ ತಿರುಳಿಲ್ಲದ ಮತ್ತು ಸಾಮಾಜಿಕ ಉದ್ದೇಶಕ್ಕೆ ಪೂರಕವಾಗಿಲ್ಲದಿರುವುದು ಅಥವಾ ಸಮಾಜಕ್ಕೆ ಅಪ್ರಸ್ತುತವೂ ಮಹತ್ವವಿಲ್ಲದ್ದೂ ಆಗಿವೆ. ಭಾರತ ಚಿತ್ರರಂಗದ ನಾಯಕನಟರು ಸಾಮಾನ್ಯವಾಗಿ ಜೀವನಕ್ಕೆ ಏನೂ ಬೇರೆ ಮಾರ್ಗ ಕಂಡುಕೊಳ್ಳಬೇಕಲ್ಲ. ಆತನ ಜೀವನದ ಪ್ರಮುಖ ಉದ್ದೇಶವೇ ತನ್ನ ಕನಸಿನ ಕನ್ಯೆಯ ಹೃದಯ ಗೆಲ್ಲುವುದು ಮತ್ತು ಆಕೆಗಾಗಿ ಇಡೀ ಜಗತ್ತನ್ನೇ ಎದುರು ಹಾಕಿಕೊಳ್ಳುವುದು. ಕೆಲವೊಮ್ಮೆ ಜೀವನಕ್ಕೆ ಅಗತ್ಯವಾದ ಅಂಶಗಳು ಬಿಂಬಿತವಾದರೂ ಆತನ ಜೀವನಶೈಲಿಯಲ್ಲಿ ಭಾರಿ ವ್ಯತ್ಯಾಸಗಳಿರುತ್ತವೆ. ಅಂತೆಯೇ ನಾಯಕಿ ನಾಯಕನ ಜತೆ ಹಾಡುವುದು ನೃತ್ಯ ಮಾಡುವುದು ಮತ್ತು ಅಳುವುದನ್ನು ಬಿಟ್ಟರೆ ಬೇರೇನೂ ಮಾಡುತ್ತಿಲ್ಲ. ಇದರಿಂದ ಪ್ರಭಾವಿತರಾದ ಹಲವು ಮಂದಿ ಯುವಕರು ಎಂದೂ ಗುಣಪಡಿಸಲಾಗದ ರೊಮ್ಯಾಂಟಿಸಿಸ್ಟ್‌ಗಳಾಗಿ ಬದಲಾಗುತ್ತಿದ್ದಾರೆ. ಇದು ಯುವಕರನ್ನು ನೈಜ ವಾಸ್ತವತೆಯಿಂದ ದೂರಮಾಡುವುದು ಮಾತ್ರವಲ್ಲದೇ ಜೀವನದ ಕರ್ತವ್ಯಗಳಿಂದ ವಿಮುಖರನ್ನಾಗಿ ಮಾಡುತ್ತದೆ. ಇಂಥ ಯುವಕರು ತಾವು ಮಾತ್ರ ಹಾಳಾಗುವುದಲ್ಲದೇ, ಇತರರನ್ನೂ ಹಾಳು ಮಾಡುತ್ತಾರೆ.

ಅಂತೆಯೇ ಭಾರತೀಯ ಚಿತ್ರಗಳಲ್ಲಿ ಮಹಿಳೆಯರನ್ನು ಬಿಂಬಿಸುವ ರೀತಿಯೂ ಅಸಹ್ಯಕರ. ಹಲವು ಚಿತ್ರಗಳಲ್ಲಿ ನಾಯಕಿ ಸ್ಟೆಲ್ಲರ್ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಆಕೆ ನೃತ್ಯ, ಹಾಡು, ತೆರೆದಿಡುವುದು ಮತ್ತು ಅಶ್ಲೀಲತೆಗಷ್ಟೇ ಸೀಮಿತ. ಇತರ ಹಲವು ಚಿತ್ರಗಳ



www.shikarat.com

ಇನ್ನೊಂದು ಉದ್ದೇಶವೆಂದರೆ ಸೇಡು ತೀರಿಸಿಕೊಳ್ಳುವುದು. ನಾಯಕಿಯನ್ನು ಹಲವು ಬಾರಿ ಅತ್ಯಾಚಾರ ಮಾಡಿದವರ ವಿರುದ್ಧ ನಾಯಕ ಸೇಡು ತೀರಿಸಿಕೊಳ್ಳುವುದೇ ಕಥಾವಸ್ತು. ಇದು ಸಾಮಾನ್ಯವಾಗಿ ಮಹಿಳೆಯರು ಮತ್ತು ಹುಡುಗಿಯರಲ್ಲಿ ತಾವು ದುರ್ಬಲರು ಅಥವಾ ಮಹತ್ವ ಇಲ್ಲದವರು ಮತ್ತು ಪುರುಷಪ್ರಧಾನ ಜಗತ್ತಿನಲ್ಲಿ ಅವರ ದೇಹ ಮತ್ತು ಮೈಮಾಟಕ್ಕಷ್ಟೇ ಪ್ರಾಧಾನ್ಯ ಎಂಬ ಭಾವನೆಯನ್ನು ಹುಟ್ಟುಹಾಕುತ್ತದೆ. ಇಂದು ಅತ್ಯಾಚಾರ ದೃಶ್ಯ ಬಹುತೇಕ ಎಲ್ಲ ಚಿತ್ರಗಳಲ್ಲಿ ಕಡ್ಡಾಯ ಎಂಬಂತಾಗಿದೆ. ಇದನ್ನು ಚಿತ್ರೀಕರಿಸಿರುವ ರೀತಿಯೂ ಹೇಗಿರುತ್ತದೆ ಎಂದರೆ, ಕೇವಲ ಭಯಾನಕವಾಗಿರುವುದಷ್ಟೇ ಅಲ್ಲದೇ, ಆ ದೃಶ್ಯಗಳು ಪ್ರೇಕ್ಷಕರ ಲೈಂಗಿಕತೆಯನ್ನೂ ಪ್ರಚೋದಿಸುವಂತಿರುತ್ತವೆ. ಮಹಿಳೆಯರನ್ನು ಮಾದಕ ವಸ್ತುಗಳಾಗಿ, ತಮ್ಮ ಬಯಕೆ ಈಡೇರಿಸಿಕೊಳ್ಳುವ ಸರಕುಗಳಾಗಿ ಮತ್ತು ಹಿಂಸೆಯ ಸಂತ್ರಸ್ತರಾಗಿ ಬಿಂಬಿಸಲಾಗುತ್ತಿದ್ದು, ಇದನ್ನು ವಾಸ್ತವ ಬದುಕಿನಲ್ಲೂ ಅನುಕರಿಸುವ ಹಲವು ಮಂದಿ ಮಹಿಳೆಯರ ಮೇಲೆ ದೌರ್ಜನ್ಯಕ್ಕೂ ಮುಂದಾಗುತ್ತಿದ್ದಾರೆ.

ಸಾಮಾನ್ಯವಾಗಿ ಬಹುತೇಕ ಎಲ್ಲ ಸಿನಿಮಾಗಳು ಏಕತಾನತೆಯ ದೃಶ್ಯಗಳನ್ನು ಒಳಗೊಂಡಿದ್ದು, ದೀರ್ಘಕಾಲದಿಂದ ನರಳುವ ಪತ್ನಿ ಮತ್ತು ಮತ್ತೊಬ್ಬ, ಭ್ರಷ್ಟ ಮತ್ತು ಕ್ರೂರಿ ರಾಜಕಾರಣಿ, ನಿರ್ದಯಿ ಭೂಮಾಲೀಕ ಮತ್ತು ವ್ಯಾಪಾರಿ, ದುರ್ಬಲ ನ್ಯಾಯಾಂಗ ವ್ಯವಸ್ಥೆ, ಕಡುಭ್ರಷ್ಟ ಪೊಲೀಸ್ ವ್ಯವಸ್ಥೆಯಂಥ ದೃಶ್ಯಗಳು ಸಾಮಾನ್ಯ. ಇದು ಸಮಾಜದ ಕೆಲ ವರ್ಗಗಳಲ್ಲಿ ಇತರರ ಬಗ್ಗೆ ಇರುವ ಪಕ್ಷಪಾತ ಮನೋಭಾವವನ್ನು ಮತ್ತಷ್ಟು ದಟ್ಟವಾಗಿಸಲು ಕಾರಣವಾಗುತ್ತದೆ ಮತ್ತು ಇಡೀ ವ್ಯವಸ್ಥೆಯ ಬಗ್ಗೆಯೇ ನಂಬಿಕೆ ಕಳೆದುಕೊಳ್ಳುವಂತೆ ಮಾಡುತ್ತದೆ.

ಚಿತ್ರಗಳ ಖಳನಾಯಕರ ವೈಭವೋಪೇತ ಐಷಾರಾಮಿ ಜೀವನಶೈಲಿ ಮತ್ತು ಅವರು ಹಣವನ್ನು ಅಕ್ರಮವಾಗಿ ಸಂಗ್ರಹಿಸುವ ಹಲವು ಮಾರ್ಗಗಳು, ಜನರಲ್ಲಿ ಕಷ್ಟಪಡದೇ ಹಣ ಸಂಪಾದಿಸುವ ಮನೋಭಾವವನ್ನು ಹುಟ್ಟುಹಾಕುತ್ತದೆ ಮತ್ತು ಯಾವ ಮಾರ್ಗದಿಂದಾದರೂ ಹಣ ಸಂಪಾದಿಸುವುದು ಮುಖ್ಯ ಎಂಬ ತರ್ಕಕ್ಕೆ ಬರಲು ಕಾರಣವಾಗುತ್ತದೆ. ಸಮಾಜದಲ್ಲಿ ಬಲವಾಗಿ ಬೇರೂರಿದ ಆದರ್ಶಗಳು ಹಾಗೂ ಮೌಲ್ಯಗಳನ್ನು ಶಿಥಿಲಗೊಳಿಸುತ್ತಾ ಚಿತ್ರರಂಗ ಮುನ್ನಡೆದಿದೆ. ಹಿಂಸೆಯ ವೈಭವೀಕರಣ ಸಹಜವಾಗಿಯೇ ಯುವ ಮನಸ್ಸುಗಳಲ್ಲಿ ಅದನ್ನು ವಾಸ್ತವ ಜೀವನದಲ್ಲಿ ಅನುಕರಿಸಲು ಪ್ರೇರೇಪಿಸುತ್ತವೆ. ಹಲವು ಮಂದಿ ಇಂಥ ಅಪರಾಧ ಮನೋಭಾವಕ್ಕೆ ಬಲಿಯಾಗುತ್ತಾರೆ ಮತ್ತು ಕ್ರೌರ್ಯ ಹಾಗೂ ದರ್ಪವನ್ನು ಬೆಳೆಸಿಕೊಳ್ಳುತ್ತಾರೆ. ಪದೇ ಪದೇ ಚಿತ್ರಗಳಲ್ಲಿ ಇಂಥ ಹಿಂಸಾತ್ಮಕ ದೃಶ್ಯ ಹಾಗೂ ಕ್ರೌರ್ಯಗಳನ್ನು ನೋಡುವುದರಿಂದ ಸಹಜವಾಗಿಯೇ ಹಿಂಸಾಮಾರ್ಗ ತುಳಿಯುತ್ತಾರೆ.

ಇದಕ್ಕೂ ಹೆಚ್ಚಾಗಿ, ಚಿತ್ರಗಳಲ್ಲಿ ಪ್ರದರ್ಶನಗೊಳ್ಳುವ ವೈಭವೋಪೇತ ಮತ್ತು ಅತ್ಯಾಧುನಿಕ ಜೀವನ ಶೈಲಿ, ದಿಢೀರನೇ ಶ್ರೀಮಂತಿಕೆ ಗಳಿಸಿಕೊಳ್ಳುವ ನಾಯಕ ಸಹಜವಾಗಿಯೇ ಎಲ್ಲರ ಆಕಾಂಕ್ಷೆಗಳ ಮಟ್ಟವನ್ನು ಹೆಚ್ಚಿಸುತ್ತವೆ. ಆದರೆ ಇಂಥ ಆಕಾಂಕ್ಷೆ ಹಾಗೂ ಅದು ಈಡೇರುವ ನಡುವೆ ದೊಡ್ಡ ಕಂದಕ ಇರುತ್ತದೆ. ಇದರಿಂದಾಗಿ ಸಮಾಜದಲ್ಲಿ ದೊಡ್ಡ ಪ್ರಮಾಣದ ಹತಾಶೆ ಮೂಡುತ್ತದೆ.

ಸಂವಿಧಾನದ 19 (1) (ಬಿ) ವಿಧಿಯ ಅನ್ವಯ ಎಲ್ಲ ನಾಗರಿಕರಿಗೆ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಲಾಗಿದೆ. ಆದರೆ ಇದೇ ವೇಳೆ ಚಿತ್ರ ನಿರ್ಮಾಪಕರು ತಮ್ಮ ಹಣದ ದಾಹದಿಂದ ಸಮಾಜದ ಅಭಿರುಚಿಯನ್ನು ಕೆಡಿಸುವ, ಸಮಾಜದ ಮಾನಸಿಕತೆಯ ಮೇಲೆ ವಿಷಕಾರಿ ಪರಿಣಾಮ ಬೀರುವಂಥ ಕೆಲಸ ಮಾಡಬಾರದು. ವಾಕ್, ಅಭಿವ್ಯಕ್ತಿ, ಆತ್ಮಸಾಕ್ಷಿ ಹಾಗೂ ನಂಬಿಕೆ ಎಲ್ಲವೂ ಸ್ವೀಕಾರಾರ್ಹ. ಆದರೆ ಸಮಾಜದ ಸ್ಥಿರತೆ ಮತ್ತು ಸಾಮಾಜಿಕ ಆರೋಗ್ಯವನ್ನು ನಿರ್ಲಕ್ಷಿಸುವಂತಿಲ್ಲ. ಯಾವುದೇ ಸಂದರ್ಭದಲ್ಲೂ ಚಲನಚಿತ್ರ ಮಾನವ ಸಮಷ್ಟಿ ಹಾಗೂ ಅದಕ್ಕೆ ಸಂಬಂಧಿಸಿದ ಮೌಲ್ಯಗಳನ್ನು ಎತ್ತಿಹಿಡಿಯಬೇಕು. ಒಬ್ಬ ಖಂಡಿತವಾಗಿಯೂ ಸಿನಿಮಾದಿಂದ ಸಮಾಜ ಸುಧಾರಣೆಯನ್ನು ನಿರೀಕ್ಷಿಸಲಾರ. ಆದರೆ ಸಮಾಜದಲ್ಲಿ ಹಾಲಿ ಇರುವ ಮೌಲ್ಯಗಳನ್ನು ನಾಶಮಾಡುವಂಥ ಕೆಲಸವನ್ನು ಚಿತ್ರಗಳು ಮಾಡಬಾರದು.

ಆದರೆ ಕೇವಲ ಚಿತ್ರನಿರ್ಮಾಪಕರು ಅಥವಾ ಪ್ರೇಕ್ಷಕರನ್ನೇ ಇದಕ್ಕೆ ದೂಷಿಸುವುದರಿಂದ ಯಾವ ಲಾಭವೂ ಇಲ್ಲ. ಅದರ ಬದಲಾಗಿ ನಾವು ಆ ನಿಟ್ಟಿನಲ್ಲಿ ಪ್ರಯತ್ನ ನಡೆಸಬೇಕು. ಸಮಾಜದಲ್ಲಿ ಜಾಗೃತಿ ಮೂಡಿಸುವ ಉತ್ತಮ ವಿಧಾನವೆಂದರೆ ಮತ್ತು ಚಿತ್ರನಿರ್ಮಾಪಕರ ಸಾಮಾಜಿಕ ಜವಾಬ್ದಾರಿ ಎಂದರೆ, ಯಾವುದು ಒಳ್ಳೆಯದು ಯಾವುದು ಕೆಟ್ಟದು ಎಂಬ ನಿರ್ಧಾರಕ್ಕೆ ಬರುವಂತೆ ಮಾಡಿ ಸಾರ್ವಜನಿಕ ಅಭಿಪ್ರಾಯ ರೂಪಿಸುವಂಥದ್ದು. ಇಲ್ಲಿ ಚಿತ್ರವಿಮರ್ಶಕರ ಪಾತ್ರವೂ ಪ್ರಮುಖವಾಗುತ್ತದೆ. ಓದುಗರಿಗೆ ಹಾಗೂ ಪ್ರೇಕ್ಷಕರಿಗೆ ಅವರು ತಮ್ಮ ವಿಮರ್ಶೆಗಳ ಮೂಲಕ ಹಲವು ಅಂಶಗಳನ್ನು ಗಮನಕ್ಕೆ ತರಬಹುದು. ಒಳ್ಳೆಯ ಹಾಗೂ ಕೆಟ್ಟ ಚಿತ್ರಗಳನ್ನು ನಿರ್ಧರಿಸುವುದು ಹೇಗೆ ಎಂಬ ಜಾಗೃತಿಯನ್ನು ಅವರಲ್ಲಿ ಮೂಡಿಸಬಹುದು. ಅವರು ತಮ್ಮ ತೀರ್ಮಾನವನ್ನು ಕೈಗೊಳ್ಳುವ ಮುಖ್ಯ ಮಾನದಂಡವೆಂದರೆ, ಆ ಚಿತ್ರದ ಸಾಮಾಜಿಕ ಪ್ರಸ್ತುತತೆ ಎಷ್ಟರ ಮಟ್ಟಿಗೆ ಇದೆ ಎನ್ನುವುದು. ಇದು ಚಿತ್ರದಲ್ಲಿ ಹೇಗೆ ಬಿಂಬಿತವಾಗಿದೆ ಎನ್ನುವುದು ಇಲ್ಲಿ ಪ್ರಮುಖವಾಗಿರುತ್ತದೆ.

ಅನಕ್ಷರತೆ ಮತ್ತು ಬಡತನ ತಾಂಡವವಾಡುತ್ತಿರುವ ಭಾರತದಂಥ ದೇಶದಲ್ಲಿ ಸಿನಿಮಾ ಪ್ರಮುಖ ಪಾತ್ರ ವಹಿಸುತ್ತದೆ. ಇದು ಜನರ ಮನಸ್ಸಿನ ಮೇಲೆ ಪ್ರಭಾವ ಬೀರುವ ಮಾಹಿತಿ ಮತ್ತು ಶಿಕ್ಷಣವನ್ನು ಜನತೆಗೆ ನೀಡಬಲ್ಲದು. ಖ್ಯಾತ ಚಿತ್ರನಿರ್ದೇಶಕ ಎನಿಯಾ ಕಾರ್ಲುನ್ ಹೇಳುವಂತೆ, "ಸಿನಿಮಾ ಎನ್ನುವುದು ಜಗತ್ತಿನಲ್ಲೇ ನಾವು ಇಂದು ಹೊಂದಿರುವ ಅತ್ಯಂತ ಮಾನವೀಯ ಅಭಿವ್ಯಕ್ತಿ ವಿಧಾನವಾಗಿದೆ. ಇದು ಇಡೀ ವಿಶ್ವದ ನಿರೀಕ್ಷೆ. ಇದರಲ್ಲಿ ಜನರು ತಮ್ಮ ಎಲ್ಲ ಮಾನವೀಯತೆಯನ್ನೂ ಪ್ರದರ್ಶಿಸಬಹುದಾಗಿದೆ. ಇದರ ಮೂಲಕ ಇಡೀ ಮನುಕುಲದ ಭ್ರಾತೃತ್ವವನ್ನು ಉದ್ದೀಪಿಸಬಹುದಾಗಿದೆ"



Universal Coaching Centre
www.shikarat.com

### 14. ದಯಾಮರಣ: ಚಿಕಿತ್ಸೆಯಾಗಬಲ್ಲುದೇ?

ಅಭಿವೃದ್ಧಿಪಡಿಸಬೇಕಾದ ಪ್ರಮುಖ ಅಂಶಗಳು

1. ಹುಟ್ಟಿದ ಎಲ್ಲರಿಗೂ ಸಾವು ನಿಶ್ಚಿತ
2. ಸಾವಿನ ಬಗ್ಗೆ ಭೀತಿ ಇಲ್ಲದವರೂ ನೋವಿಲ್ಲದ ಸಾವು ಬಯಸುತ್ತಾರೆ.
3. ನಿಷ್ಕ್ರಿಯ ಹಾಗೂ ಕ್ರಿಯಾತ್ಮಕ ಸಾವು
4. ಸಕ್ರಿಯ ದಯಾಮರಣ ಹೆಚ್ಚು ವಿವಾದಾತ್ಮಕ
5. ದಯಾಮರಣ ಕಾನೂನುಬದ್ಧಗೊಳಿಸಲು ಭಯ ಏಕೆ?
6. ರೋಗಿಗಳಿಗೆ ದಯಾಮರಣ ವರ
7. ಎಚ್ಚರಿಕೆಯ ದೃಷ್ಟಿಕೋನ ಅಗತ್ಯ
8. ಅಂತಿಮವಾಗಿ ಸಾವು ಒಂದು ಚಿಕಿತ್ಸೆಯಷ್ಟೇ ಆಗಬಲ್ಲದು.

ಸಾವು ಎನ್ನುವುದು ಪ್ರತಿಯೊಬ್ಬರ ಬಾಳಿಗ ಕೊನೆ. ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಸಾವು ನಿಶ್ಚಿತ. ವೈದ್ಯವಿಜ್ಞಾನ ಎಷ್ಟೇ ಬೆಳೆದಿದ್ದರೂ, ವೈದ್ಯಕೀಯ ಕ್ಷೇತ್ರದಲ್ಲಿ ಯಾವುದೇ ಕೌಶಲ ಅಭಿವೃದ್ಧಿಯಾಗಿದ್ದರೂ ಸಾವನ್ನು ತಪ್ಪಿಸಲಾಗದು. ಒಂದು ವೇಳೆ ಒಬ್ಬ ವ್ಯಕ್ತಿಯ ರೋಗವನ್ನು ಗುಣಪಡಿಸಲು ಸಾಧ್ಯವಿಲ್ಲ ಎಂದು ವೈದ್ಯರಿಗೆ ಖಚಿತವಾದ ಮೇಲೆ, ಆ ವ್ಯಕ್ತಿಯ ಆರೋಗ್ಯದಲ್ಲಿ ಯಾವುದೇ ಸುಧಾರಣೆ ಸಾಧ್ಯವಿಲ್ಲ ಎನ್ನುವುದು ಖಚಿತವಾಗಿ ತಿಳಿದ ಬಳಿಕ, ಇನ್ನೊಂದು ವಿಧದಲ್ಲಿ ಹೇಳುವುದಾದರೆ ಆತ ಶಾಶ್ವತ ರೋಗಪೀಡಿತನಾಗಿಯೇ ಇರುತ್ತಾನೆ ಎನ್ನುವುದಾದರೆ, ಆ ವ್ಯಕ್ತಿಯನ್ನು ಸಾಯಲು ಬಿಡುವುದು ದಯಾಪರ ನೀತಿಯಲ್ಲವೇ? ವ್ಯಕ್ತಿಯ ನರಳಿಕೆಯನ್ನು ಕೊನೆಗಾಣಿಸಲು ಆ ವ್ಯಕ್ತಿಗೆ ಹಾಗೂ ತೀರಾ ನಿಕಟ ಸಂಬಂಧಿಕರಿಗೆ ದಯಾಮರಣ ಸ್ವೀಕಾರಾರ್ಹವೇ?

ದಯಾಮರಣ ಎಂದರೆ ಮೂಲಭೂತವಾಗಿ ನೋವುರಹಿತ ಸಾವು. ಸಾವಿನ ಬಗ್ಗೆ ಭಯವಿಲ್ಲದ ವ್ಯಕ್ತಿಯು ಕೂಡಾ ಅಂತಿಮವಾಗಿ ಬಯಸುವುದು ನೋವಿಲ್ಲದ ಸಾವನ್ನು. ರೋಗಪೀಡಿತರಾಗಿ ವರ್ಷಾನುಗಟ್ಟಲೆ ಹಾಸಿಗೆಹಿಡಿದಿರುವುದು, ಚಿಕಿತ್ಸೆ ಇಲ್ಲ ಎಂದು ಖಚಿತವಾದ ಹಿನ್ನೆಲೆಯಲ್ಲಿ ಸದಾ ನೋವು ನುಂಗುತ್ತಾ ನರಳುವುದು, ತಮಗೆ ನಿಕಟವಾಗಿರುವವರಿಗೆ ನೋವು ಮತ್ತು ತೊಂದರೆ ಕೊಡುತ್ತಾ ಬದುಕಿರುವುದು, ಪುನಶ್ಚೇತನದ ಯಾವ ಆಸೆಯೂ ಇಲ್ಲದಿದ್ದರೂ ಬೇರೆಯವರ ಮೇಲೆ ಅವಲಂಬಿತರಾಗಿ ಬದುಕು ಮುಂದುವರಿಸುವುದು ಖಂಡಿತವಾಗಿಯೂ ಎಂಥ ಕಠಿಣ ಹೃದಯಿಗಳಿಗೂ ಬೇಡ. ಜೀವದ ಬಗ್ಗೆ ಎಷ್ಟು ಆಸೆ ಹೊಂದಿರುವವರು ಕೂಡಾ ಈ ಬಗೆಯ ಬದುಕನ್ನು ಬಯಸುವುದಿಲ್ಲ. ಅಂಥ ಸಂದರ್ಭದಲ್ಲಿ ಸುಲಭ ಸಾವಿನ ಪರ್ಯಾಯ ಖಂಡಿತವಾಗಿಯೂ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಒಂದೇ ಹೊಡೆತದಲ್ಲಿ ಎಲ್ಲವನ್ನೂ ಕೊನೆಗೊಳಿಸಲು ಅಥವಾ ಧೀರ್ಘಕಾಲದ ನರಳಿಕೆ ಮತ್ತು ಯಾತನೆಯನ್ನು ತಡೆಯಲು ಏಕೈಕ ಪರ್ಯಾಯ ವಿಧಾನ ಎಂದರೆ ದಯಾಮರಣ.

ದಯಾಮರಣದ ಸಮಸ್ಯೆ ಪ್ರಮುಖವಾಗಿ ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಒಂದು ನಿಷ್ಕ್ರಿಯ ದಯಾಮರಣ ಹಾಗೂ ಇನ್ನೊಂದು ಸಕ್ರಿಯ ದಯಾಮರಣ. ನಿಷ್ಕ್ರಿಯ ದಯಾಮರಣ ಎಂದರೆ, ವೈದ್ಯಕೀಯ ಚಿಕಿತ್ಸೆಯನ್ನು ನಿರಾಕರಿಸುವ ಹಕ್ಕು. ಬದುಕುವ ಯಾವುದೇ ಸಾಧ್ಯತೆ ಇಲ್ಲದಿದ್ದರೂ, ಅಥವಾ ರೋಗ ಗುಣವಾಗುವ ಯಾವುದೇ ಅವಕಾಶ ಇಲ್ಲದಿದ್ದರೂ, ಆ ವ್ಯಕ್ತಿಯ ಸಾವನ್ನು ಚಿಕಿತ್ಸೆಯ ಮೂಲಕ ಮುಂದೂಡುತ್ತಾ ಹೋಗುವ ಸಂದರ್ಭದಲ್ಲಿ ಅಂಥ ಚಿಕಿತ್ಸೆಯನ್ನು ರೋಗಿ ನಿರಾಕರಿಸುವ ಹಕ್ಕನ್ನು ನಿಷ್ಕ್ರಿಯ ದಯಾಮರಣ ಎಂದು ಪರಿಗಣಿಸುತ್ತೇವೆ. ಇದು ಬಹುತೇಕ ಕಾರ್ಯಸಾಧು ಮತ್ತು ಯಾವುದೇ ವ್ಯಕ್ತಿ ಇಂಥ ವಿವಾದರಹಿತ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಇದು ಯಾವುದೇ ಒತ್ತಡದ ಹಿನ್ನೆಲೆಯಲ್ಲೂ ತೆಗೆದುಕೊಳ್ಳುವ ನಿರ್ಧಾರವಲ್ಲ; ಬದಲಾಗಿ ವೈದ್ಯಕೀಯ ಚಿಕಿತ್ಸೆಯ ಅರ್ಥಹೀನ ಮುಂದುವರಿಕೆಯನ್ನು ವಿವೇಚನಾತ್ಮಕವಾಗಿ ಸದುದ್ದೇಶದಿಂದ ನಿರಾಕರಿಸುವುದು. ಒಬ್ಬ ವ್ಯಕ್ತಿ ಸಹಜವಾಗಿ ಮತ್ತು ಶಾಂತಿಯುತವಾಗಿ ಸಾಯುವ ನೈಸರ್ಗಿಕ ಕ್ರಿಯೆಯಿಂದ ಇದು ಭಿನ್ನ ಎನಿಸಬಹುದು. ಕೃತಕ ನಳಿಕೆಗಳನ್ನು ನೋಡಿಸಿ ಆತನನ್ನು ಕೃತಕವಾಗಿ ಜೀವಂತವಾಗಿರುವಂತೆ ನೋಡಿಕೊಳ್ಳುವುದಕ್ಕಿಂತ ಗೌರವಯುತ ಸಾವು ಉತ್ತಮ ಎನ್ನಬಹುದು.

ಒಬ್ಬ ವ್ಯಕ್ತಿಯ ಮಾನಸಿಕ ಆರೋಗ್ಯ ಒಂದು ನಿರ್ದಿಷ್ಟ ಹಂತಕ್ಕಿಂತ ಉತ್ತಮವಾಗಿದ್ದರೆ, ವೈದ್ಯಕೀಯ ಚಿಕಿತ್ಸೆಯನ್ನು ನಿರಾಕರಿಸುವುದು ಖಂಡಿತಾ ಸಮಸ್ಯೆಯಲ್ಲ. ಅದು ಆ ವ್ಯಕ್ತಿಯ ವೈಯಕ್ತಿಕ ನಿರ್ಧಾರ. ಆದರೆ ಒಬ್ಬ ವ್ಯಕ್ತಿ ಪ್ರಜ್ಞಾಹೀನನಾಗಿದ್ದರೆ ಅಥವಾ ನಿರ್ಧಾರಗಳನ್ನು ಕೈಗೊಳ್ಳಲು ಅಸಮರ್ಥನಾಗಿದ್ದರೆ, ಅಂದರೆ ತನ್ನ ಚಿಕಿತ್ಸೆಯನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎನ್ನುವುದನ್ನು ನಿರ್ಧರಿಸುವ ಸಾಮರ್ಥ್ಯ ಆ ವ್ಯಕ್ತಿಗೆ ಇಲ್ಲದಿದ್ದರೆ, ಅವರ ಕುಟುಂಬ ಆ ವ್ಯಕ್ತಿಯ ಚಿಕಿತ್ಸೆಯನ್ನು ಸ್ಥಗಿತಗೊಳಿಸಲು ಹಿಂಜರಿಯಬಹುದು. ಏಕೆಂದರೆ ಇದರಿಂದ ನಿರ್ಲಕ್ಷ್ಯ ಎಂಬ ಆರೋಪಕ್ಕೆ ಗುರಿಯಾಗಬೇಕಾಗುತ್ತದೆ. ಅಂಥ ಪರಿಸ್ಥಿತಿಯನ್ನು ನಿಭಾಯಿಸಲು, ಇದಕ್ಕೆ ಕಾನೂನಾತ್ಮಕ ಅವಕಾಶವಿದೆ.


www.shikarat.com

ಉದಾಹರಣೆಗೆ ಒಂದು ವೇಳೆ, ರೋಗಿಯಿಂದ ಲಿಖಿತ ಹೇಳಿಕೆ ಇದ್ದಲ್ಲಿ, ಆ ಹೇಳಿಕೆಯನ್ನು ರೋಗಿ ಸಂಪೂರ್ಣ ಪ್ರಜ್ಞಾಪೂರ್ವಕವಾಗಿ ಮತ್ತು ಮಾನಸಿಕ ಆರೋಗ್ಯ ಉತ್ತಮವಾಗಿದ್ದ ಅವಧಿಯಲ್ಲಿ ದಾಖಲಿಸಿದ್ದಲ್ಲಿ, ಚಿಕಿತ್ಸೆ ಸಾಧ್ಯವೇ ಇಲ್ಲದ ಪ್ರಕರಣಗಳಲ್ಲಿ, ಜೀವವನ್ನು ಉಳಿಸುವ ಸಲುವಾಗಿ ಕೃತಕ ವ್ಯವಸ್ಥೆಯನ್ನು ತಪ್ಪಿಸಲಾಗದ ಸಂದರ್ಭದಲ್ಲಿ, ಸಾವನ್ನು ವಿನಾಕಾರಣ ಮುಂದೂಡುವುದರಲ್ಲಿ ಯಾವುದೇ ಅರ್ಥವಿಲ್ಲ. ಇಂಥ ಸಂದರ್ಭದಲ್ಲಿ ರೋಗಿಗಳ ಭಾವನೆಗಳಿಗೆ ಬೆಲೆಕೊಡಬೇಕಾದ್ದು ಅನಿವಾರ್ಯ. ಬಹುತೇಕ ಮಂದಿ ಎಂಥ ಪರಿಸ್ಥಿತಿಯಲ್ಲೂ ತಮ್ಮ ಕುಟುಂಬದ ಜತೆ ಬಾಳ್ವೆ ಮುಂದುವರಿಸಬೇಕು ಎಂಬ ಮನೋಸ್ಥಿತಿಯನ್ನೇ ಹೊಂದಿರುತ್ತೇವೆ. ಆ ಚಿಕಿತ್ಸೆ ದುಬಾರಿಯಾಗಿರಲೀ ಅಥವಾ ಅಗ್ಗವೇ ಆಗಿರಲೀ ಪರಿಸ್ಥಿತಿ ಅನಿವಾರ್ಯವಾದಾಗ ವೈದ್ಯಕೀಯ ಬೆಂಬಲ ವ್ಯವಸ್ಥೆಗೆ ಅಂಟಿಕೊಳ್ಳುವುದು ಸಹಜ. ಹಾಗಿದ್ದೂ ವ್ಯಕ್ತಿಯೊಬ್ಬ ಸುಖಮರಣ ಬಯಸುತ್ತಾನೆ ಎಂದರೆ ಅದನ್ನು ಗೌರವಿಸಬೇಕಾದ್ದು ನಾಗರಿಕ ಸಮಾಜದ ಕರ್ತವ್ಯ.

ಆದರೆ ಸಕ್ರಿಯ ದಯಾಮರಣದ ವಿಚಾರಕ್ಕೆ ಬಂದರೆ, ಇಲ್ಲಿ ನೈತಿಕ ಅಂಶಗಳು ಪ್ರಮುಖವಾಗುತ್ತವೆ. ಇದು ಕೇವಲ ವೈದ್ಯಕೀಯ ಚಿಕಿತ್ಸೆಯನ್ನು ನಿರಾಕರಿಸುವುದಷ್ಟೇ ಅಲ್ಲ; ಗುಣಪಡಿಸಲಾಗದ ಕಾಯಿಲೆ ಹೊಂದಿರುವ ಒಬ್ಬನ ಜೀವನವನ್ನು ಕೊನೆಗಾಣಿಸಲು ಕೈಗೊಳ್ಳುವ ಪ್ರಜ್ಞಾಪೂರ್ವಕ ಹಾಗೂ ಕಡ್ಡಾಯ ನಿರ್ಧಾರ. ರೋಗಿಯ ವಿನಂತಿಯನ್ನು ಮೀರಿ ಈ ನಿರ್ಧಾರ ಕೈಗೊಳ್ಳುವ ಅವಧಿಯಲ್ಲಿ ವೈದ್ಯರನ್ನು ವಿಚಾರಣೆಗೆ ಗುರಿಪಡಿಸದಿರುವ ಕಾನೂನಾತ್ಮಕ ಅಂಶವನ್ನು ಕೂಡಾ ಇದು ಒಳಗೊಳ್ಳುತ್ತದೆ. ನೈತಿಕತೆಯ ಪ್ರಶ್ನೆ ಬಂದಾಗ, ಒಬ್ಬ ವ್ಯಕ್ತಿ ತಾನಾಗಿಯೇ ನಿರ್ದಿಷ್ಟ ನಿರ್ಧಾರ ಕೈಗೊಳ್ಳಬೇಕೇ ಅಥವಾ ಬೇರೆಯವರ ನಿರ್ಧಾರವನ್ನು ಆತನ ಮೇಲೆ ಹೇರಬೇಕೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಸಕ್ರಿಯ ದಯಾಮರಣದ ಪ್ರಮುಖ ಅಂಶಗಳನ್ನು ಗಮನಿಸಿದರೆ, ಇದನ್ನು ಕಾನೂನಾತ್ಮಕ ಆತ್ಮಹತ್ಯೆ ಅಥವಾ ಕಾನೂನಾತ್ಮಕ ಕೊಲೆ ಇಲ್ಲವೇ ಒತ್ತಡಪೂರ್ವಕ ಆತ್ಮಹತ್ಯೆ ಎಂದು ಪರಿಗಣಿಸಬಹುದು. ಬಹುತೇಕ ವ್ಯಕ್ತಿಗಳಲ್ಲಿ ಇರುವ ಒಂದು ಆಳವಾಗಿ ಬೇರೂರಿರುವ ಒಂದು ನಂಬಿಕೆ ಎಂದರೆ, ಬದುಕು ಎನ್ನುವುದು ದೇವರು ನೀಡಿದ ಉಡುಗೊರೆ. ಅದನ್ನು ನಿರಾಕರಿಸುವ ಹಕ್ಕು ಮನುಷ್ಯರಿಗೆ ಇಲ್ಲ ಎನ್ನುವುದು. ಮತ್ತೊಬ್ಬರ ಜೀವವನ್ನು ತೆಗೆಯುವ ವಿಚಾರಕ್ಕೆ ಬಂದಾಗ, ಅದು ಎಷ್ಟೇ ದಯಾಪರ ಉದ್ದೇಶವನ್ನು ಹೊಂದಿದ್ದರೂ, ಅದು ದೇವರ ನಿರ್ಧಾರದ ಜತೆಗೆ ಆಡುವ ಆಟ ಎಂಬ ಮನೋಭಾವನೆ ಇರುತ್ತದೆ. ಒಬ್ಬ ವ್ಯಕ್ತಿ ಪ್ರಜ್ಞಾಶೂನ್ಯ ಅವಸ್ಥೆಯಲ್ಲಿದ್ದು, ಆತ ತನ್ನ ಸಾವಿನ ಇಚ್ಛೆಯನ್ನು ವ್ಯಕ್ತಪಡಿಸಿಲ್ಲ ಎಂದಾದರೆ, ಆ ವ್ಯಕ್ತಿಯ ಬದುಕನ್ನು ಕಸಿದುಕೊಳ್ಳುವ ಹಕ್ಕು ಯಾರಿಗಿದೆ? ಕುಟುಂಬದ ಇತರ ಸದಸ್ಯರ ದುರಾಸೆಯ ಮನೋಭಾವ ಮತ್ತು ಒಬ್ಬನ ಸಾವಿನಿಂದ ಲಾಭ ಪಡೆಯಲು ನಿರ್ಧರಿಸಿ ಇಂಥ ನಿರ್ಧಾರಗಳನ್ನು ಕೈಗೊಂಡರೆ ಅದು ನಿಜಕ್ಕೂ ಅಪಾಯಕಾರಿ. ವೈದ್ಯ ಪ್ರಾಮಾಣಿಕನಾಗಿದ್ದರೂ, ಆ ವೈದ್ಯ ತೆಗೆದುಕೊಳ್ಳುವ ನಿರ್ಧಾರ ಸರಿಯೇ ಅಥವಾ ತಪ್ಪೇ ಎನ್ನುವ ಆಳವಾದ ನೈತಿಕ ಅಂಶವಂತೂ ಈ ನಿರ್ಧಾರದ ಹಿಂದೆ ಸಹಜವಾಗಿಯೇ ಕೆಲಸ ಮಾಡುತ್ತದೆ. ಇಂಥ ದ್ವಂದ್ವದಲ್ಲಿ ವೈದ್ಯರ ಕರ್ತವ್ಯ ಖಂಡಿತವಾಗಿಯೂ ಆತನ ಜೀವನವನ್ನು ಮುಂದುವರಿಸುವುದೇ ವಿನಃ ಅದನ್ನು ಕೊನೆಗಾಣಿಸಲು ಸಹಕರಿಸುವುದಲ್ಲ.

ತೀರಾ ಹಿಂಸೆ ಎನಿಸುವಂಥ ವೈದ್ಯಕೀಯ ಚಿಕಿತ್ಸೆಯನ್ನು ಸ್ಥಗಿತಗೊಳಿಸುವುದಕ್ಕೂ, ಒಬ್ಬ ವ್ಯಕ್ತಿ ಶಾಂತಿಯುತವಾಗಿ ಹಾಗೂ ಸಹಜವಾಗಿ ಸಾಯಲು ಅವಕಾಶ ಮಾಡಿಕೊಡುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಒಬ್ಬನ ಸಾವನ್ನು ಪ್ರಜ್ಞಾಪೂರ್ವಕವಾಗಿ ಹಾಗೂ ಒತ್ತಡಪೂರ್ವಕವಾಗಿ ಕಡ್ಡಾಯಗೊಳಿಸುವುದು. ಇಂಥ ಸಂದರ್ಭದಲ್ಲಿ ಸಾವನ್ನು ಭರಿಸುವುದು ಎಂದರೆ ವಿಷಪೂರಿತ ಅಥವಾ ಮಾರಕ ಔಷಧವನ್ನು ಆತನಿಗೆ ಕಡ್ಡಾಯವಾಗಿ ನೀಡುವುದು. ಇಂಥ ಸಂದರ್ಭದಲ್ಲಿ ರೋಗಿಗೆ ತಾನು ಬದುಕಬೇಕೇ ಅಥವಾ ಸಾಯಬೇಕೇ ಎಂಬ ನಿರ್ಧಾರವನ್ನು ಕೈಗೊಳ್ಳಲು ಅವಕಾಶ ನೀಡದಿರುವುದು ಸರಿಯೇ? ಇದು ರೋಗಿಗಳಿಗೆ ಖಂಡಿತವಾಗಿಯೂ ಭಯಾನಕ ಪರಿಸ್ಥಿತಿ. ಸಾಯಬೇಕು ಎಂದು ನಿರ್ಧರಿಸಿದ ವ್ಯಕ್ತಿ ಕೂಡಾ ಬದುಕಿನ ಇಚ್ಛೆಯಿಂದ ತನ್ನ ನಿರ್ಧಾರವನ್ನು ಬದಲಾಯಿಸುವ ಸಾಧ್ಯತೆ ಇರುತ್ತದೆ. ಆದರೆ ಪ್ರಜ್ಞಾಶೂನ್ಯ ಸ್ಥಿತಿಗೆ ತೆರಳುವ ಮುನ್ನ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗದಿದ್ದರೆ? ಅಂಥ ರೋಗಿಗಳ ಮನದ ಇಂಗಿತವನ್ನು ಅರಿತುಕೊಳ್ಳುವುದು ಹೇಗೆ? ಅಂಥ ವ್ಯಕ್ತಿಗಳ ಜೀವಬೆಂಬಲ ವ್ಯವಸ್ಥೆಯನ್ನು ತೆಗೆಯುವ ಮೂಲಕ ಸಾಯಲು ಅವಕಾಶ ಮಾಡಿಕೊಡುವುದು ವೈದ್ಯರ ಹಾಗೂ ನರ್ಸ್‌ಗಳ ವಿವೇಚನೆಯಲ್ಲಿ ಸರಿ ಎನಿಸಿದರೂ. ಅವರ ಆತ್ಮಸಾಕ್ಷಿ ಅದಕ್ಕೆ ಖಂಡಿತವಾಗಿಯೂ ಅಡ್ಡಬರುತ್ತದೆ. ಹಾಗಿದ್ದಮೇಲೆ ಮಾರಣಾಂತಿಕ ಹಾಗೂ ವಿಷಪೂರಿತ ಔಷಧವನ್ನು ನೀಡಿ ವ್ಯಕ್ತಿಯ ಬದುಕನ್ನು ಕೊನೆಗಾಣಿಸಲು ಸಾಧ್ಯವೇ?

ಸಾವು ಅನಿವಾರ್ಯ ಎಂದು ನಿಶ್ಚಿತವಾದ ಪ್ರಕರಣಗಳಲ್ಲಿ ಕೂಡಾ ಆ ರೋಗಿಗೆ ಆತ್ಮೀಯವಾಗಿರುವ ವ್ಯಕ್ತಿಗಳಿಗೆ ಅದನ್ನು ಜೀರ್ಣಿಸಿಕೊಳ್ಳುವುದು ಕಷ್ಟಸಾಧ್ಯ. ಒಬ್ಬ ವ್ಯಕ್ತಿ ಸಾವಿನ ಅಂಚಿನಲ್ಲಿರುವ ಲಕ್ಷಣಗಳನ್ನು ತಿಳಿದುಕೊಳ್ಳುವುದು ಮತ್ತು ಅರ್ಥಮಾಡಿಕೊಳ್ಳುವುದು ಸುಲಭ. ಭಯಾನಕ ನೋವು ಅಥವಾ ಅವಮಾನಕರ ರೀತಿಯಲ್ಲಿ ಬದುಕುವ ವ್ಯಕ್ತಿಗೆ ತನ್ನ ಸಾವಿನ ಇಂಗಿತವನ್ನು ವ್ಯಕ್ತಪಡಿಸಬಹುದು. ಅಥವಾ ತನ್ನ ದೈಹಿಕ ಚಟುವಟಿಕೆಗಳ ಅಂಗಗಳ ಮೇಲೆ ಸ್ವಾಧೀನ ಕಳೆದುಕೊಂಡ ಅವಧಿಯಲ್ಲಿ ಇಂಥ ನಿರ್ಧಾರವನ್ನು ರೋಗಿ ಕೈಗೊಳ್ಳಬಹುದು. ಖಂಡಿತವಾಗಿಯೂ ಅಂಥ ನೋವನ್ನು ಸಹಿಸಿಕೊಳ್ಳುವ ಅಥವಾ ನೋಡುವ, ಅಂಥ ಮಾನಸಿಕ ಸ್ಥಿತಿಯನ್ನು ಜೀರ್ಣಿಸಿಕೊಳ್ಳುವ ಧೈರ್ಯ ಹಾಗೂ ಸಾಮರ್ಥ್ಯ ಖಂಡಿತವಾಗಿಯೂ ನಮಗಿಲ್ಲ. ಅಂಥ ಶಕ್ತಿಗೆ ನಾವು ಬಹಳಷ್ಟು ಬೇಡಿಕೊಳ್ಳುತ್ತೇವೆಯಾದರೂ ವಾಸ್ತವವಾಗಿ ಅಂಥ ಪರಿಸ್ಥಿತಿ ಇಲ್ಲ. ಅಂಥ ಸಂದರ್ಭದಲ್ಲಿ ಅಂಥ ವ್ಯಕ್ತಿಗಳಿಗೆ ಖಂಡಿತವಾಗಿಯೂ ದಯಾಮರಣದ ಅವಕಾಶವನ್ನು ನೀಡುವುದು ಮಾನವೀಯತೆ.

ನೆದರ್ಲೆಂಡ್ಸ್‌ನ ಉತ್ತರ ಪ್ರಾಂತ್ಯ, ಆಸ್ಟ್ರೇಲಿಯಾ, ಜಪಾನ್, ಕೊಲಂಬಿಯಾ ಮತ್ತು ಬೆಲ್ಜಿಯಂನಂಥ ದೇಶಗಳಲ್ಲಿ, ಆ ವ್ಯಕ್ತಿಯ ವಿನಂತಿಯ ಮೇರೆಗೆ ಆತನ ಜೀವವ್ಯವಸ್ಥೆಯನ್ನು ತೆಗೆಯಲು ಕಾನೂನುಬದ್ಧ ಅವಕಾಶವಿದೆ. ಇಂಗ್ಲೆಂಡ್‌ನಲ್ಲಿ ಕೂಡಾ ಗುಣಪಡಿಸಲಾದ ಒಬ್ಬ ವ್ಯಕ್ತಿಯ ವೈದ್ಯಕೀಯ ಚಿಕಿತ್ಸೆಯನ್ನು ಸ್ಥಗಿತಗೊಳಿಸುವ ಮತ್ತು ಜೀವನಾವಶ್ಯಕ ಬೆಂಬಲ ವ್ಯವಸ್ಥೆಯನ್ನು ಕಿತ್ತುಹಾಕುವುದನ್ನು ಕಾನೂನುಬದ್ಧಗೊಳಿಸುವ ಮೂಲಕ ಆತನಿಗೆ ಸಾಯುವ ಅವಕಾಶ ನೀಡುವ ನಿಟ್ಟಿನಲ್ಲಿ ಚರ್ಚೆ ನಡೆದಿದೆ. ದಕ್ಷಿಣ ಆಫ್ರಿಕಾದಲ್ಲಿ ಕಾನೂನುಬದ್ಧವಾಗಿ ದಯಾಮರಣ ಸ್ವೀಕಾರಾರ್ಹವಲ್ಲದಿದ್ದರೂ, ಇದಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ವೈದ್ಯಕೀಯ ಸಂಘದ ಒಂದು ಸಮೀಕ್ಷೆಯ ಪ್ರಕಾರ, ಭಾರತದಲ್ಲಿ ಶೇಕಡ 60ರಷ್ಟು ವೈದ್ಯರು, ನಿಷ್ಕ್ರಿಯ ದಯಾಮರಣಕ್ಕೆ ಸಹಕರಿಸಿದ್ದಾರೆ. ಅಂದರೆ ಒಬ್ಬ ವ್ಯಕ್ತಿ ಬದುಕುವ


www.shikarat.com

ಸಾಧ್ಯತೆಯೇ ಇಲ್ಲ ಎಂಬ ಪರಿಸ್ಥಿತಿಯಲ್ಲಿ ಆತನ ಜೀವಬೆಂಬಲ ವ್ಯವಸ್ಥೆಯನ್ನು ತೆಗೆಯುವ ಮೂಲಕ ಅಥವಾ ಅವರ ಸಾವನ್ನು ತ್ವರಿತಗೊಳಿಸುವ ಪ್ರಕ್ರಿಯೆ ಅನುಸರಿಸುವ ಮೂಲಕ ಈ ನಿರ್ಧಾರ ಕೈಗೊಂಡಿದ್ದಾರೆ. ಕಾನೂನುಬದ್ಧವಾಗಿ ಒಬ್ಬ ವ್ಯಕ್ತಿ ಸಾಯುವ ಅಥವಾ ಬದುಕುವ ಹಕ್ಕನ್ನು ಆತ ಕೈಗೊಳ್ಳಲು ಅವಕಾಶ ನೀಡಬೇಕು ಎಂಬ ವಿಚಾರದಲ್ಲಿ ಹಲವಾರು ಸ್ವಯಂಸೇವಾ ಸಂಸ್ಥೆಗಳು ಪ್ರಚಾರಾಂದೋಲನ ಕೈಗೊಂಡಿವೆ.

ದಯಾಮರಣಕ್ಕೆ ಸಂಬಂಧಿಸಿದ ಯಾವುದೇ ಕಾನೂನುಗಳು, ಇಂಥ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳುವ ಸ್ಥಿತಿಯನ್ನು ತಡೆಯಲು ಸೂಕ್ತ ಸುರಕ್ಷೆಗಳನ್ನು ಹೊಂದಿರಬೇಕಾದ್ದು ಅನಿವಾರ್ಯ. ಉದಾಹರಣೆಗೆ ದಯಾಮರಣದ ಹಿಂದೆ ಕುಟುಂಬದವರ ದುರಾಸೆ ಮತ್ತು ವೈದ್ಯರ ದುರಾಸೆ ಅಡಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ತೀವ್ರತರ ಕಾಯಿಲೆಗಳಿಂದ ಬಳಲುತ್ತಿರುವವರನ್ನು ಹಣದ ಆಸೆಯಿಂದ ಸಾಯಿಸಲೂ ಅವಕಾಶವಾಗುತ್ತದೆ. ಅಥವಾ ಕುಟುಂಬದವರು ಚಿಕಿತ್ಸಾ ವೆಚ್ಚ ಭರಿಸುವುದನ್ನು ತಪ್ಪಿಸುವ ಸಲುವಾಗಿ ಇಂಥ ನಿರ್ಧಾರಗಳಿಗೆ ಸೂಚನೆ ನೀಡುವ ಸಾಧ್ಯತೆಯನ್ನೂ ಊಹಿಸಬೇಕಾಗುತ್ತದೆ. ಖಂಡಿತವಾಗಿಯೂ ದಯಾಮರಣದ ನಿರ್ಧಾರ ರೋಗಿಗಳಿಂದಲೇ ಬರಬೇಕು ಎನ್ನುವುದಲ್ಲಿ ಯಾವ ವಿವಾದವೂ ಇಲ್ಲ. ಅದು ಕೂಡಾ ಸುದೀರ್ಘ ಹಾಗೂ ಆಳವಾದ ಯೋಚನೆಯ ಬಳಿಕ ಬಂದ ನಿರ್ಧಾರವಾಗಿರಬೇಕು. ಈ ವಿಚಾರದಲ್ಲಿ ಕೆಲವೊಮ್ಮೆ ಆತುರದ ನಿರ್ಧಾರವನ್ನು ಕೈಗೊಳ್ಳುವ ಸಾಧ್ಯತೆಯೂ ಇರುತ್ತದೆ.

ಯಾವುದೇ ಪರಿಸ್ಥಿತಿಯಲ್ಲೂ ರೋಗಿ ಅಂಥ ನಿರ್ಧಾರ ಕೈಗೊಳ್ಳಲು ಯಾರ ಒತ್ತಡ ಅಥವಾ ಪ್ರಭಾವವೂ ಇರಬಾರದು. ತಮ್ಮ ಸಾವನ್ನು ತಂದುಕೊಳ್ಳುವ ಸಲುವಾಗಿ ವೈದ್ಯರ ಮಧ್ಯಪ್ರವೇಶವನ್ನು ಬಯಸುವ ಯಾವ ವ್ಯಕ್ತಿಯ ಮೇಲೂ ಬಾಹ್ಯ ಒತ್ತಡ ಇರಬಾರದು. ಒಬ್ಬ ರೋಗಪೀಡಿತ ವ್ಯಕ್ತಿ ಪದೇ ಪದೇ ದಯಾಮರಣಕ್ಕೆ ಮನವಿ ಮಾಡಿಕೊಳ್ಳುವವರೆಗೂ ವೈದ್ಯರು ಅಥವಾ ಸಂಬಂಧಿಸಿದ ಇತರರು ಅದಕ್ಕೆ ಒಪ್ಪಿಗೆ ನೀಡಬಾರದು. ಹಾಗೂ ಆತ ಸಾಯುವ ಇಂಗಿತ ವ್ಯಕ್ತಪಡಿಸುವಲ್ಲಿ ಯಾವ ಅನುಮಾನವೂ ಇರಬಾರದು. ಒಬ್ಬ ವ್ಯಕ್ತಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸುಧಾರಿಸುವ ಸಾಧ್ಯತೆಯೇ ಇಲ್ಲ ಎಂದು ಮನದಟ್ಟಾದ ಬಳಿಕವಷ್ಟೇ ಇಂಥ ನಿರ್ಧಾರಗಳಿಗೆ ಮುಂದಾಗಬೇಕು. ಆದರೆ ಇದನ್ನು ಕೆಲ ಮಂದಿ ಒಪ್ಪುವುದಿಲ್ಲ. ದಯಾಮರಣದ ಆಯ್ಕೆಯೇ ಸಮಾಜಕ್ಕೆ ತಪ್ಪು ಸಂದೇಶವನ್ನು ರವಾನಿಸುತ್ತದೆ.

ಜತೆಗೆ ಇದು ಮಾನವ ಜೀವನದ ಪ್ರಕ್ರಿಯೆಯ ಪಾವಿತ್ರ್ಯತೆಯ ಬಗ್ಗೆಯೇ ತಪ್ಪು ಅಭಿಪ್ರಾಯ ಮೂಡಿಸುತ್ತದೆ. ದಯಾಮರಣದ ಹಿಂದೆ ಅಂಗಾಂಗ ಬೆಳೆಯ ದುರುದ್ದೇಶ ಕೂಡಾ ಅಡಗಿರುವ ಸಾಕಷ್ಟು ಸಾಧ್ಯತೆಗಳು ಇರುತ್ತವೆ ಎಂದು ವಾದಿಸುತ್ತಾರೆ. ಸಕಾಲಿಕವಾಗಿ ಆಂಧ್ರಪ್ರದೇಶ ಹೈಕೋರ್ಟ್ 2005ರಲ್ಲಿ ಈ ಬಗ್ಗೆ ತೀರ್ಪು ನೀಡಿ, ವೆಂಕಟೇಶ್ ಎಂಬವರ ದಯಾಮರಣದ ಅರ್ಜಿಯನ್ನು ವಜಾಗೊಳಿಸಿದೆ. ಆತ ತೀವ್ರತರವಾದ ಕಾಯಿಲೆಯಿಂದ ಬಳಲುತ್ತಿದ್ದು, ಭವಿಷ್ಯದಲ್ಲಿ ಅದು ಗುಣವಾಗುವ ಯಾವುದೇ ಸಾಧ್ಯತೆ ಇಲ್ಲ ಎನ್ನುವುದು ಖಚಿತವಾಗಿದ್ದರೂ, ಆತನ ದಯಾಮರಣದ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

ದಯಾಮರಣವನ್ನು ಖಂಡತುಂಡವಾಗಿ ವಿರೋಧಿಸುವವರ ಇನ್ನೊಂದು ವಾದವೆಂದರೆ, ಒಬ್ಬ ವ್ಯಕ್ತಿ ತೀವ್ರ ಕಾಯಿಲೆಯಿಂದ ಬಳಲುತ್ತಿದ್ದಾನೆ ಅಥವಾ ಮೆದುಳಿನ ಹಾನಿಯಿಂದಾಗಿ ಆತ ಕೃತಕವಾಗಿ ಬದುಕಿದ್ದಾನೆ ಎಂಬ ಪರಿಸ್ಥಿತಿ ಇದ್ದಾಗ, ಸಾವು ಬದುಕಿನ ನಡುವೆ ಹೋರಾಡುತ್ತಿರುವ ಸಂದರ್ಭದಲ್ಲಿ ಆ ವ್ಯಕ್ತಿಯನ್ನು ನಿಷ್ಪ್ರಯೋಜಕ ಎಂದು ಪರಿಗಣಿಸಿದಂತಾಗುತ್ತದೆ. ಇದು ಸಮಾಜದ ಮೌಲ್ಯವ್ಯವಸ್ಥೆಯ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತದೆ ಎನ್ನುವುದು. ವಿಶ್ವದಲ್ಲಿ ಹಲವಾರು ಮಂದಿ ಇಂಥ ದಯನೀಯ ಸ್ಥಿತಿಯಲ್ಲಿದ್ದಾರೆ. ಉದಾಹರಣೆಗೆ ಅಮೆರಿಕದ ಜಿಲ್ಲಾ ನ್ಯಾಯಾಲಯವೊಂದು, ಸಾಯುವ ಹಕ್ಕಿನ ಕುರಿತ ವಿಶೇಷ ಪ್ರಕರಣದಲ್ಲಿ, ಐತಿಹಾಸಿಕ ತೀರ್ಪು ನೀಡಿ, ಗುಣಪಡಿಸಲಾದ ಕಾಯಿಲೆಗಳಿಂದ ತೀವ್ರತರವಾಗಿ ನರಳುತ್ತಿರುವ ವ್ಯಕ್ತಿ ಟೆರ್ರಿ ಶ್ಚೂವೊ ಎಂಬವರಿಗೆ ಶಾಂತಿಯುತವಾಗಿ ಸಾಯಲು ಅವಕಾಶ ಮಾಡಿಕೊಟ್ಟದ್ದು, ಇಡೀ ವಿಶ್ವದ ಗಮನ ಸೆಳೆದಿತ್ತು. 1990ರಲ್ಲಿ ಸಂಭವಿಸಿದ ಹೃದಯಾಘಾತದಲ್ಲಿ ಟೆರ್ರಿಯವರ ಮೆದುಳಿಗೆ ಹಾನಿಯಾಗಿತ್ತು. ಹಾಗೂ ಆಕೆ ಪ್ರಜ್ಞಾಶೂನ್ಯ ಸ್ಥಿತಿಗೆ ತಲುಪಿದ್ದಳು. ಇದಾದ ಬಳಿಕ ಆಕೆ ವಾಸಿಯಾಗುವ ಯಾವುದೇ ಸಾಧ್ಯತೆ ಇಲ್ಲ ಎಂದು ವೈದ್ಯರು ಸ್ಪಷ್ಟಪಡಿಸಿದರು.

ಹಿಂದೆ ಉಸಿರಾಟ ನಿಂತಲ್ಲಿಗೆ ಒಬ್ಬ ವ್ಯಕ್ತಿಯ ಸಾವನ್ನು ನಿರ್ಧರಿಸಲಾಗುತ್ತಿತ್ತು. ಆದರೆ ಹೃದ್ರೋಗ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿಕಾರಿ ಸಂಶೋಧನೆಗಳು ಮತ್ತು ತಂತ್ರಜ್ಞಾನದ ಸೌಲಭ್ಯದಿಂದಾಗಿ ಇಂದು ವೆಂಟಿಲೇಟರ್ ಮೂಲಕ ಕೃತಕ ಉಸಿರಾಟ ವ್ಯವಸ್ಥೆ ಮಾಡಿಒಬ್ಬನ ಸಾವನ್ನು ಮುಂದೂಡಲು ಅವಕಾಶವಿದೆ. ಕೆಲ ವರ್ಷಗಳ ಹಿಂದೆ ಕಲ್ಪನೆಯನ್ನೂ ಊಹಿಸದಿದ್ದ ಇಂಥ ವ್ಯವಸ್ಥೆ ಇದೀಗ ವೈದ್ಯಕೀಯ ರಂಗದಲ್ಲಿದೆ. ಇಂಥ ಪರಿಸ್ಥಿತಿಯಲ್ಲಿ ಜೀವನದ ಅರ್ಥವನ್ನೇ ಮರುಪರಿಶೀಲಿಸಬೇಕಾದ ಅಗತ್ಯತೆ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ದಯಾಮರಣವನ್ನು ಅನೈತಿಕ ಎಂಬ ವಾದವನ್ನು ತಿರಸ್ಕರಿಸಲೇಬೇಕಾಗುತ್ತದೆ.

ದಯಾಮರಣ ಎನ್ನುವುದು ವಿವಾದಾತ್ಮಕ ವಿಷಯ ಎನ್ನುವ ಬಗ್ಗೆ ಯಾವ ಅನುಮಾನವೂ ಇಲ್ಲ. ಆದರೆ ಅದರ ಸುತ್ತ ಸರಿ ಮತ್ತು ತಪ್ಪಿನ ವಿವೇಚನೆಯ ದಟ್ಟ ಪ್ರಭಾವಳಿ ಆವರಿಸಿದೆ. ಅಂತಿಮವಾಗಿ ಒಬ್ಬ ವ್ಯಕ್ತಿ ತನ್ನ ಅರ್ಥಹೀನನರಳಿಕೆಯನ್ನು ಮುಂದುವರಿಸಬೇಕೇ ಅಥವಾ ಅದನ್ನು ಕೊನೆಗಾಣಿಸಬೇಕೇ ಎಂದು ನಿರ್ಧರಿಸುವ ಹಕ್ಕು ಆತನಿಗೆ ಇದ್ದೇ ಇದೆ. ವೈದ್ಯಕೀಯ ಬೆಂಬಲ ವ್ಯವಸ್ಥೆ ಮೂಲಕ ಅರ್ಥಹೀನವಾಗಿ ಬದುಕನ್ನು ಮುಂದುವರಿಸಬೇಕೇ ಅಥವಾ ಸಾವನ್ನೇ ಅಂತಿಮ ಚಿಕಿತ್ಸೆಯಾಗಿ ಪಡೆಯಬೇಕೇ ಎಂಬ ನಿರ್ಧಾರ ಆತನ ವಿವೇಚನೆಗೆ ಬಿಟ್ಟದ್ದು. ಎಲ್ಲಕ್ಕಿಂತ ಹೆಚ್ಚಾಗಿ ಬದುಕುವ ಹಕ್ಕಿಗೆ ಪರಿಪೂರ್ಣ ನ್ಯಾಯ ದೊರಕುವುದು ಆತ ಗೌರವಯುತವಾಗಿ ಸಾಯುವ ಹಕ್ಕು ಕೂಡಾ ಲಭಿಸುವಂತೆ ನೋಡಿಕೊಂಡಾಗ ಮಾತ್ರ.

## 15. ಕೃಷಿ ವಲಯ ಸುಧಾರಣೆಯ ಅನಿವಾರ್ಯತೆ

ಪೀಠಿಕೆ

ಭಾರತದ ದಾಖಲೆ ಪ್ರಮಾಣದ ಆಹಾರಧಾನ್ಯ ಉತ್ಪಾದನೆಯಾಗಿರುವುದು 2011–12ನೇ ಹಣಕಾಸು ವರ್ಷದಲ್ಲಿ. ಇಡೀ ವಿಶ್ವದಲ್ಲಿ


www.shikarat.com
UniversalCoachingCentre

ಆಹಾರೋತ್ಪಾದನೆ ಕುಂಠಿತವಾಗಿ ಆಹಾರಧಾನ್ಯಗಳ ಬೆಲೆ ಗಗನಕ್ಕೇರುತ್ತಿರುವ ಸಂದರ್ಭದಲ್ಲಿ ಭಾರತದ ಈ ಸಾಧನೆ ನಿಜಕ್ಕೂ ಹೆಮ್ಮೆಪಡುವಂಥದ್ದು. ಭಾರತದ ಈ ಗಣನೀಯ ಸಾಧನೆ ಸಾಧ್ಯವಾದದ್ದು ಸಕಾಲಿಕ ನೀತಿಗಳಿಂದಾಗಿ ಎಂದು 2012–13ನೇ ವರ್ಷದ ಆರ್ಥಿಕ ಸಮೀಕ್ಷೆ ಅಭಿಪ್ರಾಯಪಟ್ಟಿದೆ.

ಆದರೆ ವಾಸ್ತವಿಕವಾಗಿ ಈ ಪ್ರಗತಿ ದರ ನಿಗದಿತ ಗುರಿಗಿಂತ ಶೇಕಡ 3.6ರಷ್ಟು ಕಡಿಮೆ. ಇದರ ಜತೆಗೆ ಇಂಥ ಹಿತಾನುಭವದ ಪರಿಸ್ಥಿತಿ ತೀರಾ ಕ್ಷಣಿಕ ಮತ್ತು ಇದು ಭಾರತೀಯ ಕೃಷಿಕ್ಷೇತ್ರ ಇಂದು ಎದುರಿಸುತ್ತಿರುವ ದೊಡ್ಡ ಹಾಗೂ ತೀವ್ರ ಸಮಸ್ಯೆಗಳನ್ನು ಹುದುಗಿಸುವ ಪ್ರಯತ್ನ. ಭಾರತದ ಕೃಷಿಕ್ಷೇತ್ರ ಇಂದು ಕೆಲ ಉನ್ನತಮಟ್ಟದ ಅಂತರ ಸಂಪರ್ಕವಿರುವ ಸವಾಲುಗಳ ಸರಣಿಯನ್ನೇ ಎದುರಿಸುತ್ತಿದೆ. ಇವುಗಳನ್ನು ವಿಶ್ಲೇಷಣೆಗೆ ಗುರಿಪಡಿಸಿದಾಗ, ಕೃಷಿಕ್ಷೇತ್ರ ಈ ದೇಶಕ್ಕೆ ಅತ್ಯಂತ ದೊಡ್ಡ ಸವಾಲು ತಂದೊಡ್ಡಿರುವುದು ವೇದ್ಯವಾಗುತ್ತದೆ ಮತ್ತು ಇದನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳದಿದ್ದರೆ ಭಾರತದ ಆಹಾರ ಭವಿಷ್ಯ ಭಯಾನಕ. ಭಾರತ ಎದುರಿಸುತ್ತಿರುವ ಕೃಷಿಕ್ಷೇತ್ರದ ಪ್ರಮುಖ ಸಮಸ್ಯೆಗಳು ಇವು:

1. ದೇಶದ ಆಹಾರ ಭದ್ರತೆ ದೇಶ ಎದುರಿಸುತ್ತಿರುವ ಅತಿದೊಡ್ಡ ಸವಾಲು. ದೇಶದಲ್ಲಿ ಆಹಾರ ಭದ್ರತೆ ಕಾಯ್ದೆಯನ್ನು ಜಾರಿಗೊಳಿಸಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.
2. ಕೃಷಿ ಮಾರುಕಟ್ಟೆ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿಲ್ಲವಾದ ಕಾರಣ, ಕೃಷಿ ಕ್ಷೇತ್ರ ಇಂದು ಲಾಭದಾಯಕ ವೃತ್ತಿಯಾಗಿ ಉಳಿದಿಲ್ಲ. ಈ ಕಾರಣದಿಂದಾಗಿ ಆರ್ಥಿಕತೆಯಲ್ಲಿ ಇದಕ್ಕೆ ಸಂಬಂಧಿಸಿದ ಮತ್ತಷ್ಟು ಸಮಸ್ಯೆಗಳು ಹುಟ್ಟಿಕೊಂಡಿವೆ.
3. ಕಾರ್ಮಿಕ ಮಾರುಕಟ್ಟೆ ಕ್ಷೇತ್ರದಲ್ಲಿ ಕೂಡಾ ಸುಧಾರಣೆಗಳು ಆಗದಿರುವುದು ಈ ವಲಯದ ಬಂಡವಾಳ ಹೂಡಿಕೆ ಅವಕಾಶಗಳಿಗೆ ತಡೆಯಾಗಿ ಪರಿಣಮಿಸಿದೆ.
4. ಈ ವೃತ್ತಿಯಲ್ಲಿ ಜನಸಾಂದ್ರತೆ ಅಧಿಕವಾಗಿದ್ದು, ಈ ಕ್ಷೇತ್ರವನ್ನು ಅವಲಂಬಿಸಿದವರಿಗೆ ಬರುವ ತಲಾದಾಯ ತೀರಾ ಕಡಿಮೆ. ಉದಾಹರಣೆಗೆ ಶೇಕಡ 58.2 ಮಂದಿ ಕೃಷಿಕ್ಷೇತ್ರವನ್ನು ಅವಲಂಬಿಸಿದ್ದು, ಇದು ಒಟ್ಟು ಆದಾಯದ ಶೇಕಡ 14.1 ಪಾಲನ್ನು ಮಾತ್ರ ಹೊಂದಿದೆ.

ಮೇಲ್ನೋಟಕ್ಕೆ ಇದು ಪ್ರತ್ಯೇಕ ಸವಾಲುಗಳು ಎನಿಸಿದರೂ, ಭಾರತದ ಪರಿಸ್ಥಿತಿಯಲ್ಲಿ ಇವಕ್ಕೆ ಒಂದಕ್ಕೊಂದು ಸಂಬಂಧವಿದೆ. ಇದು ಅಂತಿಮವಾಗಿ ರೈತರಿಗೆ ಕೃಷಿ ಕ್ಷೇತ್ರ ಹಿತಕರವಲ್ಲದ ವಾತಾವರಣವನ್ನು ಸೃಷ್ಟಿಸುತ್ತದೆ. ಇಷ್ಟಾಗಿಯೂ ಅವರಿಗೆ ಬೇರೆ ಯಾವುದೇ ಉದ್ಯೋಗಾವಕಾಶ ಇಲ್ಲದಿರುವುದರಿಂದ ಅವರು ಕೃಷಿಕ್ಷೇತ್ರವನ್ನೇ ನೆಚ್ಚಿಕೊಳ್ಳಬೇಕಾಗಿದೆ. ಈ ಒಂದು ನಿದರ್ಶನದಿಂದ ಕೃಷಿಕ್ಷೇತ್ರದ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಳ್ಳಬಹುದು: ರೈತರು ತಮ್ಮ ಕೃಷಿಭೂಮಿಯನ್ನು ಬಿಲ್ಡರ್‌ಗಳಿಗೆ ನಿರ್ಮಾಣ ಉದ್ದೇಶಕ್ಕಾಗಿ ಮತ್ತು ವಸತಿ ಸೊಸೈಟಿಗಳಿಗಾಗಿ ಮಾರಾಟ ಮಾಡುತ್ತಿದ್ದಾರೆ. ಅದಾಗ್ಯೂ ಇದು ನಗರ ವಿಸ್ತರಣೆಯ ಸಾಮಾನ್ಯ ಬೆಳವಣಿಗೆಯಲ್ಲ. ಕೈಗಾರಿಕಾ ಅಭಿವೃದ್ಧಿ ಸಾಧಿಸಿದ ಬಹುತೇಕ ದೇಶಗಳಲ್ಲಿ ಮತ್ತು ನಗರೀಕರಣ ವ್ಯಾಪಕವಾಗಿರುವ ದೇಶಗಳಲ್ಲಿ, ನಗರಗಳ ಸುತ್ತಮುತ್ತ ಇರುವ ಕೃಷಿಭೂಮಿಗಳನ್ನು ನಗರಾಭಿವೃದ್ಧಿಯ ದೃಷ್ಟಿಯಿಂದ ಮಾರಾಟ ಮಾಡಲಾಗುತ್ತದೆ. ಆದರೆ ಭಾರತದಲ್ಲಿ ಇನ್ನೂ ಕೃಷಿ ಕ್ಷೇತ್ರದಲ್ಲಿ ಮುಂದುವರಿಯುವಂತೆ ಒತ್ತಡ ತರಲಾಗುತ್ತಿದೆ. ಏಕೆಂದರೆ ಕೃಷಿ ಇಂದು ಲಾಭದಾಯಕ ಚಟುವಟಿಕೆಯಾಗಿ ಉಳಿದಿಲ್ಲ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ರೈತನೂ ತನ್ನ ಕೃಷಿಭೂಮಿಯಿಂದ ಕಳಚಿಕೊಳ್ಳುವ ಪರ್ಯಾಯ ಮಾರ್ಗದ ಬಗ್ಗೆ ಯೋಚಿಸುತ್ತಿದ್ದಾನೆ.

ಇದಕ್ಕಿಂತಲೂ ಹೆಚ್ಚಾಗಿ ಕೃಷಿಕ್ಷೇತ್ರ ಇತರ ಹಲವಾರು ಇತಿಮಿತಿಗಳಿಗೆ ಒಳಪಟ್ಟಿದ್ದು, ಇದು ಕೃಷಿಕ್ಷೇತ್ರದ ಪ್ರಗತಿ ಹಾಗೂ ವಿಸ್ತರಣೆಗೆ ಅಡ್ಡಿಯಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಕೃಷಿಕ್ಷೇತ್ರದ ಪ್ರಗತಿ ಮತ್ತು ವಿಸ್ತರಣೆಗೆ ಸರ್ಕಾರ ಆದ್ಯ ಗಮನವನ್ನು ನೀಡಬೇಕಾಗಿದೆ. ಕೃಷಿಕ್ಷೇತ್ರಕ್ಕೆ ಹೆಚ್ಚಿನ ಬಂಡವಾಳ ಆಕರ್ಷಿಸುವುದು, ವಿತರಣಾ ವ್ಯವಸ್ಥೆ ಸರಿಪಡಿಸುವುದು, ಹೊಲದಿಂದ ಮಾರುಕಟ್ಟೆಗೆ ಉತ್ತಮ ಸಂಪರ್ಕ ಅಭಿವೃದ್ಧಿಪಡಿಸುವುದು, ದಾಸ್ತಾನು ಸಾಮರ್ಥ್ಯ ಹೆಚ್ಚಿಸುವುದು, ಮೌಲ್ಯವರ್ಧನೆ ಅಂಶ, ಉತ್ತಮ ಸಾಲ ಸೌಲಭ್ಯ ಮತ್ತು ಪರಿಣಾಮಕಾರಿ ಕೃಷಿ ವಿಮೆ ಸೌಲಭ್ಯ ಮತ್ತು ಕೃಷಿ–ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಮುಖ್ಯ.

ಕೃಷಿಯನ್ನು ಬಹಳಷ್ಟು ಮಂದಿ ಅವಲಂಬಿಸಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಅಧಿಕ ಗಮನ ಹರಿಸಲೇಬೇಕಿದೆ. ಇದು ಇತರ ವಲಯಗಳಾದ ಕೈಗಾರಿಕೆ ಹಾಗೂ ಸೇವಾ ಕ್ಷೇತ್ರದ ಆರ್ಥಿಕತೆಯ ವಿಸ್ತರಣೆ ಹಾಗೂ ಉದ್ಯೋಗಾವಕಾಶ ಸೃಷ್ಟಿಯನ್ನು ಅವಲಂಬಿಸಿದೆ.

—————————————————

**ಟಿಪ್ಪಣಿ**

ಆಹಾರಧಾನ್ಯಗಳ ಉತ್ಪಾದನೆಯ ಪ್ರಗತಿ ಶೇಕಡ ಒಂದರ ದರದಲ್ಲೇ ಸ್ಥಿರವಾಗಿತ್ತು ಎನ್ನುವುದು ಗಮನಿಸಬೇಕಾದ ಅಂಶ. ದೇಶದ ಜನಸಂಖ್ಯೆ ವಾರ್ಷಿಕ ಶೇಕಡ 1.6ರ ದರದಲ್ಲಿ ಬೆಳವಣಿಗೆ ಹೊಂದುತ್ತಿದ್ದು, ಆಹಾರದ ಬೇಡಿಕೆ ಮತ್ತು ಲಭ್ಯತೆಯ ನಡುವಿನ ಅಂತರ ಹೆಚ್ಚುತ್ತಾ ಹೋಗುತ್ತದೆ. ಈ ಅಂತರ ವಾರ್ಷಿಕ 0.5 ಶೇಕಡಾಗಿಂತ ಅಧಿಕವಾಗಿದೆ. ಈ ಕಂದಕವನ್ನು ಬಗೆಹರಿಸುವವರೆಗೂ ಭಾರತ ಖಂಡಿತವಾಗಿಯೂ ಭಾರತ ಆಹಾರ ಭದ್ರತೆ ಹೊಂದಿದ ದೇಶವಾಗಲಾರದು. ಸರ್ಕಾರ ಈ ವಿಷಯದಲ್ಲಿ ಮಧ್ಯಪ್ರವೇಶಿಸದಿದ್ದರೆ, ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಸುಲಭ ಸಾಧ್ಯವಲ್ಲ. 2012–13ನೇ ವರ್ಷದ ಆರ್ಥಿಕ ಸಮೀಕ್ಷೆಯ ಪ್ರಕಾರ 2011–12ನೇ ವರ್ಷದಲ್ಲಿ ಆಹಾರ ಧಾನ್ಯ ಉತ್ಪಾದನೆ ಪ್ರಗತಿದರ ಶೇಕಡ 3.6 ಎಂದು ಅಂದಾಜು ಮಾಡಲಾಗಿದ್ದರೂ, ಇದು ನಿರೀಕ್ಷೆಗಿಂತ ಕಡಿಮೆ ಪ್ರಮಾಣದಲ್ಲಿ ಆಹಾರೋತ್ಪನ್ನ ಪ್ರಗತಿಯಾಗಿರುವ ಅಂಶವನ್ನು ಕಡೆಗಣಿಸಲಾಗಿದೆ.

—————————————————

**ತಕ್ಷಣದ ಸವಾಲು**

ಕೃಷಿ ಹಾಗೂ ಇತರ ಕ್ಷೇತ್ರಗಳಿಗೆ ನೀಡುತ್ತಿದ್ದ ಅತ್ಯಧಿಕ ಸಬ್ಸಿಡಿಯ ಕಾರಣವಾಗಿ, ಕಳೆದ ಮೂರು ದಶಕಗಳಲ್ಲಿ ಕೃಷಿ ಕ್ಷೇತ್ರದ ಮೇಲೆ


www.shikarat.com
Universal Coaching Centre

ಬಂಡವಾಳ ಹೂಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ವಿಚಾರದಲ್ಲಿರಬಹುದು ಅಥವಾ ಉತ್ತಮ ತಳಿಯ ಬಿತ್ತನೆಬೀಜ, ನೀರಾವರಿ ಸಾಮರ್ಥ್ಯ, ವಿತರಣಾ ಜಾಲ, ದಾಸ್ತಾನು ಸೌಲಭ್ಯ, ಕೃಷಿ ವಿಸ್ತರಣೆ ಅಥವಾ ಇತರ ಯಾವುದೇ ಒಂದು ಕ್ಷೇತ್ರದಲ್ಲೂ ಬಂಡವಾಳ ಹೂಡಿಕೆಯಾಗಿಇಲ್ಲ. ಈ ಹಿನ್ನೆಲೆಯಲ್ಲಿ ದೇಶೀಯ ಮತ್ತು ವಿದೇಶಿ ಖಾಸಗಿ ವಲಯ ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ಆಕರ್ಷಿಸುವುದು ಇಂದಿನ ತುರ್ತು ಅಗತ್ಯ. ದುರದೃಷ್ಟವಶಾತ್ ಭಾರತದಲ್ಲಿ ಆರ್ಥಿಕ ಸುಧಾರಣೆಗಳ ಯುಗ ಆರಂಭವಾದಾಗಿನಿಂದಲೂ, ಕೃಷಿ ಕ್ಷೇತ್ರದಲ್ಲಿ ಯಾವ ಸುಧಾರಣೆಯೂ ಆಗಿಲ್ಲ ಎನ್ನುವುದು ವಾಸ್ತವ. ದೇಶದಲ್ಲಿ ಜಾಗತೀಕರಣ ಪ್ರಕ್ರಿಯೆ ಜಾರಿಯಲ್ಲಿದ್ದು, ಭಾರತದ ಕೃಷಿಕ್ಷೇತ್ರ ಶ್ರೀಮಂತ ದೇಶಗಳ ತೀವ್ರ ಪೈಪೋಟಿಯನ್ನು ಎದುರಿಸಲು ಸಮರ್ಥವಾಗಿಲ್ಲ. ಶ್ರೀಮಂತ ದೇಶಗಳ ಯಾಂತ್ರೀಕೃತ ಕೃಷಿಯಿಂದಾಗಿ ಉತ್ಪಾದನಾ ವೆಚ್ಚ ಕಡಿಮೆಯಾಗಿದ್ದು, ಇದನ್ನು ಸಾಧಿಸುವುದು ನಮಗೆ ಸಾಧ್ಯವಾಗಿಲ್ಲ. ಭಾರತೀಯ ಕೃಷಿಕ್ಷೇತ್ರ ಖಾಸಗಿ ಬಂಡವಾಳ ಹೂಡಿಕೆಗೆ ಅಪೇಕ್ಷಣೀಯ ಕ್ಷೇತ್ರವಾಗಿ ಬದಲಾಯಿಸುವ ನಿಟ್ಟಿನಲ್ಲಿ ಮಾತ್ರವಲ್ಲದೇ, ವಿದೇಶಿ ಪೈಪೋಟಿಯನ್ನು ಎದುರಿಸಲು ಭಾರತೀಯ ಕೃಷಿ ಕ್ಷೇತ್ರವನ್ನು ಸಜ್ಜುಗೊಳಿಸುವ ಅಗತ್ಯತೆಯೂ ಇದೆ. ಈ ನಿಟ್ಟಿನಲ್ಲಿ ಸರ್ಕಾರದ ಮಧ್ಯಪ್ರವೇಶ ಅನಿವಾರ್ಯ. ದೇಶದ ಕೃಷಿ ಕ್ಷೇತ್ರ ಬೆಳವಣಿಗೆ ಕುಂಠಿತವಾಗಲು ಕಾರಣವಾದ ಪ್ರಮುಖ ಅಂಶಗಳನ್ನು ಚರ್ಚಿಸೋಣ:

**ಎ. ಕಾರ್ಮಿಕ ಮಾರುಕಟ್ಟೆ ಬದ್ಧತೆ**

ಭಾರತ ಸರ್ಕಾರ 2000ನೇ ಇಸ್ವಿಯಲ್ಲೇ ದೇಶದಲ್ಲಿ ಗುತ್ತಿಗೆ ಕೃಷಿ ಮತ್ತು ಕಾರ್ಪೊರೇಟ್ ಕೃಷಿ ಕೈಗೊಳ್ಳಲು ಅನುಮತಿ ನೀಡಿತ್ತು. ಸರ್ಕಾರ ಈ ವೇಳೆ ಕಾರ್ಮಿಕ ಮಾರುಕಟ್ಟೆ ಸುಧಾರಣೆಗಳನ್ನೂ ಜಾರಿಗೊಳಿಸುವ ಆಶ್ವಾಸನೆ ನೀಡಿತ್ತು. ಆದರೆ ಇಂದು ಒಂದು ದಶಕ ಕಳೆದರೂ ಆರಂಭವಾಗಿಲ್ಲ. ದೊಡ್ಡ ಭಾರತೀಯ ಹಾಗೂ ಅಂತಾರಾಷ್ಟ್ರೀಯ ಕಾರ್ಪೊರೇಟ್ ಸಮೂಹಗಳು ಕೃಷಿ ವಲಯದಲ್ಲಿ ಗುತ್ತಿಗೆ ಕೃಷಿಗೆ ಅಥವಾ ಕಾರ್ಪೊರೇಟ್ ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡುವ ಆಸಕ್ತಿ ತೋರಿಸಿದ್ದವು. ಆದರೆ ಅಸಮರ್ಪಕ ಹಾಗೂ ಪುರೋಗಾಮಿಯಲ್ಲದ ಕಾರ್ಮಿಕ ಕಾನೂನುಗಳ ಪರಿಣಾಮವಾಗಿ ಹಿಂಜರಿದವು. ಈ ಕಾರಣದಿಂದ ಕೃಷಿಕ್ಷೇತ್ರಕ್ಕೆ ಇಂದಿಗೂ ದೊಡ್ಡ ಕಂಪನಿಗಳು ಭಾರತದಲ್ಲಿ ಆಸಕ್ತಿ ವಹಿಸಿಲ್ಲ ಎನ್ನುವುದು ವಾಸ್ತವ. ಕಾರ್ಪೊರೇಟ್ ಕಂಪನಿಗಳು ಇದಕ್ಕೆ ಕಾಯಂ ನೌಕರರನ್ನು ಇಟ್ಟುಕೊಳ್ಳದೇ, ಅಸಂಘಟಿತ ಕಾರ್ಮಿಕರ ಮೂಲಕವೇ ಕೃಷಿ ಮುನ್ನಡೆಸುವ ಹಿನ್ನೆಲೆಯಲ್ಲಿ ಭಾರತದ ಕಾರ್ಮಿಕ ಕಾನೂನುಗಳು ತಡೆಯಾಗಿ ಪರಿಣಮಿಸಿವೆ.

ಅಭಿವೃದ್ಧಿ ಹೊಂದಿದ ಮತ್ತು ಯಾಂತ್ರಿಕ ಕೃಷಿ ವಿಧಾನಗಳಲ್ಲಿ ಸಂಘಟಿತ ಕಾರ್ಮಿಕರನ್ನು ಹೊಂದುವುದು ಅಗತ್ಯ. ಇದನ್ನು ಪರಿಗಣಿಸಿದರೆ, ಕೃಷಿಕ್ಷೇತ್ರಕ್ಕೆ ಆಯಾ ಋತುಮಾನದಲ್ಲಷ್ಟೇ ಕಾರ್ಮಿಕರು ಬೇಕಾಗುತ್ತಾರೆ. ಆದ್ದರಿಂದ ಕಾರ್ಪೊರೇಟ್ ಕಂಪನಿಗಳು ಕೂಲಿಗಳನ್ನು ನಿಯೋಜಿಸಿಕೊಳ್ಳುವಲ್ಲಿ ವಿಭಿನ್ನ ತಂತ್ರ ಅನುಸರಿಸಬೇಕಾಗುತ್ತದೆ. ಅಂದರೆ ಭಾರತದ ಕಾರ್ಮಿಕ ಮಾರುಕಟ್ಟೆಯಲ್ಲೂ ಆ ಸಂದರ್ಭಕ್ಕೆ ತಕ್ಕಂತೆ ನೇಮಕ ಮಾಡಿಕೊಳ್ಳಲು ಅವಕಾಶವಾಗುವಂಥ ಕ್ರಮಗಳನ್ನು ಕೈಗೊಳ್ಳಬೇಕಿದೆ. ಇಂಥ ಕಾರ್ಮಿಕ ನೀತಿ ನಮ್ಮಲ್ಲಿ ಇಲ್ಲದಿರುವುದರಿಂದ ಕೃಷಿ ಕ್ಷೇತ್ರ ಮಾತ್ರವಲ್ಲ; ಕೈಗಾರಿಕಾ ಕ್ಷೇತ್ರಕ್ಕೂ ದೊಡ್ಡ ಹೊಡೆತವಾಗಿ ಪರಿಣಮಿಸಿದೆ.

ಉದಾಹರಣೆಗೆ ಮಾರುತಿ ಕಂಪನಿಯ ಮನೇಸರ್ ಘಟಕದಲ್ಲಿ ಉದ್ಭವಿಸಿದ ಉದ್ಯೋಗಿಗಳ ಸಮಸ್ಯೆ, ಮತ್ತು ಈಸ್ಟ್ ಅಂಡ್ ವೆಸ್ಟ್ ಏವಿಯೇಷನ್ ಕಂಪನಿ ಎದುರಿಸಿದ ವಿಮಾನಯಾನ ನೌಕರರ ಸಮಸ್ಯೆಗಳು ಇತ್ತೀಚಿನ ನಿದರ್ಶನಗಳು.

ಭಾರತದಲ್ಲಿ ಸಮರ್ಪಕ ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಿದರೆ, ಖಂಡಿತವಾಗಿಯೂ ಭಾರತದ ಕೃಷಿಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಕಷ್ಟಕರವಾಗದು. ವಿಶ್ವಬ್ಯಾಂಕಿನ ಮುಖ್ಯ ಅರ್ಥಶಾಸ್ತ್ರಜ್ಞರು ಕೂಡಾ ಇತ್ತೀಚೆಗೆ, ಕಾರ್ಮಿಕ ಕ್ಷೇತ್ರದಲ್ಲಿ ಭಾರತ ಸುಧಾರಣೆ ತರುವ ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ಭಾರತ ಸರ್ಕಾರದ ಹಣಕಾಸು ಸಚಿವಾಲಯದಲ್ಲಿ ಮುಖ್ಯ ಆರ್ಥಿಕ ಸಲಹೆಗಾರರಾಗಿರುವ ಕೌಶಿಕ್ ಬಸು ಈ ಸಲಹೆಯನ್ನು ಬಹಳ ಹಿಂದೆಯೇ ನೀಡಿದ್ದರು. ಇಂಥ ಕಾರ್ಮಿಕ ಸುಧಾರಣೆಗಳು ಭಾರತದ ಕೃಷಿಕ್ಷೇತ್ರದಲ್ಲಿ ಹುದುಗಿರುವ ಸಾಮರ್ಥ್ಯವನ್ನು ಹೊರಕ್ಕೆ ತರಲು ಪೂರಕವಾಗುತ್ತದೆ ಮಾತ್ರವಲ್ಲದೇ, ಕೃಷಿ ವಿಸ್ತರಣೆಗೆ ಕೂಡಾ ಅನುಕೂಲಕರ ವಾತಾವರಣ ಕಲ್ಪಿಸಿಕೊಡುತ್ತದೆ.

ಅಸಮರ್ಪಕ ಕಾರ್ಮಿಕ ಕಾನೂನುಗಳು ಭಾರತದಲ್ಲಿ ಕೈಗಾರಿಕಾ ವಿಸ್ತರಣೆ ತಡೆಗೂ ಮೂಲ ಕಾರಣ. ಇದು ರೈತರ ತಲಾದಾಯದ ಜತೆಗೆ ನೇರ ಸಂಬಂಧ ಹೊಂದಿದೆ. ಅಂದರೆ ಕಾರ್ಮಿಕ ನೀತಿ ಸುಧಾರಣೆಗಳು ಒಂದೆಡೆ ನೇರವಾಗಿ ಕೃಷಿಕ್ಷೇತ್ರಕ್ಕೆ ಬಂಡವಾಳ ಹೂಡಿಕೆ ಮತ್ತಿತರ ಲಾಭದಾಯಕ ಪ್ರಯೋಜನ ತಂದುಕೊಟ್ಟರೆ ಇನ್ನೊಂದೆಡೆ, ಕೃಷಿಕ್ಷೇತ್ರವನ್ನು ಅವಲಂಬಿಸಿರುವ ಹೆಚ್ಚುವರಿ ಕಾರ್ಮಿಕರು ಹೊಸದಾಗಿ ನಿರ್ಮಾಣವಾಗುವ ಕೈಗಾರಿಕೆಗಳಲ್ಲಿ ಉದ್ಯೋಗ ಪಡೆಯಬಹುದು. ಆದ್ದರಿಂದ ಭಾರತದಲ್ಲಿ ಕಾರ್ಮಿಕ ನೀತಿ ಸುಧಾರಣೆಗಳು ದೇಶದಲ್ಲಿ ಲಾಭದಾಯಕ ಉದ್ಯೋಗವಲ್ಲ ಎನಿಸಿಕೊಂಡ ಕೃಷಿಕ್ಷೇತ್ರಕ್ಕೆ ದುಪ್ಪಟ್ಟು ಪ್ರತಿಫಲವನ್ನು ತರಲಿವೆ.

—————————————

**ಟಿಪ್ಪಣಿ**

ಸಬ್ಸಿಡಿಗಳ ನೇರ ನಗದು ವರ್ಗಾವಣೆ ಇತ್ತೀಚೆಗೆ ಕೈಗೊಂಡ ಕ್ರಾಂತಿಕಾರಿಕ್ರಮವಾಗಿದ್ದು, ದೇಶದ 20ಜಿಲ್ಲೆಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ. ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ) ಹೆಸರಿನಲ್ಲಿ ಈ ಯೋಜನೆ ಆರಂಭಿಸಲಾಗಿದೆ. ಸರ್ಕಾರ ಕಲ್ಯಾಣ ಕಾರ್ಯಕ್ರಮದಡಿ ನೀಡುವ ಎಲ್ಲ ವಸ್ತುಗಳಿಗೂ ಒಂದೇ ದರವನ್ನು ನಿಗದಿಪಡಿಸಲು ಇದು ನೆರವಾಗಲಿದೆ. ನೇರ ಪ್ರಯೋಜನ ವರ್ಗಾವಣೆ ಯೋಜನೆಯನ್ನು ಆಹಾರಕ್ಷೇತ್ರದಲ್ಲಿ ಇನ್ನೂ ಜಾರಿಗೆ ತಂದಿಲ್ಲ. ಆದರೆ ಸದ್ಯದಲ್ಲೇ ಪಡಿತರ ವ್ಯವಸ್ಥೆ ಬದಲಾಗಿ, ಫಲಾನುಭವಿಗಳು ನೇರವಾಗಿ ಮುಕ್ತ ಮಾರುಕಟ್ಟೆಯಿಂದಲೇ ತಮಗೆ ಬೇಕಾದ ಆಹಾರಧಾನ್ಯವನ್ನು ಖರೀದಿಸಲು ಅನುವು ಮಾಡುವ ವ್ಯವಸ್ಥೆ ಜಾರಿಗೆ ಬರಲಿದೆ. ಈ ಉದ್ದೇಶಕ್ಕಾಗಿ ಇರುವ ನಿಯಂತ್ರಿತ ಮಾರುಕಟ್ಟೆಗಳು ಪಡಿತರ ವಿತರಣಾ ವ್ಯವಸ್ಥೆ ಜತೆಗೇ ನಿರ್ಮೂಲನಗೊಳ್ಳಲಿವೆ. ಅರ್ಹ ಫಲಾನುಭವಿಗಳಿಗೆ ಆಧಾರ್ ಸಂಖ್ಯೆ ಸಂಯೋಜಿತ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರಯೋಜನವನ್ನು ವರ್ಗಾವಣೆ ಮಾಡಲಾಗಯತ್ತದೆ. ಈ ಮೂಲಕ ಭಾರತ ಕೃಷಿ ಮಾರುಕಟ್ಟೆ ಕ್ಷೇತ್ರದಲ್ಲಿ ಯಶಸ್ವಿ ಸುಧಾರಣೆ ತರಬಹುದಾಗಿದೆ.

ಆದ್ದರಿಂದ ತುರ್ತು ಹಾಗೂ ಪ್ರಮುಖ ಸವಾಲು ಎಂದರೆ ಕೃಷಿಕ್ಷೇತ್ರದಲ್ಲಿ ಹೂಡಿಕೆಗೆ ಸಾಕಷ್ಟು ಬಂಡವಾಳವನ್ನು ಒದಗಿಸುವುದು. ಈ ಮೂಲಕ ಕೃಷಿವೃತ್ತಿಯನ್ನು ಖಂಡಿತವಾಗಿಯೂ ಲಾಭದಾಯಕವಾಗಿ ಮತ್ತು ಗೌರವಯುತ ಉದ್ಯೋಗವಾಗಿ ಬದಲಿಸಲು ಎಲ್ಲ ಅವಕಾಶಗಳೂ


www.shikarat.com

ಇವೆ. ಇದನ್ನು ಒಂದು ಬಾರಿ ಮಾಡಲು ಸಾಧ್ಯವಾದರೆ, ಇತರ ಅಂಶಗಳು ಸಹಜವಾಗಿಯೇ ಕಾರ್ಪೊರೇಟ್ ರೈತರ ಗಮನ ಸೆಳೆಯುತ್ತವೆ. ಹಾಗೂ ಅವರು ಅದರಲ್ಲಿ ವ್ಯಾಪಾರಿ ತರ್ಕವನ್ನು ವಿವೇಚಿಸಿ ಅಗತ್ಯ ನಿರ್ಧಾರ ಕೈಗೊಳ್ಳುತ್ತಾರೆ.

**ಗಮನಿಸಬೇಕಾದ ಇತರ ಕ್ಷೇತ್ರಗಳು**

ಕೃಷಿಕ್ಷೇತ್ರದಲ್ಲಿ ಪ್ರಮುಖವಾದ ಒಂದಕ್ಕೊಂದು ಸಂಪರ್ಕ ಹೊಂದಿರುವ ಇತರ ಸಮಸ್ಯೆಗಳ ಬಗ್ಗೆಯೂ ಸರ್ಕಾರ ಗಮನ ಹರಿಸಬೇಕಾಗಿದೆ. ಉದಾಹರಣೆಗೆ:

1. ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಂಶಗಳಿಗೆ ಒತ್ತು ನೀಡುವ ಕೃಷಿನೀತಿಯನ್ನು ಜಾರಿಗೊಳಿಸುವುದು. ವಾಣಿಜ್ಯೀಕರಣದ ಹಿನ್ನೆಲೆಯಲ್ಲಿ ಮತ್ತು ಖಾಸಗಿ ವಲಯ ಕೃಷಿಕ್ಷೇತ್ರಕ್ಕೆ ಲಗ್ಗೆ ಇಡುವ ಹಿನ್ನೆಲೆಯಲ್ಲಿ ಇದು ಇದು ಪಕ್ಷಪಾತದ ಕ್ರಮವಾಗಬಹುದು.
2. ಹವಾಮಾನ ಸಂಬಂಧಿ ಅನಿಶ್ಚಿತತೆಗಳು ಮತ್ತು ಹವಾಮಾನ ಬದಲಾವಣೆ ಅಪಾಯ.
3. ಸಮರ್ಪಕ ಮಾರುಕಟ್ಟೆ- ಆಧರಿತ ವಿಮಾ ಚೌಕಟ್ಟನ್ನು ಅಭಿವೃದ್ಧಿಪಡಿಸುವುದು.
4. ಧೀರ್ಘಾವಧಿ ಉದ್ಯೋಗ ಸೃಷ್ಟಿ ಯೋಜನೆಯನ್ನು ಜಾರಿಗೊಳಿಸುವುದು. ಇದು ಬಡತನ ರೇಖೆಗಿಂತ ಕೆಳಗಿರುವವರಿಗೆ ಮತ್ತು ನಿರುದ್ಯೋಗಿಗಳಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವುದು. ಅಂದರೆ ಈಗ ಕೃಷಿಕ್ಷೇತ್ರವನ್ನೇ ನೆಚ್ಚಿಕೊಂಡಿರುವ ಅಧಿಕ ಮಂದಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು.

**ಉಪಸಂಹಾರ**

ಸಮಗ್ರವಾಗಿ, ಎರಡನೇ ಹಸಿರು ಕ್ರಾಂತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದಿನ ಕಾರ್ಯಯೋಜನೆಯನ್ನು ರೂಪಿಸುವ ಅಗತ್ಯವಿದೆ. ಇದಕ್ಕೆ ತಕ್ಕುದಾದ ಕೃತಿ ನೀತಿ ಇಂದಿನ ತುರ್ತು ಅಗತ್ಯ. ಅದು ಭಾರತದ ಕೃಷಿ ಕ್ಷೇತ್ರವನ್ನು ಭಾದಿಸುತ್ತಿರುವ ಎಲ್ಲ ಸಮಸ್ಯೆಗಳನ್ನೂ ಗಮನದಲ್ಲಿಟ್ಟುಕೊಂಡು ರೂಪಿಸಿದ ನೀತಿಯಾಗಿರಬೇಕು. ಅಂಥ ಪ್ರಮುಖ ಅಂಶಗಳೆಂದರೆ:

1. ಜೈವಿಕ ಹಸ್ತಕ್ಷೇಪದ ಮೂಲಕ ಕೃಷಿ ಉತ್ಪಾದನೆಯ ಸುಸ್ಥಿರ ಅಭಿವೃದ್ಧಿ.
2. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ
3. ಸಾಲ, ದಾಸ್ತಾನು, ಮಾರುಕಟ್ಟೆ ಹಾಗೂ ವಿಮೆ ಇತ್ಯಾದಿ.

ಬಹುಬ್ರಾಂಡ್ ಚಿಲ್ಲರೆ ಮಾರುಕಟ್ಟೆ ಕ್ಷೇತ್ರದಲ್ಲಿ ನೇರ ವಿದೇಶಿ ಬಂಡವಾಳ ಹೂಡಿಕೆಗೆ ಸರ್ಕಾರ ಕೈಗೊಂಡಿರುವ ನಿರ್ಧಾರ ಈ ನಿಟ್ಟಿನಲ್ಲಿ ಸರಿಯಾದ ಹೆಜ್ಜೆ. ಭಾರತದ ಕೃಷಿಕ್ಷೇತ್ರ ಇಂದಿಗೂ ದೇಶದ ಆರ್ಥಿಕತೆಯ ಅಸಂಘಟಿತ ಕ್ಷೇತ್ರ. ಇದು ಬಂಡವಾಳವನ್ನಷ್ಟೇ ನಿರೀಕ್ಷಿಸುವುದಲ್ಲದೇ, ತಜ್ಞ ಅನುಭವ ಹಾಗೂ ಉದ್ಯಮಶೀಲರನ್ನು ಕೂಡಾ ನಿರೀಕ್ಷಿಸುತ್ತಿದೆ. ವಿದೇಶಿ ಹೂಡಿಕೆದಾರರು ಇದಕ್ಕೆ ಅಗತ್ಯವಾದ ಉದ್ಯಮಶೀಲತೆಯನ್ನು ತಂದುಕೊಡಬಲ್ಲರು. ಅದಾಗ್ಯೂ ರಾತ್ರೋರಾತ್ರಿ ಪವಾಡಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ಅದಕ್ಕೆ ಸಮಯಾವಕಾಶ ಬೇಕಾಗಬಹುದು. ಅಂತೆಯೇ ಭಾರತದ ವಿದ್ಯುತ್ ಕ್ಷೇತ್ರಕ್ಕೆ ಎನ್ರಾನ್ ಪ್ರವೇಶಿಸಿದ್ದು ದೊಡ್ಡ ಸುದ್ದಿಯಾಯಿತು. ಅದಾಗ್ಯೂ ಎನ್ರಾನ್‌ನ ಎಫ್‌ಡಿಐ ಹೂಡಿಕೆ ಏನಾಯಿತು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ವಿದ್ಯುತ್ ಕ್ಷೇತ್ರದಲ್ಲಿ ಸಕಾಲಿಕ ಸುಧಾರಣೆಗಳನ್ನು ಜಾರಿಗೊಳಿಸದ ಹಿನ್ನೆಲೆಯಲ್ಲಿ ದೇಶೀಯ ಹಾಗೂ ವಿದೇಶಿ ಹೂಡಿಕೆದಾರರನ್ನು ಆ ಕ್ಷೇತ್ರ ಕಳೆದುಕೊಂಡಿತು. ಆದರೆ ಎಲ್ಲ ಹೂಡಿಕೆದಾರರೂ ಯಾವುದೇ ಕ್ಷೇತ್ರವನ್ನು ಪ್ರವೇಶಿಸುವುದಾದರೂ, ಗಳಿಕೆಯ ದೃಷ್ಟಿಕೋನವನ್ನೇ ನೋಡುತ್ತಾರೆ ಎನ್ನುವುದು ವಾಸ್ತವ.

## 16. ಬದಲಾಗುತ್ತಿರುವ ಪುರುಷರ ಹಾಗೂ ಮಹಿಳೆಯ ಪಾತ್ರ

ಇದರಲ್ಲಿ ಪ್ರಮುಖವಾಗಿ ಅಭಿವೃದ್ಧಿಪಡಿಸಬೇಕಾದ ಅಂಶಗಳೆಂದರೆ:

1. ಪುರುಷ ಹಾಗೂ ಮಹಿಳೆಯ ಜವಾಬ್ದಾರಿಗಳ ಪ್ರಾಚೀನ ಪರಿಕಲ್ಪನೆ.
2. ಪಾತ್ರ ಬದಲಾಗಲು ಕಾರಣವಾದ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು
3. ಕೂಡುಕುಟುಂಬ ವ್ಯವಸ್ಥೆ ನಿಧಾನವಾಗಿ ವಿನಾಶದ ಅಂಚು ತಲುಪುತ್ತಿರುವುದು.
4. ಪಾತ್ರ ಬದಲಾವಣೆಯ ಪ್ರಕ್ರಿಯೆ ಸುಲಭವಲ್ಲ
5. ಬದಲಾವಣೆಯ ಅಗತ್ಯತೆಗಳು ಸ್ಥಿತಿಸ್ಥಾಪಕತ್ವಕ್ಕೆ ಕಾರಣವಾಗಿವೆ.
6. ಇಂಥ ಸ್ಥಿತಿಸ್ಥಾಪಕತ್ವ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅನಿವಾರ್ಯ.
7. ಇಂಥ ಬದಲಾಗುತ್ತಿರುವ ಪಾತ್ರವನ್ನು ಒಪ್ಪಿಕೊಳ್ಳಬೇಕು ಮತ್ತು ಉತ್ತೇಜಿಸಬೇಕು.

ಸಾಮಾಜಿಕ ಬದಲಾವಣೆ ಸಾರ್ವತ್ರಿಕ ಅಂಶ. ಇದು ಯಾವುದೇ ಸಮಾಜದ ಅವಿಭಾಜ್ಯ ಅಂಗ. ಒಂದು ನಿರ್ದಿಷ್ಟ ಕ್ಷೇತ್ರದ ಬದಲಾವಣೆ ಸಮಾಜದ ಇತರ ಕ್ಷೇತ್ರಗಳ ಮೇಲೆಯೂ ಸಹಜವಾಗಿಯೇ ಪ್ರಭಾವ ಬೀರುತ್ತದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಪುರುಷ ಹಾಗೂ ಮಹಿಳೆಯರು ಆಧುನಿಕ ಜಗತ್ತಿನಲ್ಲಿ ನಿರ್ವಹಿಸುವ ಪಾತ್ರದಲ್ಲಿ ಆಗಿರುವ ಬದಲಾವಣೆ ಮತ್ತು ಈ ವಿಚಾರದಲ್ಲಿ ಕಂಡುಬರುತ್ತಿರುವ ಸ್ಥಿತಿಸ್ಥಾಪಕತ್ವ.

ಪ್ರಾಚೀನ ಸಮಾಜದಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ನಿರ್ದಿಷ್ಟ ಹಾಗೂ ಸಂಕುಚಿತ ಪಾತ್ರಗಳನ್ನು ನೀಡಲಾಗಿತ್ತು. ಪ್ರತಿಯೊಂದು ಗುಣಲಕ್ಷಣಗಳು ಹಾಗೂ ಇತರ ಅಂಶಗಳನ್ನು ಪುರುಷರಿಗೆ ಸೀಮಿತವಾದ ಹಾಗೂ ಮಹಿಳೆಯರಿಗೆ ಸೀಮಿತವಾದ ಲಕ್ಷಣಗಳು


www.shikarat.com